ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 24
ಜೂನ್ 15, 2003 ಬೆಲೆ ರೂ. 3.00



ಚಿತ್ರಾವತಿ ವಿವಾದ:
ರಾಜಕೀಯ ದುರುದ್ದೇಶ ಮೇಲುಗೈ




ಮಾಯಾವತಿ ಸರ್ಕಾರ:
ಅಧಃಪತನದ ಆಡಳಿತ

ವಿದ್ಯುತ್ ಖಾಸಗೀಕರಣ:
ಬೆನ್ನಟ್ಟಿರುವ ಲೂಟಿಖೋರರು



ಗಂಗಾವತಿ:
ದಲಿತರ ಮೇಲೆ ಧಣಿಗಳ ಹಲ್ಲೆ!

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

30



....ಆಪರೇಷನ್ ಅಸ್ಸೈಲಮ್' ಎಂಬ ಕುಹಕ ಯೋಜನೆಯನ್ನು ಭಾರತೀಯ ಜನತೆ ಮುಂದೆ ತೆರೆದಿಟ್ಟು ಅನುಮಪ ಸೇವೆ ಸಲ್ಲಿಸಿದ ಕಮ್ಯುನಿಸ್ಟ್ ಪಕ್ಷ ಚಕ್ಲಾದಲ್ಲಿನ ಸೇನೆ ಘಟಕ ಬರ್ಖಾಸ್ತು, ಚಾವುಸದಲ್ಲಿನ ವೈಮಾನಿಕ ಸರಬರಾಜು ಘಟಕಕ್ಕೆ ನೇಮಕಗೊಂಡ ಮೆ|| ಜಯಪಾಲ್ ಸಿಂಗ್, ಇಬ್ಬರು ಭಾರತೀಯ ಅಧಿಕಾರಿಗಳ ರೋಷವನ್ನು ಬಡಿದೆಬ್ಬಿಸಿದ ಬಿಳಿಯ ಅಧಿಕಾರಿಗಳ ಭಾರತ ವಿರೋಧಿ ನಿಲುವು ಮತ್ತು ರಾಷ್ಟ್ರೀಯ ಸನ್ನಿವೇಶದಲ್ಲಿ ಉಂಟಾದ ಬಿಕ್ಕಟ್ಟು ಈ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಕಾಂಗ್ರೆಸ್‌ಗೆ ಕಮ್ಯುನಿಸ್ಟರು ಅಧಿಕಾರಕ್ಕೆ ಬರುವ ಭೀತಿ

ಕಲ್ಕತ್ತದಲ್ಲಿ ಮೇಜರ್ ಜನರಲ್ ಎ.ಸಿ. ಚಟರ್ಜಿಯವರನ್ನು ಸಂಪರ್ಕಿಸುವಂತೆ ಸಂಘಟನೆ ನನಗೆ ಸೂಚಿಸಿತು. ಚೌ ಬಜಾರ್‌ನಲ್ಲಿರುವ ಐ.ಎನ್.ಎ ಪರಿಹಾರ ಸಮಿತಿ ಕೇಂದ್ರ ಕಛೇರಿಯಲ್ಲಿ ನಾನು ತಕ್ಷಣವೇ ಅವರೊಂದಿಗೆ ಸಂಪರ್ಕ ಸಾಧಿಸಿದೆ.

ಯುದ್ಧ ಪೂರ್ವ ದಿನಗಳಲ್ಲಿ ಬಂಗಾಳ ಪ್ರಾಂತ್ಯದಲ್ಲಿ ವೈದ್ಯಕೀಯ ಸೇವೆಗಳ ನಿರ್ದೇಶಕರಾಗಿದ್ದ ಜನರಲ್ ಚಟರ್ಜಿ ನೇತಾಜಿ ರೂಪಿಸಿದ್ದ ತಾತ್ಕಾಲಿಕ ಸರಕಾರದಲ್ಲಿ ಉನ್ನತ ಸ್ಥಾನಕ್ಕೇರಿದ್ದರು. ಭಾರತಕ್ಕೆ ಮರಳಿದ ನಂತರ ಐ.ಎನ್.ಎ. ಅಧಿಕಾರಿಗಳ ಸಂಘದಲ್ಲಿ ಉನ್ನತ ಸ್ಥಾನ ಹೊಂದಿದ್ದರು.

ಖಾಕಿ ಬಟ್ಟೆ ಧರಿಸಿದ್ದ ವೃದ್ಧ ಚಟರ್ಜಿ ನನ್ನನ್ನು ಸೌಹಾರ್ದವಾಗಿ ಬರಮಾಡಿಕೊಂಡರು. ಕೆಲವು ವಿಷಯಗಳ ಬಗ್ಗೆ ಅಂತರಂಗದಲ್ಲಿ ಚರ್ಚಿಸಬೇಕೆಂದು ನಾನು ಮನವಿ ಮಾಡಿದಾಗ ಅವರು ತಮ್ಮ ಆರ್ಡರ್ಲಿಯನ್ನು ಊಟಕ್ಕೆ ಕಳಿಸಿ ನನ್ನ ಜತೆ ಚರ್ಚೆಗೆ ಕೂತರು. ನಮ್ಮ ಬಂಡಾಯದ ಯೋಜನೆಯುಳ್ಳ ಹಾಗೂ ಆ ವೇಳೆಯ ರಾಜಕೀಯ ಪರಿಸ್ಥಿತಿ ಕುರಿತ ನಮ್ಮ ತಿಳುವಳಿಕೆ ಹೊಂದಿದ್ದ ದಾಖಲೆ ಪತ್ರವನ್ನು ನಾನು ಹೊರಗೆ ತೆಗೆದೆ. ಬ್ರಿಟಿಷ್ ಸರಕಾರ ಮತ್ತೆ ಮೇಲುಗೈ ಸಾಧಿಸಿ 1942ರಲ್ಲಿ ಮಾಡಿದಂತೆ ರಾಷ್ಟ್ರೀಯ ಆಂದೋಲನದ ವಿರುದ್ಧ ಆಕ್ರಮಣ ನಡೆಸುತ್ತದೆ ಎಂಬುದು ನಮ್ಮೆಲ್ಲರ ಅಂದಾಜಾಗಿತ್ತು. ನಮ್ಮ ರಾಷ್ಟ್ರೀಯ ಶಕ್ತಿಗಳು ಇನ್ನಷ್ಟು ಛಿದ್ರಗೊಳ್ಳುವುದನ್ನು ಮಾತ್ರ ಸಾಮ್ರಾಜ್ಯಶಾಹಿಗಳು ಕಾಯುತ್ತಿದ್ದರು.

> ‘ಆಪರೇಷನ್ ಅಸ್ಸೈಲಮ್’ ಯೋಜನೆಯನ್ನು ಭಂಗಗೊಳಿಸಲು ನಮ್ಮ ಸಂಘಟನೆ ಯೋಜಿಸಿತು. ವೈಮಾನಿಕ ಸರಬರಾಜು ಘಟಕಗಳನ್ನು ಹಾಳುಮಾಡುವುದು, ಪ್ಯಾರಾಶೂಟ್‌ಗಳಿಗೆ ತೂತು ಮಾಡುವುದು, ಇತರ ಸಲಕರಣೆ ಡಿಪೋಗಳಿಗೆ ಬೆಂಕಿ ಹಚ್ಚುವುದು ನಮ್ಮ ಯೋಜನೆಯಾಗಿತ್ತು.

“ಇಂಥ ಒಂದು ಸಂದರ್ಭದಲ್ಲಿ ಮಾತ್ರವೇ ನಮ್ಮೊಂದಿಗೆ ಕೈಜೋಡಿಸಿ ಭಾರತದಲ್ಲಿ ಐಎನ್.ಎ. ಹೊಂದಿರುವ ಎಲ್ಲಾ ಸಂಪನ್ಮೂಲಗಳೊಂದಿಗೆ ನಮಗೆ ನೆರವು ನೀಡಿ ಎಂದು ನಮ್ಮ ಸಂಘಟನೆ ನಿಮಗೆ ಕರೆ ನೀಡುತ್ತದೆ ಎಂದು ನಾನು ಚಟರ್ಜಿಯವರಿಗೆ ಹೇಳಿದೆ.

ಶೂರ ಜನರಲ್ ನಾವು ಅಗಲುವಾಗ ನನ್ನ ಕೈಯನ್ನು ಆತ್ಮೀಯವಾಗಿ ಕುಲುಕಿದರು. “ದಯವಿಟ್ಟು ಆಲಿಪುರದ ನನ್ನ ಮನೆಗೆ ಬನ್ನಿ. ಅಲ್ಲಿ ವಿಷಯಗಳನ್ನು ಚರ್ಚಿಸೋಣ. ವಿಷಯಗಳ ಬಗ್ಗೆ ಯೋಚಿಸಲು ಹಾಗೂ ಇತರ ಸಹೋದ್ಯೋಗಿಗಳ ಜತೆ ಸಮಾಲೋಚಿಸಲು ಕನಿಷ್ಟ ಒಂದು ವಾರವಾದರೂ ಬೇಕು. ಓಹ್, ಹೌದು ನೆನಪಿಡಿ, ನನ್ನ ಮನೆ ಮೇಲೆ ಹದ್ದಿನ ಕಣ್ಣಿಡಲಾಗಿದೆ ಎನ್ನುವುದನ್ನು ಮರೆಯಬೇಡಿ” ಎಂದು ಅವರು ನನಗೆ ಹೇಳಿದರು.

ಒಂದು ವಾರದ ನಂತರ ನಾನು ಅವರ ಮನೆಗೆ ಹೋದೆ.

ಒಂದು ವಾರದ ನಂತರ ಒಂದು ದಿನ ಸಂಜೆ ನಾನು ಸಾದಾ ಬಟ್ಟೆ ತೊಟ್ಟು ಜನರಲ್ ಎ.ಸಿ.ಚಟರ್ಜಿಯವರ ಮನೆಗೆ ಹೋದೆ. ಅವರ ಪತ್ನಿ ನನ್ನನ್ನು ಜನರಲ್‌ರ ಅಧ್ಯಯನದ ಕೊಠಡಿಗೆ ಕರೆದೊಯ್ದರು. ಕೆಲವೇ ನಿಮಿಷಗಳಲ್ಲಿ ಖಾಕಿ ಬಟ್ಟೆ ತೊಟ್ಟಿದ್ದ ಜನರಲ್ ಬಂದರು. ನಾವು ಗಂಭೀರ ಚರ್ಚೆಯಲ್ಲಿ ಮುಳುಗಿದೆವು.

ಅವರು ಅಂದಿನ ರಾಜಕೀಯ ಪರಿಸ್ಥಿತಿಯನ್ನು ಕೆಳಗಿನಂತೆ ವಿಶ್ಲೇಷಿಸಿದರು.

‘1942 ರ ರೀತಿಯಲ್ಲೇ ಬ್ರಿಟೀಷರು ಆಕ್ರಮಣ ನಡೆಸಲಿದ್ದಾರೆಂಬ ನಿಮ್ಮ ವಾದವನ್ನು ನಾನು ಒಪ್ಪುತ್ತೇನೆ. ಈಗ ನಡೆಯುತ್ತಿರುವ ತೀವ್ರ ಸಮಾಲೋಚನೆಗಳು ಕೋಮು ಘರ್ಷಣೆಗಳಾಗಿ ಪರಿವರ್ತನೆಗೊಳ್ಳುವವರೆಗೆ ಅವರು ಇನ್ನೂ ಸ್ವಲ್ಪ ಸಮಯ ಕಾಯುತ್ತಾರೆ. ಆಗ ಅವರು ಜಿನ್ನಾ ಮತ್ತು ಕಾಂಗ್ರೆಸ್ ಎರಡನ್ನು ‘ಮಟ್ಟ ಹಾಕುತ್ತಾರೆ’ ಆದರೆ ಕೋಮು ಉನ್ಮಾದ ನಿಂತ ಮೇಲೆ ಭಾರತದ ಜನರು ಮತ್ತು ಸಶಸ್ತ್ರ ಪಡೆಗಳು ಒಗ್ಗಟ್ಟಿನಿಂದ ಇರುವುದಿಲ್ಲ. ಬ್ರಿಟೀಷರು ದಾಳಿಯನ್ನು ಆರಂಭಿಸುವ ಮುನ್ನ ಸಶಸ್ತ್ರ ಪಡೆಗಳ ಒಗ್ಗಟ್ಟನ್ನು ಒಡೆದುಹೋಗುವಂತೆ ನೋಡಿಕೊಳ್ಳುತ್ತಾರೆ.

“ನನ್ನ ಕಾಂಗ್ರೆಸ್ಸನ್ನು ನೆಚ್ಚಿಕೊಳ್ಳುವುದರಿಂದ ಉಪಯೋಗವಿಲ್ಲ. ಬಂಡಾಯವೆಂದರೆ ಅವರು ಹೆದರಿ ಸಾಯುತ್ತಾರೆ. ದೇಶದಲ್ಲಿ ಸಶಸ್ತ್ರ ಬಂಡಾಯ ನಡೆದರೆ ಕಮ್ಯುನಿಸ್ಟರು ಅಧಿಕಾರಕ್ಕೆ ಬರುತ್ತಾರೆಂದು ಅವರು ಬಹಿರಂಗವಾಗಿಯೇ ಹೇಳುತ್ತಾರೆ. ನಾನೇನೂ ಕಮ್ಯುನಿಸ್ಟನಲ್ಲ. ಕಮ್ಯುನಿಸ್ಟರಿಗೆ ಸೈನ್ಯದಲ್ಲಿ ಹೆಚ್ಚು ಪ್ರಭಾವವಿದೆಯೆಂದು ನಾನು ಭಾವಿಸುವುದಿಲ್ಲ. ಆದರೆ, ಕೋಮುವಾದದ ಆಧಾರದಲ್ಲಿ ದೇಶ ಒಡೆದು ಹೋಗುವುದನ್ನು ತಪ್ಪಿಸಬೇಕಾದರೆ, ಬ್ರಿಟೀಷರನ್ನು ಸಮುದ್ರಕ್ಕೆ ಎಸೆಯಬೇಕಾದರೆ ಸಶಸ್ತ್ರ ಬಂಡಾಯ ನಡೆಯಬೇಕೆಂಬ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಈ ಹಂತದಲ್ಲಿ ಗಾಂಧೀಜಿ ಇದನ್ನು ವಿರೋಧಿಸುತ್ತಾರೆ. ಮುಂದಿನ ವಿದ್ಯಮಾನಗಳ ವೇಳೆ, ಬ್ರಿಟೀಷರು ಅಪ್ರಾಮಾಣಿಕರೆಂದು ಗಾಂಧೀಜಿಗೆ ಮನವರಿಕೆಯಾದರೆ ಅವರು ಅಹಿಂಸಾ ಚಳುವಳಿಗೆ ಕರೆ ಕೊಡಬಹುದು ಎಂಬುದು ಉಳಿದಿರುವ ಏಕೈಕ ಆಶಾಕಿರಣವಾಗಿದೆ. ಅದನ್ನು ಬಂಡಾಯವಾಗಿ ಪರಿವರ್ತಿಸುವ ಅವಕಾಶವನ್ನಾಗಿ ನಾವು ಬಳಸಿಕೊಳ್ಳಬೇಕು.

“ಐಎನ್‌ಎ ಒಡೆದ ಮನೆಯಾಗಿದೆ. ಆದರೆ ಸಾವಿರಾರು ಸೈನಿಕರು ಇನ್ನೂ ಸೆರೆಮನೆಗಳಲ್ಲಿದ್ದಾರೆ. ಸೇನೆಯ ಘಟಕಗಳಲ್ಲಿರುವವರನ್ನು ಪರೀಕ್ಷಿಸಲಾಗುತ್ತಿದೆ. ಆದರ ಕೆಲವು ಜನರಲ್‌ಗಳು ಸಮಯಸಾಧಕತನ ತೋರುತ್ತಿದ್ದಾರೆ; ನಮ್ಮ ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕಳೆದುಹೋಗಿರುವ ತಮ್ಮ ಕೆಲಸ ಮರಳಿ ದಕ್ಕೀತೆಂಬ ಆಶೆಯಿಂದ ಅವರು ಕಾಂಗ್ರೆಸ್‌ಗೆ ಜೋತುಬಿದ್ದಿದ್ದಾರೆ. ಸೈನಿಕರಿಂದ ಐಎನ್‌ಎ ನಾಯಕತ್ವವನ್ನು ಪ್ರತ್ಯೇಕಗೊಳಿಸಲು ಕಾಂಗ್ರೆಸ್ಸಿಗರು ಪ್ರಯತ್ನಿಸುತ್ತಿದ್ದಾರೆ. ಒಂದು ಸಂಘಟನೆಯಾಗಿ ಕೆಲಸ ಮಾಡದಂತೆ ಅವರು ನಮಗೆ ಸಲಹೆ ಮಾಡಿದ್ದಾರೆ, ಆದರೆ ಅವರ ಸ್ವಯಂಸೇವಕ ಪಡೆಯೊಂದಿಗೆ ವಿಲೀನಗೊಳ್ಳುವಂತೆ ಸೂಚಿಸಿದ್ದಾರೆ. ಘೋಷಣೆಗಳ ಕಲರವದ ನಡುವೆ ನೆರವಾಗುವಂಥ ಯಾವುದೇ ಸಾಕಷ್ಟು ಕೆಲಸ ನಡೆದಿಲ್ಲ. ಅವರಿಗೆ ನಮ್ಮ ಬಗ್ಗೆಯೂ ಭಯವಿದೆ”.

“ಏನೇ ಆಗಲಿ, ಈಗ ಭಾರತದಲ್ಲಿರುವ ಐಎನ್‌ಎ ಯ ದೊಡ್ಡ ಭಾಗ ಬಂಡಾಯದಲ್ಲಿ ಸೇರಲಿದೆ. ನಾನೂ ಇತರ ಕೆಲವು ಪ್ರಮುಖ ಸಹೋದ್ಯೋಗಿಗಳೊಂದಿಗೆ ನಿಮ್ಮ ಜತೆ ಇರುತ್ತೇನೆ. ನಿಮ್ಮ ಸಿದ್ಧತೆಗಳನ್ನು ಮುಂದುವರೆಸಿ” ಎಂದು ಜನರಲ್ ಚಟರ್ಜಿ ಹೇಳಿದರು.

ಜನರಲ್ ಸಹಾಯಹಸ್ತ

ಅವಾಗಿನಿಂದ, ಆಲಿಪಾರದಲ್ಲಿನ ಜನರಲ್‌ನ ಮನೆ ಸಶಸ್ತ್ರ ಪಡೆಗಳ ಹೊರಗಿನ ನಮ್ಮ ಚಟುವಟಿಕೆಗಳ ಮುಖ್ಯ ಕೇಂದ್ರವಾಯಿತು. ಅಗತ್ಯಬಿದ್ದಾಗಲೆಲ್ಲ ನೆರವು ಹಾಗೂ ಸಲಹೆಗಾಗಿ ಅವರತ್ತ ನೋಡಿದೆವು. ಜನರಲ್ ಚಟರ್ಜಿ ತಕ್ಷಣವೇ ನಮಗೆ ಎಲ್ಲವನ್ನೂ ಒದಗಿಸತೊಡಗಿದರು.

1946 ಅಗಸ್ಟ್ 15 ರಂದು ಪೂರ್ಣವಾಗಿ ಕಾಂಗ್ರೆಸ್ ಪಕ್ಷವೊಂದೇ ಮಧ್ಯಂತರ ಸರಕಾರವನ್ನು ರಚಿಸಿತು. ಆ ರೀತಿ ಆಗುವಂತೆ ಬ್ರಿಟೀಷರು ವ್ಯವಸ್ಥೆ ಮಾಡಿದ್ದರು. ಸ್ವಲ್ಪ ದಿನಗಳ ಕಾಲ ಮುಸ್ಲಿಂ ಲೀಗ್ ಇಲ್ಲದ ಮಧ್ಯಂತರ ಸರಕಾರವನ್ನು ರಚಿಸಿದರೆ ಜಿನ್ನಾರ ಕೈ ಬಲಗೊಳ್ಳುತ್ತದೆ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಅವರು ತಿರುಗಿಬಿದ್ದು ಭಾರತದ ಮುಸ್ಲೀಮರಿಗೆ ಈ ರೀತಿ ಹೇಳುತ್ತಾರೆ.

“ನೋಡಿ ಬಂಧುಗಳೇ, ನಾನು ನಿಮಗೆ ಹೀಗೆ ಆಗುತ್ತದೆಂದು ಹೇಳಿದ್ದೆ. ನಿಮ್ಮನ್ನು ರಾಜಕೀಯವಾಗಿ ಹಾಗೂ ದೈಹಿಕವಾಗಿ ಮುಗಿಸಲು ಅವರು ಪಣ ತೊಟ್ಟಿದ್ದಾರೆ.”

(ಮುಂದುವರಿಯುವುದು)

ಜೂನ್ 15 ರಿಂದ ಜುಲೈ 1 ರವರೆಗೆ

ಐಕ್ಯರಂಗ ಪ್ರಸಾರ ಮಾಸ

ದುಡಿವ ಜನರ ಪ್ರಾಣ ಮಿತ್ರ ಐಕ್ಯರಂಗ ಪತ್ರಿಕೆಯನ್ನು ಜನರ ನಡುವೆ ವ್ಯಾಪಕವಾಗಿ ಕೊಂಡೊಯ್ಯಬೇಕಿದೆ. ಪುಟಪುಟಗಳಲ್ಲಿಯೂ ತುಂಬಿ ತೊನೆಯುವ ವಿಚಾರಗಳ ಅರಿವು ವ್ಯಾಪಕವಾಗಿ ಜನತೆಯನ್ನು ತಲುಪಬೇಕಿದೆ. ಅವರನ್ನು ಸಮಕಾಲೀನ ಸವಾಲುಗಳನ್ನೆದುರಿಸಲು ಸಜ್ಜುಗೊಳಿಸಬೇಕಿದೆ.

ಈ ದಿಶೆಯಲ್ಲಿ ವಿಶೇಷ ಯತ್ನದ ಮೂಲಕ ಪ್ರಸಾರವನ್ನು ಹೆಚ್ಚಿಸಬೇಕಿದೆ. ಅಜೀವ ಚಂದಾ, ವಾರ್ಷಿಕ ಚಂದಾಗಳು ಮತ್ತು ಹೊಸ ಏಜೆನ್ಸಿ ಮೂಲಕ ಈ ಗುರಿಯನ್ನು ತಲುಪಬೇಕಿದೆ. ಅದಕ್ಕೆಂದೇ ರಾಜ್ಯದಾದ್ಯಂತ ವಿಶೇಷ ತಯಾರಿಗಳೂ ನಡೆದಿವೆ. ಗೋಡೆಬರಹ, ಪೋಸ್ಟರ್ಸ್ ಲಗತ್ತಿಸಿ, ಜನಮನ ಹೊಗಬೇಕಿದೆ.

ಜೂನ್ 15 ರಂದು ಪ್ರಸಾರಾಂದೋಲನ ಆರಂಭಗೊಳ್ಳುವುದು. ಸಮಾರೋಪ ಜುಲೈ 1 ರಂದು. ಈ ದಿನ ನೆಚ್ಚಿನ ಸಂಗಾತಿ ಕಾಂ. ಸೂರಿ ನಮ್ಮೆಲ್ಲರನ್ನು ಅಗಲಿದ ದಿನ. ದುಡಿವ ಜನ ಓದಲೇಬೇಕೆಂದು ಒತ್ತಾಯಿಸುತ್ತಿದ್ದ, ಪತ್ರಿಕೆಯ ಬೆಳವಣಿಗೆಗೆ ಪ್ರತಿಹಂತದಲ್ಲಿಯೂ ಕೈಜೋಡಿಸಿ ಬೆಳೆಸಿದ, ಪತ್ರಿಕೆಯ ಪ್ರಕಾಶಕರೂ ಆಗಿದ್ದ, ಅಗಲಿದ ಹಿರಿಯ ಸಂಗಾತಿ ಸೂರಿಗೆ ಸೂಕ್ತ ಶ್ರದ್ಧಾಂಜಲಿ ಸಲ್ಲಿಸೋಣ.

ಬನ್ನಿ ನೀವೂ ಕೈ ಜೋಡಿಸಿ
ಪ್ರಸಾರಾಂದೋಲನ ಯಶಸ್ವಿಗೊಳಿಸಿ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜೂನ್ 12, 2003.
ಜಾಗತೀಕರಣ ಮೂಲಭೂತವಾದ ಮತ್ತು ಕೋಮುವಾದಿ ವಿರೋಧಿ ಚಳುವಳಿಯ ಭಾಗವಾಗಿ ರಾಜ್ಯಮಟ್ಟದ ವಿಚಾರ ಸಂಕಿರಣ.
ಪುರಸಭಾ ಭವನ, ಗದಗ, ಸಮಯ 3 ಗಂಟೆಗೆ.

ಜೂನ್ 15,
ಐಕ್ಯರಂಗ ಪತ್ರಿಕೆ ಪ್ರಸಾರ ಚಳುವಳಿ .
ಜೂನ್ 15
ಕರ್ನಾಟಕ ರಾಜ್ಯಅರಣ್ಯ ಇಲಾಖಾ ದಿನಗೂಲಿ ನೌಕರರ ರಾಜ್ಯಮಟ್ಟದ ಸಭೆ
ಬೆಳಿಗ್ಗೆ 10 ಗಂಟೆಗೆ
ಸ್ಥಳ: ಅರಣ್ಯಭವನದಲ್ಲಿರುವ ನೌಕರರ ಭವನ, ಮಲ್ಲೇಶ್ವರಂ, ಬೆಂಗಳೂರು.
ಜೂನ್ 16 ಬೇಡಿಕೆಗಳಿಗೆ ಒತ್ತಾಯಿಸಿ ಮೇಲಧಿಕಾರಿಗಳಿಗೆ ಮನವಿ

ಜೂನ್ 28-29
ಬೆಂಗಳೂರಿನಲ್ಲಿ ಸಿಐಟಿಯು ಅಖಿಲ ಭಾರತ ಪದಾಧಿಕಾರಿಗಳ ಸಭೆ.
ಜೂನ್ 28 ರ ಸಂಜೆ 3.30 ಕ್ಕೆ ಪುರಭವನದಲ್ಲಿ ಸಿಐಟಿಯು ಕಾರ್ಯಕರ್ತರ ಸಭೆ.
ಕಾಂ. ಇ. ಬಾಲಾನಂದನ್, ಎಂ.ಕೆ.ಪಂಧೆ ಮತ್ತಿತರರು ಮಾತನಾಡಲಿದ್ದಾರೆ.

ಚಿತ್ರಾವತಿ ವಿವಾದ : ರಾಜಕೀಯ ದುರುದ್ದೇಶ ಮೇಲುಗೈ

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಎರಡೂ ರಾಜ್ಯಗಳು ಮುಖಾಮುಖಿಯಾಗಿವೆ. ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬಹುದಾದ ಪ್ರಶ್ನೆಯನ್ನು ವಿವಾದವನ್ನಾಗಿಸಲಾಗುತ್ತಿದೆ. ಆಂಧ್ರ-ಕರ್ನಾಟಕದ ಗಡಿಯಲ್ಲಿ ದ್ವೇಷ ಬೆಳೆಯುತ್ತಿದೆ. ಚಿತ್ರಾವತಿ ನದಿಗೆ ಪರಗೋಡು ಬಳಿ ಕಟ್ಟಬೇಕೆಂದಿರುವ ಆಣೆಕಟ್ಟನ್ನು 'ದೈಹಿಕ'ವಾಗಿ ತಡೆಯುವ ನೇರ ಕಾರ್ಯಾಚರಣೆಯನ್ನು ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಘೋಷಿಸಿಯೇ ಬಿಟ್ಟರು. ಜೂನ್ 6 ರಂದು ಅಂತಹ ಒಂದು ಪ್ರಯತ್ನವಾಗಿ ಜನತೆಯನ್ನು ಎಬ್ಬಿಸಿ ಕೆಲ ಸಂಸದರು, ಶಾಸಕರು ಕಾರ್ಯಕ್ರಮ ನಿಗದಿಗೊಳಿಸಿ ನಡೆದೇಬಿಟ್ಟರು. ಕಾನೂನು-ಶಾಂತಿ ಯಾರೇ ಉಲ್ಲಂಘಿಸಲಿ ತಕ್ಕ ಕ್ರಮ ಅನಿವಾರ್ಯವೆಂದು ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪ್ರಕಟಿಸಿಯೂ ಆಗಿದೆ. 6 ರಂದು ಅನೇಕರ ಬಂಧನವೂ ಆಗಿದೆ. ಪ್ರತಿಯಾಗಿ ಕಾಂಗ್ರೆಸ್ ಸಹ ಅಲ್ಲಿ ಮೆರವಣಿಗೆ ನಡೆಸಿದೆ. ವಿವಾದದ ಕೇಂದ್ರ ಬಿಂದು 'ನೀರು'. ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ರಾಜ್ಯದ ತಾಲ್ಲೂಕುಗಳ ಪಟ್ಟಿಯಲ್ಲಿ ಕೊನೆಯ ಪಟ್ಟ. ಕೃಷಿಗೆ ನೀರಿರಲಿ, ಕುಡಿಯಲೂ ಪರದಾಟ. ಅಲ್ಲಿ ಸಿಗುವ ನೀರು ಫ್ಲೋರೋಸಿಸ್ ಕಾಯಿಲೆಗಳ ಸರಮಾಲೆಯದ್ದೇ ಆರ್ಭಟ - ಖ್ಯಾತಿ! ಹೀಗಾಗಿ ಅಲ್ಲಿರುವ ಚಿತ್ರಾವತಿ ನದಿಗೆ ಪರಗೋಡುವಿನಲ್ಲಿ ಚಿಕ್ಕ ಆಣೆಕಟ್ಟು ಕಟ್ಟಿ ನೀರು ಸಂಗ್ರಹಿಸಿ ಕುಡಿಯಲು ನೀಡುವ ಯೋಜನೆ ಸರ್ಕಾರದ್ದು. ಇದಕ್ಕಾಗಿ ಹಲವಾರು ವರುಷಗಳಿಂದ ಜನರ-ಜನಪ್ರತಿನಿಧಿಗಳ ಒತ್ತಾಯ. ಹಿಂದಿನ ವಿಧಾನಸಭೆಯಲ್ಲಿ ಸರ್ಕಾರ ಇದಕ್ಕೆ ಒಪ್ಪಿಕೊಂಡಿತ್ತು. ಈ ಸರ್ಕಾರ 'ಈಗ' ಜಾರಿಗೆ ಮುಂದಾಗುತ್ತಿದೆ. ನಾಲ್ಕು ವರುಷಗಳ ಕಾಮಗಾರಿಗಳಿಗೆ ಎಸ್.ಎಂ.ಕೃಷ್ಣ ಚಾಲನೆ ನೀಡಿದ್ದಾರೆ. ಇದಕ್ಕೆ ಆಂಧ್ರದ ತಕರಾರು - ಬೀದಿ ರಂಪಾಟ. ಚಿತ್ರಾವತಿ ನದಿಯೆಂದರೆ ಕಾವೇರಿ-ಕೃಷ್ಣಾ, ಗೋದಾವರಿ-ಗಂಗಾಗಳಂತೆಯೇ ಎಂದು ಕಲ್ಪಿಸಿಕೊಳ್ಳಬೇಕಿಲ್ಲ. ಚಿತ್ರಾವತಿಗೆ ಪರಗೋಡು, ಪಾಪಾಗ್ನಿ, ಪೆನ್ನಾರ ಎಂಬ ಉಪ ನದಿಗಳಿವೆ ನಿಜ. ಅಂದ ಮಾತ್ರಕ್ಕೆ ಅದೇನು ವರ್ಷಪೂರ್ತಿ ತುಂಬಿ ಹರಿಯುವುದಿಲ್ಲ. ಮಳೆ ಚೆನ್ನಾಗಿದ್ದರೆ ವರ್ಷದಲ್ಲಿ ಒಂದು ಅಥವಾ ಎರಡು ತಿಂಗಳು ಹರಿಯುತ್ತದೆ ಅಷ್ಟೇ. ತುಂಬಿ ಹರಿವ ಸಂದರ್ಭಗಳು ತೀರಾ ಕಡಿಮೆ.

ಎರಡೂ ರಾಜ್ಯಗಳ ನಡತೆ

ನದಿ ಚಿಕ್ಕದೋ, ದೊಡ್ಡದೋ ನೀರು ಕುಡಿಯಲೋ-ಕೃಷಿಗೋ... ಅದು ಎರಡೂ ರಾಜ್ಯಗಳಲ್ಲಿ ಹರಿಯುವುದರಿಂದ ಯಾರಲ್ಲೇ ಅನುಮಾನ, ಆತಂಕವಿದ್ದರೆ ವಿವಾದವನ್ನು ಪರಸ್ಪರ ಚರ್ಚಿಸಿ ಬಗೆಹರಿಸಿಕೊಳ್ಳಬೇಕಾದದ್ದೇ ಸರಿಯಾದ ಮಾರ್ಗ. ಆಣೆಕಟ್ಟಿನ ಕಾಮಗಾರಿಯನ್ನು ಅದ್ದೂರಿ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಉದ್ಘಾಟಿಸಿ ಬಳಿಕ (ಚುನಾವಣೆ ವರ್ಷವಲ್ಲವೇ?) ಆಂಧ್ರದ ಮುಖ್ಯಮಂತ್ರಿ ನಾಯ್ಡು, ಅವರ ಪಕ್ಷದ 'ಮಹಾನಾಡು' ಸಭೆಯಲ್ಲೇ ಬಹಿರಂಗವಾಗಿ ಕದನ ಘೋಷಿಸಿದರು. ಕರ್ನಾಟಕವು ಈ ನೀರನ್ನು ಕುಡಿಯಲು ಅಲ್ಲದೇ ಕೃಷಿಗೆ ಬಳಸುವುದು ಎಂದರು. ತರಾತುರಿಯಲ್ಲಿ ರಾಷ್ಟ್ರಪತಿ, ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ತೆಲುಗುದೇಶಂನ ಸಂಸದರ ಮೂಲಕ ದೂರು ತಲುಪಿಸಿದರು. 1892, 1933 ರಲ್ಲಾದ ಒಪ್ಪಂದಗಳನ್ನು ಕರ್ನಾಟಕ ಉಲ್ಲಂಘಿಸಿದೆ ಎಂದು ಅದರಲ್ಲಿ ಖ್ಯಾತೆ ತೆಗೆದರು. ರಾಷ್ಟ್ರಪತಿಗಳು ನಾನು ಕ್ರಮವಹಿಸುವೆ ಎಂದರಂತೆ. ಒಂದು ರಾಜ್ಯದ ಜನನಾಯಕನಾಗಿ, ಸರ್ಕಾರದ ಮುಖ್ಯಸ್ಥನಾಗಿ, ಕಾನೂನು ಸಂವಿಧಾನದ ಪರಿಪಾಲನೆಯ ಹೊಣೆಗಾರನಾಗಿ 'ನೇರ ಕಾರ್ಯಾಚರಣೆ' ಬೆದರಿಕೆ ಹಾಕಿದ್ದು - ಒಂದು ವಿಚಿತ್ರವಾದ ಅಪಾಯಕಾರಿ ವಿಧಾನ. ಈ ನಡುವೆ ರಾಜ್ಯದ ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಲು ಮರೆಯಲಿಲ್ಲ. 'ನಿಮ್ಮ ಪಕ್ಷದ್ದೇ ಸರ್ಕಾರ ರಾಜ್ಯ ಹಿತಕ್ಕೆ ಒತ್ತಡ ತನ್ನಿ' ಎಂಬುದು ನಾಯ್ಡು ಆಗ್ರಹ. ಈ ಕುದಿಯಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳದೇ ಇದ್ದರೇಗೆ? ಬಹಳ ವಿಚಿತ್ರವೆಂದರೆ ಪ್ರಧಾನಿ ವಾಜಪೇಯಿ 'ಎ ತಡ ಮಾಡದೇ ಅಧಿಕಾರಿಗಳ ತಂಡವೊಂದನ್ನು ರವಾನಿಸಿ, ವಿದೇಶಿಯಾತ್ರೆಗೆ ತೆರಳಿದರು. ರಾಷ್ಟ್ರದ - ರಾಜ್ಯಗಳ ಹಿತಗಳು ಒತ್ತಟ್ಟಿಗಿರಲಿ - ತಮ್ಮ ಅಧಿಕಾರದ ಹಿತವೇ ಪರಮವೆಂಬ 'ಫಿಲಾಸಫಿ'ಯನ್ನು ಈಗಲೂ ಜಾರಿಗೊಳಿಸಿ ಭಾಗಿದಾರರನ್ನು ಓಲೈಸಿದರು ಮುತ್ಸದ್ದಿಗಳು!

ನೀರು, ಗಡಿ, ಭಾಷೆಗಳಂತಹ ಪ್ರಶ್ನೆಗಳನ್ನು ಕೆದಕಿ, ಕೆರಳಿಸಿ ನೈಜ ಸಮಸ್ಯೆಗಳಿಂದ ದೂರ ಸೆಳೆಯುವ ತಂತ್ರಗಳನ್ನು ಆಳುವವರು ನಡೆಸುತ್ತಲೇ ಬಂದಿದ್ದಾರೆ. ನೀರಿನ ನೆಪದಲ್ಲಿ ತೇಲುವ ತಂತ್ರಗಳವು. ಇಲ್ಲೆಲ್ಲಾ ಜನತೆಯ ಹಿತಗಳಿಗಿಂತ ಸಂಕುಚಿತ ರಾಜಕೀಯವೇ ಮೇಲುಗೈ ಪಡೆಯುತ್ತಾ ಬಂದಿದೆ.

ಜನ ವಿಭಜನೆಯಲ್ಲ

ಇದು ಖಂಡನೀಯ. ಚಿತ್ರಾವತಿಯ ಆಣೆಕಟ್ಟಿನ ಪ್ರಶ್ನೆಯನ್ನು ದೊಡ್ಡ ವಿವಾದವನ್ನಾಗಿಸಿ, ಎರಡೂ ರಾಜ್ಯಗಳ ಜನತೆಯನ್ನು ಎತ್ತಿಕಟ್ಟಿ ಚಳುವಳಿಗೆ ಇಳಿಸುವುದು ಉಭಯ ರಾಜ್ಯಗಳ ಹಿತಗಳಿಗೆ ಮಾರಕವಾಗಿದೆ. ನೀರು ಪಡೆಯುವ ಹಿತಕ್ಕೆ ಸಹಕಾರಿಯಲ್ಲ.

ಆದ್ದರಿಂದ ಬಹಿರಂಗವಾಗಿ ವಿವಾದ ಬೆಳೆಸುವ ಕ್ರಮ ಕೈಬಿಟ್ಟು ಆಂಧ್ರ-ಕರ್ನಾಟಕ ರಾಜ್ಯಗಳೆರಡೂ ಪರಸ್ಪರ ಸಮಾಲೋಚಿಸಿ ಇತ್ಯರ್ಥಕ್ಕೆ ಬರಬೇಕು. ಇದು ಅಂತರ ರಾಜ್ಯಗಳ ಪ್ರಶ್ನೆಯಾಗಿರುವುದರಿಂದ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಿ



ಕೊಳ್ಳಲು ಕೃಷ್ಣರ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಮುಖ್ಯಮಂತ್ರಿ ಕೃಷ್ಣರವರು ಬಹಿರಂಗಗೊಳಿಸಬೇಕು.

ಭಾರತದ ಗಣರಾಜ್ಯದ ಎರಡೂ ರಾಜ್ಯಗಳ ನಡುವೆ ಇಂತಹ ವಿವಾದ ಎದ್ದಾಗ ಮಧ್ಯಪ್ರವೇಶಿಸಿ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗದಂತೆ ಸೌಹಾರ್ದಯುತ ಪರಿಹಾರ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಬೇಕಾದ್ದು ಈ ಕ್ಷಣದ ಅತ್ಯಗತ್ಯ. ಜನರನ್ನು ಒಡೆದಾಳುವ ಕೇಂದ್ರದ ಚದುರಂಗದಾಟ ನಿಲ್ಲಬೇಕು. ಜನತೆಯೂ ಸೌಹಾರ್ದ ಕಾಪಾಡಲು ನಿಗಾ ವಹಿಸಬೇಕು.

'ದೊರೆ'ಯ ಮೇಲೀಗ ದೂರುಗಳು

ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಚಿವ ಎಂ.ವೈ.ಘೋರ್ಪಡೆಯವರ ಅಧಿಕಾರ ೊಟಕುಗೊಂಡಿದೆ. ಅವರ ಅಡಿಯಲ್ಲಿದ್ದ ರೋಗ್ಯ, ಇಂಜಿನೀಯರಿಂಗ್ ವಿಭಾಗದ ಹೊಣೆ. ಚಿವ ಕೋಳಿವಾಡರಿಗೆ ನೀಡಲಾಗಿದೆ. ರಸ್ತೆ ರ್ಮಾಣ, ಒಳ ಚರಂಡಿ, ಕೊಳವೆ ಬಾವಿ ರ್ಯಗಳು ಈ ವ್ಯಾಪ್ತಿಗಿವೆ.

ಹಿರಿಯ ಸಚಿವ, ಸಂಡೂರು ಯುವರಾಜ! ೋರ್ಪಡೆಯವರ ಅಧಿಕಾರ ಮೊಟಕು ೊಂಡಿರುವುದು ಕೃಷ್ಣರ ಸಂಪುಟದಲ್ಲಿ ಂಗ್ರೆಸ್‌ನಲ್ಲಿನ ಒಡಕು ವಿದ್ಯಮಾನಗಳ ಒಂದು ಂಪಲ್. ಕೃಷ್ಣ- ಹೈಕಮಾಂಡ್ ಅದೇಷ್ಟೇ ತೈಪೆ ಚ್ಚಿದ್ದರೂ ಅದು ಹೊರ ಬಂದೇ ಬರುತ್ತದೆ. ಕೆಲವು ಗಳ ಹಿಂದೆಯೇ ಘೋರ್ಪಡೆ ಮುಂದಿನ ನಾವಣೆ ನಂತರ ಸಕ್ರಿಯ ರಾಜಕಾರಣದಿಂದ ವೃತ್ತನಾಗುವುದಾಗಿ ಪ್ರಕಟಿಸಿದಾಗ ಎಲ್ಲರಿಗೂ ಚ್ಚರಿಯಾಗಿತ್ತು. ಈಗ ಅಧಿಕಾರ ಮೊಟಕಿಗೆ ೋರ್ಪಡೆಯವರು ಜನರೊಂದಿಗೆ ದಿಸುವುದಿಲ್ಲ, ಬರ ಕಾಮಗಾರಿ ಸರಿಯಾಗಿ ಡೆಯುತ್ತಿಲ್ಲ ಎಂಬ ಕಾರಣ ನೀಡಲಾಗಿದೆ. ಇದನ್ನು ರ್ಣ ನಿರಾಕರಿಸಲಾಗದು. ಆದರೆ ಕೃಷ್ಣರ ಸಂಪುಟ ಂಪುಟದಲ್ಲೇ ತುಂಬಿ ತುಳುಕುತಿದೆಯೆಂದು ಸಬೇಕಿಲ್ಲ. ಒಳ ಕಿತ್ತಾಟಗಳ ಹೂರಣ ರಬರಬೇಕು ಅಷ್ಟೆ.

ಮಳೆಗಾಗಿ ಪೂಜೆ : ಅಂಧಶ್ರದ್ಧೆಯ ಅತಿರೇಕ

ಮಳೆ ಬರುವುದು ಹೇಗೆ ಎಂದರೆ ಪ್ರಾಥಮಿಕ ಶಾಲಾ ಮಕ್ಕಳೂ ವಿವರಿಸಿಯಾರು. ಕೃತಕವಾಗಿ ಮಳೆ ಬರಿಸುವುದು ಹೇಗೆ ಎಂಬ ತಂತ್ರಜ್ಞಾನವೂ ಲಭ್ಯವಿದೆ ನಿಜ, ಅದು ಪುಸ್ತಕದ, ವಿಜ್ಞಾನದ ಮಾತಾಯಿತು. ಆದರೆ ಅಜ್ಞಾನ, ಅಂಧಶ್ರದ್ಧೆಯಿಂದ ಮಳೆ ಬರಿಸಬಹುದು ಎಂಬುದನ್ನು ಕರ್ನಾಟಕದ ಸಚಿವರು ಪ್ರಚಾರ ನಡೆಸಿದ್ದಾರೆ. ರಾಜ್ಯದ ಎಲ್ಲಾ ಗುಡಿ ಗುಡಾರಗಳ ದೇವರುಗಳಿಗೆ ವಿಶೇಷವಾಗಿ ಪ್ರಾರ್ಥಿಸಿ ಎಂದು ಅಪ್ಪಣೆ ಕೊಡಿಸಿದ್ದಾರೆ ಗ್ರಾಮೀಣ ನೀರು ಸರಬರಾಜು ಸಚಿವ ಕೆ.ವಿ.ಕೋಳಿವಾಡರವರು. ಅದಕ್ಕಾಗಿ ಸರ್ಕಾರದ ಸುತ್ತೋಲೆಯನ್ನು ಕಳಿಸಲಿದ್ದಾರಂತೆ! ವೈಜ್ಞಾನಿಕ ದೃಷ್ಟಿಕೋನ ಪ್ರತಿಪಾದಿಸುವ, ಬೆಳೆಸುವುದಾಗಿ ಸಂವಿಧಾನದ ಮೇಲೆ ಪ್ರಮಾಣ ಮಾಡಿ ಮಂತ್ರಿಗಳಾದವರ ಧೈರ್ಯವನ್ನು ಮೆಚ್ಚಲೇಬೇಕು! ಬರ ಯಾಕಿದೆ, ಮುಂದೆ ಯಾಕೆ ಬರಲಿದೆಯೆಂದರೆ 'ವರುಣದೇವ' ಮುನಿಸಿಕೊಂಡು ಕುಂತು ಬಿಟ್ಟಿದ್ದಾನೆ (ಮಾಮೂಲಿ ಹೋಗಿಲ್ಲವೇನು?, ಮಂತ್ರಿಗಳು ಹೇಳಬೇಕು). ಹೊಗಳಿ-ಹೊಗಳಿ 'ಪಾಲು' ಸಲ್ಲಿಸಿ (ಪುರೋಹಿತರಿಗೂ ಆದೀತು) ನೀರು ಪಡೆಯಬೇಕು. ಇಂತಹ ಮೂರ್ಖರ ಮಾತು ಹೊರ ಬರುವುದೇ ತಡ ಕೆಲವರಂತೂ ಟೊಂಕಕಟ್ಟಿ ಇಳಿದುಬಿಟ್ಟಿದ್ದಾರೆ. ಅದರಲ್ಲಿ ಕೆಎಸ್‌ಆರ್‌ಟಿಸಿ ಸಂಸ್ಥೆಯೇ ಮೊದಲಿಗೆ ಇರಬೇಕು. ವಿಚಿತ್ರವೆಂದರೆ 'ಕಾಡು ಬೆಳೆಸಿ, ನಾಡು ಉಳಿಸಿ' 'ಮಳೆಗೆ ದಟ್ಟಕಾಡು' ಎಂದೆಲ್ಲಾ ಪ್ರಚಾರಿಸುತ್ತಿದ್ದ ಅಧಿಕಾರಿಗಳೂ ಇದರಲ್ಲಿದ್ದಾರೆ. ಅಂಧಶ್ರದ್ಧೆಗೆ ವಿಜ್ಞಾನಿ-ಅಜ್ಞಾನಿ-ಮಂತ್ರಿ ಮಹೋದಯರೆಂಬ ಭೇದವಿಲ್ಲ!

ಈ ಥರದ ಕರೆಗಳ ಕೋಳಿವಾಡರವರಿಗೆ ಸೀಮಿತವೇನಲ್ಲ! ಹಿಂದೆಲ್ಲಾ ಇಂತಹ ಪ್ರಸಂಗಗಳ ದೊಡ್ಡ ಕಂತೆಯೇ ಇದೆ. 1984 ರ ಸುಮಾರಿನಲ್ಲಿ ಭೀಕರ ಬರ ಆವರಿಸಿದಾಗ ಬೆಂಗಳೂರಿನ ತಿಪ್ಪನಗೊಂಡನ ಕೆರೆ ಬತ್ತಿದಾಗ ಮಾಂತ್ರಿಕನಿಂದ ಪೂಜೆ ಮಾಡಿಸಿದವರು ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ. ಇದು ವ್ಯಾಪಕ ವಿರೋಧಕ್ಕೆ ಒಳಗಾಗಿತ್ತು. (ಈಗ ಅಂತಹ ಉತ್ಸಾಹ ವೈಚಾರಿಕರಲ್ಲಿಯೂ ಕಾಣುತ್ತಿಲ್ಲ) ಹಾಡು-ನಾಟಕಗಳ ಮೂಲಕ ಇದರ ಡೋಂಗಿತನ ಬಯಲುಗೊಳಿಸಲಾಗಿತ್ತು. ತೀರಾ ಇತ್ತೀಚೆಗೆ ಕರ್ನಾಟಕ ಬೊಕ್ಕಸ ಭರ್ತಿಯಾಗಿರಲು ವಿಧಾನಸೌಧದ 'ವಾಸ್ತು'ವೇ ಸರಿಯಿಲ್ಲ ಎಂಬ ಅಮೋಘ ಸಲಹೆಯನ್ನು ಸಮಾಜವಾದಿ ಜೆ.ಹೆಚ್.ಪಟೇಲರು ಪಡೆದಿದ್ದರು. ಕೃಷ್ಣರವರೂ ಸಹ ಅವರ ಕಛೇರಿ-ಮನೆ ವಾಸ್ತು ಸರಿಯಿಲ್ಲವೆಂದು ಲಕ್ಷಾಂತರ ಹಣ ಖರ್ಚು ಮಾಡಿ 'ಸರಿ ಮಾಡಿಸಿ' ಕೊಂಡಿದ್ದರು. ಬೊಕ್ಕಸ ಖಾಲಿಯಾಗುವುದಕ್ಕೆ ಹೊಣೆಗಾರರು ಯಾರು? ವಿಶ್ವಬ್ಯಾಂಕೇ-ಸರ್ಕಾರದ ನೀತಿ-.. ಏನಲ್ಲ! ಈಗಲೂ ಬರದ ಬವಣೆ ಎದುರಿಸಲು ಅಗತ್ಯ ಕ್ರಮ ವಹಿಸದೇ ಹಿಂದಿನ ಎರಡು ವರುಷ ಜಾರಿಕೊಂಡಂತೆ ಈಗಲೂ ಜಾರಿಕೊಳ್ಳುವ ಹೊಣೆಗೇಡಿತನವಲ್ಲದೆ ಬೇರೇನೂ ಅಲ್ಲ. ಮಳೆಗೆ ಪ್ರಾರ್ಥನೆ ಮದ್ದು ಎಂದರೆ ಬರಗಾಲಕ್ಕೂ ಪರಮಾತ್ಮನೇ ಕಾರಣ ಎಂದು ಸಾಗಹಾಕುವ ಪೂರ್ವೋಪಾದಿಯಿದು.

ಮಳೆಗೆ ಪೂಜೆ ಮಾಡೋದು ಅವರ ನಂಬಿಕೆಯಂತೆ. ಅದನ್ನು ಅವರೇ ಇಟ್ಟುಕೊಳ್ಳಬಹುದು. ಆದರೆ ಸರ್ಕಾರದ ಆಜ್ಞೆ ಮಾಡಲಾದೀತೆ? ಮಳೆ ಬರಿಸಲು ಕಪ್ಪೆಗಳ ಪೂಜೆ, ಕತ್ತೆಗಳ ಮೆರವಣಿಗೆ, ಬೆತ್ತಲೆ ಮೆರವಣಿಗೆ, ಗರ್ಭಿಣಿ ಮಹಿಳೆಯರ ಬಲಿ ಮುಂತಾದ ಭೀಕರ ಆಚರಣೆಗಳೂ ಇವೆ. ಇವನ್ನು ಪಾಲಿಸಲು ಕೇಳಿಯಾರೆ? ಇಂತಹ ಸಚಿವರನ್ನು ಹೊಂದಿರುವ ಕೃಷ್ಣರವರು ಏನೂ ಮಾತನಾಡಿಲ್ಲ! ನಿಧಿಗಾಗಿ ಬಾಲಕನನ್ನೇ ಬಲಿ ನೀಡಿದ ಆರೋಪವಿರುವ ಶಾಸಕನನ್ನೇ ಸಚಿವನನ್ನಾಗಿ ಮಾಡಿದ ಕೃಷ್ಣಂಗೆ ಎಂತಹ ನೈತಿಕತೆ - ಜ್ಞಾನವಿದ್ದೀತು?



ನೀಗದ ಸಂಕಷ್ಟಗಳು : ಪಂಚಾಯತ್ ನೌಕರರ ಹೋರಾಟ

ಶೋಚನೀಯ ಸ್ಥಿತಿಯಲ್ಲಿರುವ ಪಂಚಾಯತ ನೌಕರರು ರಾಜಧಾನಿಗೆ ಬಂದು ಆಳುವವರಿಗೆ ಬಿಚ್ಚಿಬೀಳುವಂತೆ ಹೋರಾಟದ ಕಹಳೆ ಊದಿದರು. ಅದರ ವರದಿಯಿಲ್ಲಿ.



ಮುಖಂಡರಾದ ಗೋಪಾಲಕೃಷ್ಣ, ಮಾರುತಿ ಮಾನಪಡೆ, ಕುಲಕರ್ಣಿ, ಪ್ರಕಾಶ್

ಕರ್ನಾಟಕ ರಾಜ್ಯದಲ್ಲಿ 5659 ಗ್ರಾಮ ಪಂಚಾಯತಗಳಿದ್ದು 30 ಸಾವಿರಕ್ಕೂ ಹೆಚ್ಚು ನೌಕರರು ಗ್ರಾಮಾಭಿವೃದ್ಧಿಗಾಗಿ ದುಡಿದು ಜೀವ ಸವೆಸುತ್ತಿದ್ದಾರೆ. ಈ ನೌಕರರಲ್ಲಿ ಕಸಗುಡಿಸುವವರು (ಸ್ವೀಪರ್), ಜವಾನ, ನೀರು ಸರಬರಾಜುಗಾರ, (ವಾಟರ್‌ಮ್ಯಾನ್) ಹಾಗೂ ಕರವಸೂಲಿಗಾರ ಎಂಬ ಗುಂಪುಗಳಿದ್ದು ಗ್ರಾಮ ನೈರ್ಮಲ್ಯ, ಕುಡಿಯುವ ನೀರು ನಿರ್ವಹಣೆ, ಕಛೇರಿ ಕೆಲಸ, ತೆರಿಗೆ ವಸೂಲಿ ಮತ್ತಿತರ ಕೆಲಸ ನಿರ್ವಹಿಸುತ್ತಿದ್ದಾರೆ.

ಇಂತಹ ನೌಕರರಿಗೆ, ಜೀವನಾವಶ್ಯಕ ಕನಿಷ್ಟ ವೇತನ, ರಜೆ, ಸೇವಾನಿಯಮಾವಳಿ ಇಲ್ಲದೆ ಗುಲಾಮರಂತೆ ದುಡಿಯುತ್ತಿದ್ದಾರೆ. 1998 ರಲ್ಲಿ ಸರ್ಕಾರ ವೇತನ 800 ರೂ, 900 ರೂ, 1200 ರೂ ಎಂದು ಪ್ರಕಟಿಸಿದ್ದರು. ಅದು ಜಾರಿಯಾಗದೇ ಕೇವಲ 300 ರೂ, 400 ರೂ. ಗಳ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇದೇ ರೀತಿ ಕೆಲಸ ಮಾಡುವ ಪೌರ ಸೇವಾ ನೌಕರರ ಹಾಗೂ ಅರ್ಬನ್ ವಾಟರ್ ಬೋರ್ಡ್ ನೌಕರರಿಗೆ ಎಲ್ಲಾ ಸೌಲಭ್ಯಗಳು ಸರ್ಕಾರ ನೀಡಿ ಗ್ರಾಮ ಪಂಚಾಯತಿ ನೌಕರರಿಗೆ ಈ ಯಾವುದೂ ಇಲ್ಲವೆಂದು ಹೇಳುವುದು ಮಲತಾಯಿದೊರಣೆ ಅಲ್ಲವೇ? ಸರ್ಕಾರ ಬೇಡಿಕೆ ಈಡೇರಿಸಬೇಕೆಂದು ಜಿಲ್ಲಾ- ತಾಲೂಕು ಮಟ್ಟದಲ್ಲಿ ಪ್ರತಿಭಟನೆ ನಡೆದು ಹೋರಾಟ ಭುಗಿಲೆದ್ದಿತು. ರಾಯಚೂರು ಜಿಲ್ಲಾ ಪಂಚಾಯತ್ ಎದುರು ಪೋಲೀಸರು ಲಾಠಿಪ್ರಹಾರ ನಡೆಸಿ ನೌಕರರು ತೀವ್ರವಾಗಿ ಪೆಟ್ಟು ತಿಂದರೂ ಹೋರಾಟ ಕುಗ್ಗಲಿಲ್ಲ.

2001 ಜೂನ್-11 ರಂದು ಬೆಂಗಳೂರಿನಲ್ಲಿ 10 ಸಾವಿರ ಪಂಚಾಯತಿ ನೌಕರರು ಬಾರಿ ಪ್ರತಿಭಟನೆ ನಡೆಸಿದಾಗ ಗ್ರಾಮೀಣಾಭಿವೃದ್ಧಿ ಸಚಿವರಾದ ಘೋರ್ಪಡೆಯವರು 3 ತಿಂಗಳಲ್ಲಿ ಈ ಸಮಸ್ಯೆ ಪರಿಹಾರ ನೀಡುವುದಾಗಿ ಸುಮ್ಮನಾದರು.

ವಿದೇಶಿ ಬ್ಯಾಂಕ್, ಐ.ಎಮ್.ಎಫ್, ವಿಶ್ವವ್ಯಾಪಾರ ಸಂಸ್ಥೆ (ಡಬ್ಲ್ಯು.ಟಿ.ಒ.) ಒತ್ತಡಕ್ಕೆ ಮಣಿದು ಸರ್ಕಾರ ಕಾಂಗ್ರೆಸ್ ಮುಖಂಡ ಹಾರ್ನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಮುಂದಾಯಿತೆ ಹೊರತು ಪಂಚಾಯತಿ ನೌಕರರ ಯಾವುದೇ ಬೇಡಿಕೆ ಬಗ್ಗೆ ಚಕಾರವೆತ್ತಲಿಲ್ಲ.

ಎರಡು ವರ್ಷಗಳ ಕಾಲ ಸಂಘದ ಮುಖಂಡರು 21 ಸುತ್ತಿನ ಮಾತುಕತೆ ನಡೆಸಿದರು. ಸಮಸ್ಯೆ ಬಗೆಹರಿಯಲೇ ಇಲ್ಲ. ಸಂಕಷ್ಟದಲ್ಲೇ ದಿನ ದೂಡುವ ಪಂಚಾಯತಿ ನೌಕರರ ಭವಣೆ ತೀವ್ರವಾಗಿ ಕೊನೆಗೆ ಇದೇ ಜೂನ್-2 ರಂದು ಬೆಂಗಳೂರಿನಲ್ಲಿ ಅನಿರ್ಧಿಷ್ಟ ಹೋರಾಟಕ್ಕೆ ಕರ್ನಾಟಕ ರಾಜ್ಯ ಗ್ರಾಮಪಂಚಾಯತಿ ನೌಕರರ ಸಂಘ ಕರೆನೀಡಿತು. ರಾಜ್ಯದ ಮೂಲೆ ಮೂಲೆಗಳಿಂದ ಹರಿದುಬಂದ ಸಾವಿರಾರು ನೌಕರರು ಬೆಂಗಳೂರಿಗೆ ಬಂದು ಝಂಡಾ ಹೂಡಿದರು. ಬೆಂಗಳೂರು ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಹೊರಟು ಬಸವೇಶ್ವರ ವೃತ್ತದ ಬಳಿ ಧರಣಿ ನಡೆಸಿದರು.

ನೌಕರರ ಜೀವನ ಅಧೋಗತಿ!

ನೌಕರರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ತೀವ್ರವಾದ ಆರ್ಥಿಕ ಸಮಸ್ಯೆಯಿಂದ 11 ತಿಂಗಳಿಂದ ಸಂಬಳ ಸಿಗದೆ ಗುಲ್ಬರ್ಗಾ ಜಿಲ್ಲೆಯ ಆಪರುಲ್‌ಪೂರ ತಾಲ್ಲೂಕಿನ ಬಳೂರಗಿ ಎಂಬ ಗ್ರಾಮ ಪಂಚಾಯತ ನೌಕರ ರಮೇಶ ದೇಸಾಯಿ ಆತ್ಮಹತ್ಯೆ ಮಾಡಿಕೊಂಡ ನೌಕರರ ಸಮಸ್ಯೆ ಎಷ್ಟು ಗಂಭೀರವಾಗಿದೆ ಎಂದು ಊಹಿಸಬಹುದು.

ಸಂಬಳ ಕೊಡಬೇಕೆಂದು ಆದೇಶ ಇದ್ದರು. 8-9 ತಿಂಗಳು ಸಂಬಳ ನೀಡದೆ ನೌಕರರು ಸೊರಗುತ್ತಿದ್ದಾರೆ. ಗ್ರಾ್ಯಚುಟಿ ಕಾಯಿದೆ ಜಾರಿಯಾಗಿರುವುದಿಲ್ಲ ಮುಂಬಡ್ತಿ ನೀಡುವಲ್ಲಿ ಒಟ್ಟು ಸಾಂಕ್ಷನ್ಡ್ ಪಂಚಾಯತ್ ಆಧಾರದಲ್ಲಿ ಕಾರ್ಯದರ್ಶಿ ಹುದ್ದೆಗೆ ತುಂಬುವ ಪ್ರಕ್ರಿಯೆ ಸಂಪೂರ್ಣವಾಗಿ ಜಾರಿಗೊಳಿಸಿಲ್ಲವಾದ್ದರಿಂದ 10 ವರ್ಷ ಮೀರಿ ನಿವೃತ್ತಿ ಅವಧಿ ಬಂದರೂ ಕಾರ್ಯದರ್ಶಿಯಾಗುವ ಕನಸು ನನಸಾಗದೆ ಉಳಿದಿದೆ. ಸರ್ಕಾರ ಈ ಬಗ್ಗೆ ಮುಂಬಡ್ತಿಗೆ ಶೇ. ... ರಿಂದ ಶೇ40 ಮೀಸಲಾತಿ ಏರಿಕೆ ಮಾಡಿದ... ಮಾತ್ರ ಕಾರ್ಯಸಾದುವಾಗುತ್ತದೆ.

ಗ್ರಾಮ ಪಂಚಾಯತಿ ಆಡಳಿತ ಮಂಡಳಿ... ದಬ್ಬಾಳಿಕೆಗೆ ಒಳಗಾಗಿರುವ ಪಂಚಾಯ... ನೌಕರರನ್ನು ಪ್ರಾಣಿಗಿಂತ ಕೀಳಾಗಿ ಕಾಣಲಾಗುತ್ತಿ... ಯಾವುದೇ ಸೇವಾ ನಿಯಮಗಳಿಲ್ಲದೆ ಚುನಾಯಿ... ಸದಸ್ಯರ ಅಕ್ರಮ ಕೆಲಸಗಳಿಗೆ ತುತ್ತಾಗಿ ಯಾ... ಅನುಭವಿಸುತ್ತಿದ್ದಾರೆ

ಈ ಸಮಸ್ಯೆ ಪರಿಹಾರಕ್ಕೆ ಹೋರಾಟವೊಂ... ಮಾರ್ಗ. ಎಂದು ನೌಕರರು ಸಂಘಟನೆಯಡಿಯ... ಒಂದಾಗಿ ತಮ್ಮ ಶಕ್ತಿ ಹೆಚ್ಚಿಸಿಕೊಂಡು ಪ್ರ... ಹೋರಾಟಕ್ಕೆ ಸಿದ್ಧಾರಾಗಿ ಜೂನ್ 2 ಮತ್ತು... ರಂದು ಬನ್ನಪ್ಪ ಪಾರ್ಕಿನಲ್ಲಿ ನಡೆದ ಅನಿಧಿ... ಕಾಲ ಮುಷ್ಕರ ಆರಂಭಿಸಿದರು ಹೋರ... ಗಮನಿಸಿದ ಸರ್ಕಾರ ನಮ್ಮ ಬೇಡಿಕೆಗಳ ಬಗ್ಗೆ... ರಂದು ಮತುಕತೆಗೆ ಕರೆಯಿತು. ಆ ನಂತರ... ಮೇ 28, 29 ರಂದು ಅಧಿಕಾರಿಗಳ ಜ... ಸಭೆಗಳು ನಡೆದು 5 ಅಂಶಗಳ ಬೇಡಿಕೆ ಪರಿಶೀ... ಪ್ರತಿ ಕಾರ್ಮಿಕನಿಗೆ 300 ರೂ ವೇತನ ಹೆ... ಮಾಡುವುದು ಜೊತೆ ಕರವಸೂಲಿಯ... ಕರವಸೂಲಿಗಾರನಿಗೆ ಅವನ ಸಂಗ್ರ... ಸಾಮರ್ಥ್ಯದ ಮೇಲೆ ಶೇ. 10 ರಷ್ಟು ಕಮಿ... ನೀಡಲು ತಿಳಿಸಿತು. ಅಲ್ಲದೆ ಸ್ವಯಂ ಘೋ... ಆಸ್ತಿ ತೆರಿಗೆ ನಿವೇಶಗಳ ಮಾಹಿತಿ ಸಂಗ್ರಹಕ್ಕೆ ... ಅರ್ಜಿಸಿದ್ದಗೊಳಿಸಲು 10 ರೂ. ಘೋಷಿ... ನೌಕರರು ಪುಕ್ಕಟೆ ಕೆಲಸ ಮಾಡುವುದನ್ನು ಇದ... ತಡೆಗಟ್ಟುವಂತಾಗಿದೆ. 2 ತಿಂಗಳ ಅವಧಿಯಲ್ಲಿ... ಹುದ್ದೆಗಳನ್ನು ತಕ್ಷಣ ತುಂಬಿಕೊಳ್ಳಲು ನಿರ್ಧರಿ...

ವಾಟರ್ ಮಾನ್‌ಗೆ 300 ರೂ. ಹೆ... ಸರ್ಕಾರ ನೀರಿನ ತೆರಿಗೆ ಸಂಗ್ರಹದಿಂದ ಬ... ಹಣದಲ್ಲಿ ಶೇ. 5 ಕಮಿಷನ್ ನೀಡಲು ಒ... ಜವಾನ, ಕಸಗುಡಿಸುವ ನೌಕರರಿಗೆ ಕಮಿ... ಬದಲು ಪ್ರತಿವರ್ಷವೂ 8.33 ಬೋ... ನೀಡುವುದಾಗಿ ಮತ್ತು ಪ್ರಾವಿಡೆಂಟ್ ಫಂಡ್,


ಪುಟ 12

'ಮಹಿಳಾ ಮೀಸಲಾತಿ ತಡೆಯಲು ವ್ಯವಸ್ಥಿತ ಹುನ್ನಾರ'

ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬಾರದಂತೆ ವ್ಯವಸ್ಥಿತವಾದ ರಾಜಕೀಯ ಹುನ್ನಾರ ನಡೆದಿದೆ ಎಂದು ಮಾಜಿ ಸಂಸದೆ ಮತ್ತು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಸುಭಾಷಿಣಿ ಅಲಿ ಹೇಳಿದ್ದಾರೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಏರ್ಪಡಿಸಿದ್ದ ಸಂವಾದದಲ್ಲಿ ಮಹಿಳಾ ಮೀಸಲಾತಿ ಮಸೂದೆ - ನೈತಿಕತೆ ಇಲ್ಲದ ರಾಜಕೀಯ' ಎಂಬ ವಿಷಯದ ಕುರಿತು ಮಾತನಾಡಿದ ಅವರು, ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬಾರದಂತೆ ಕಾರ್ಯ ನಿರ್ವಹಿಸಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಜಾಪ್ರಭುತ್ವ ವ್ಯವಸ್ಥೆಗೇ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿದರು.

ದೇಶದ ಜನಸಂಖ್ಯೆಯಲ್ಲಿ ಶೇಕಡ 50ರಷ್ಟು ಇರುವ ಮಹಿಳಾ ಸಮೂಹವು ಮೀಸಲಾತಿ ಮಸೂದೆ ಜಾರಿಗಾಗಿ ಹೋರಾಡುತ್ತಿರುವ ಪರಿಸ್ಥಿತಿ ಒದಗಿರುವುದು ನಾಚಿಕೆಗೇಡಿನ ವಿಷಯ. ಮಹಿಳಾ ಮೀಸಲಾತಿ ಮಸೂದೆ ಜಾರಿ ವಿಳಂಬವಾಗುವಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಭಾಗಿಯಾಗಿವೆ. ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರಿಗೆ ರಾಜಕೀಯ ಅಧಿಕಾರ ದೊರೆಯುವಂತೆ ಮಾಡುವುದು ಅವರ ದುರುದ್ದೇಶ ಎಂದು ಅವರು ವಿವರಿಸಿದರು.



ಆಹಾರ ನೀತಿಯಲ್ಲಿ ದೋಷ; ಆಹಾರ ಅಲಭ್ಯತೆ: ಮಹಿಳೆಯರ ಮೇಲೆ ಪರಿಣಾಮಗಳು ಕುರಿತು ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಅವರು ಸರ್ಕಾರವು ಆಹಾರ ನೀತಿಯಲ್ಲಿ ಗುರುತರ ಬದಲಾವಣೆ ತರಬೇಕು ಎಂದು ಆಗ್ರಹಿಸಿದರು.

ದೇಶದಲ್ಲಿರುವ ಆಹಾರ ದಾಸ್ತಾನಿನಲ್ಲಿ ಆರು ಕೋಟಿ ಟನ್ನುಗಳಷ್ಟು ಧಾನ್ಯವಿದೆ. ಇದು ಕಾದಿಡ ಬೇಕಾದ ದಾಸ್ತಾನಿಗಿಂತಲೂ ಸುಮಾರು ಮೂರು ಪಟ್ಟು ಹೆಚ್ಚು ದಾಸ್ತಾನು ಮಾಡಲು ಸೂಕ್ತ ಸೌಲಭ್ಯವಿಲ್ಲದೆ ಈ ಆಹಾರ ಧಾನ್ಯಗಳು ಇಲಿ, ಹೆಗ್ಗಣಗಳ ಹೊಟ್ಟೆ ತುಂಬಿಸುತ್ತಿದೆ. ಅತ್ತ ... ಜನರು ಉಪವಾಸದಿಂದ ಸಾಯುತ್ತಿದ್ದಾರೆ' ... ಹೊಟ್ಟೆ ತುಂಬಿಸಲು ಮಹಿಳೆಯರು ತಮ್ಮ ... ಹರಾಜಿಗಿಟ್ಟಿದ್ದಾರೆ ಎಂದು ಕಳಕಳಿ ವ್ಯಕ್ತಪಡಿಸಿ...

ಕಳೆದ ವರ್ಷ 9.6 ಮಿಲಿಯ ಟನ್ನುಗ... ಗೋಧಿಯನ್ನು ನಾವು ಹೊರದೇಶಗಳಿಗೆ ಕೇ... ನಾಲ್ಕು ರೂಪಾಯಿಯಂತೆ ಮಾರಾಟ ಮಾಡಿ... ಕೆ.ಜಿ. ರೂ.4.80 ರಂತೆ ಗೋಧಿ ಕೊಳ್ಳುವ... ಗ್ರಾಹಕನನ್ನು ವಂಚಿಸಿ ಅದಕ್ಕಿಂತ ಕಡಿಮೆ ... ಮಾರಾಟ ಮಾಡಬೇಕಾದ ಅವಶ್ಯಕತೆ ... ಎಂದು ಪ್ರಶ್ನಿಸಿದ ಅವರು ವಿಶ್ವ ಬಾ... ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ... ವಾಣಿಜ್ಯ ಸಂಘಟನೆಯ ಬಲೆಯೊಳಗೆ ಸಿಲು... ಸರ್ಕಾರ ಬಡಜನರನ್ನು ಮರೆತಿದೆ ... ವಿಷಾದಿಸಿದರು.

ಬಾಕಿ ಉಳಿದಿರುವ ಮಹಿಳಾ ಹ... ಮಸೂದೆ ಕುರಿತು ಮಾತನಾಡಿದ ... ಕೋರ್ಟಿನ ವಕೀಲರಾದ ಕೀರ್ತಿ ಸಿಂಗ್ ... ಕೌಟುಂಬಿಕ ಹಿಂಸೆ ಮತ್ತು ಲೈಂಗಿಕ ಹಲ್ಲೆ... ಕಾನೂನುಗಳಲ್ಲಿ ಹಲವು ಕೊರತೆಗಳಿವೆ ... ತಿಳಿಸಿದರು. ಲೀಲಾ ಅವರು ಪ್ರಾ... ಮಾತನಾಡಿದರು.

ಉತ್ತರ ಪ್ರದೇಶದ ಇತ್ತೀಚಿನ ಘಟನೆಗಳು ಆ ರಾಜ್ಯವನ್ನು ಮಾತ್ರವಲ್ಲ ಇಡೀ ದೇಶವನ್ನು ಆವರಿಸಿರುವ ರಾಜಕೀಯ ಬಿಕ್ಕಟ್ಟಿಗೆ ಒಂದು ರೀತಿಯ ಪ್ರತಿಕ್ರಿಯೆಯಾಗಿ ಬಂದಿದೆ. ಆದ್ದರಿಂದ ಬಿಜೆಪಿ ಮತ್ತದರ ಜೊತೆಗಾರರ ವಿರುದ್ಧ ಐಕ್ಯತೆಯುನ್ನು ಬೆಸೆಯುವ ಪ್ರಯತ್ನಗಳ ಯಶಸ್ಸು ಅಥವಾ ವಿಫಲತೆ ಇಡೀ ದೇಶದ ಮೇಲೆ ದೂರಗಾಮಿ ಪರಿಣಾಮ ಬೀರಲಿವೆ.

ಅಧಃಪತನದ ಅಪರಾವತಾರ ಮಾಯಾವತಿ ಸರ್ಕಾರ

ಹರಕಿಶನ್ ಸಿಂಗ್ ಸುರ್ಜಿತ್

ರಾಜಕೀಯ ನೈತಿಕತೆ, ಪ್ರಾಮಾಣಿಕತೆಯ ಬಗ್ಗೆ ಬಹಳವಾಗಿ ಮಾತನಾಡುತ್ತಿದ್ದದ್ದು, ಆದರೆ ಅಧಿಕಾರಗಳಿಸುವ ಅಥವಾ ಉಳಿಸಿಕೊಳ್ಳುವ ಪ್ರಶ್ನೆ ಬಂದಾಗ ಅದನ್ನು ಆಳವಾಗಿ ಹೂತುಬಿಟ್ಟಿದ್ದು ಬಿಜೆಪಿ ಎಂಬುದು ಎಲ್ಲಾ ರಾಜಕೀಯ ವೀಕ್ಷಕರಿಗೂ ತಿಳಿದ ವಿಷಯ. 1997-2002ರ ಬಿಜೆಪಿ ಆಳ್ವಿಕೆ ಮತ್ತು ಬಿಜೆಪಿ - ಬಿಎಸ್.ಸಿ. ಆಳ್ವಿಕೆಯಲ್ಲಿ ಹಲವಾರು ಕ್ರಿಮಿನಲ್‌ಗಳು ಮಂತ್ರಿಗದ್ದುಗೆಗೆ ಏರಿ, ಯಾರು ಇವರಿಗೆ ಕೈಕೋಳ ತೊಡಿಸಬೇಕಾಗಿತ್ತೋ ಅದೇ ಪೊಲೀಸ್ ಅಧಿಕಾರಿಗಳಿಂದ ಸೆಲ್ಯೂಟ್ ಪಡೆಯಲಾರಂಭಿಸಿದರು. ಇಂತವರ ಸಂಖ್ಯೆ ಅಪಾರ. ಇತ್ತೀಚಿನ ಉದಾಹರಣೆ ಮಾಯಾವತಿ ಸಂಪುಟದಲ್ಲಿ ಮಂತ್ರಿಯಾಗಿದ್ದ ಅಮರ ಮಣಿ ತ್ರಿಪಾಠಿ. ಒಬ್ಬ ಯುವತಿಯ ಬೀಕರ ಹತ್ಯೆಯಲ್ಲಿ ಈತನ ಕೈವಾಡದ ಬಗ್ಗೆ ಸಾಕಷ್ಟು ಸಂಕೇತಗಳಿದ್ದರೂ ಸಾರ್ವಜನಿಕರ ಭಾರಿ ಆಕ್ರೋಶದ ನಂತರವೇ ಮುಖ್ಯಮಂತ್ರಿ ಮಾಯಾವತಿ ಆತನಿಗೆ ರಾಜಿನಾಮೆ ಕೊಡುವಂತೆ ಹೇಳಿದರು. ಅಂದಿನಿಂದ ರಾಜ್ಯದ ಜನ ಹೇಳುತ್ತಿರುವ ಮಾತು ಒಂದೇ - ಹೇಗಾದರೂ ಆತನನ್ನು ಈ ಆರೋಪದಿಂದ ಮುಕ್ತಗೊಳಿಸಿ ಮತ್ತೆ ಮಂತ್ರಿಯಾಗಿ ಮಾಡಲಾಗುತ್ತದೆ ಎಂದು.


ಇದಕ್ಕೆ ತದ್ವಿರುದ್ಧವಾದದ್ದು ರಾಜಾಭೈಯ್ಯಾ ಎಂದು ಕುಖ್ಯಾತನಾಗಿರುವ ರಘುರಾಜ್ ಪ್ರತಾಪ್ ಸಿಂಗ್ ಉದಾಹರಣೆ ಈತ ತನ್ನ ಜಿಲ್ಲೆ ಪ್ರತಾಪಗಢದ ಭಯೋತ್ಪಾದಕ. ಬಹಳ ಕಾಲ ಬಿಜೆಪಿಯ ನಂತರ ಬಿ.ಎಸ್.ಪಿ.ಯ ಪ್ರೀತಿ ಪಾತ್ರ ವ್ಯಕ್ತಿಯಾಗಿದ್ದಾತ. ಆದರೆ ಮಾಯಾವತಿಯೊಂದಿಗೆ ಆತನಿಗೆ ಭಿನ್ನಾಭಿಪ್ರಾಯ ಬಂದು ಆಕೆಯ ಸರಕಾರಕ್ಕೆ ಬೆದರಿಕೆಯೊಡ್ಡುತ್ತಿದ್ದಾನೆ ಎಂದನಿಸಿದಾಗ ಪೋಟಾ ಕಾನೂನಿನಡಿ ಬಂಧಿಸಿ ಜೈಲಿನಲ್ಲಿಡಲಾಗಿದೆ.

ಇವೆರಡು ಉದಾಹರಣೆಗಳು ಹೇಳುವ ಹೊಲಸು ಪಾಠ ಒಂದೇ. ಆದೇನೆಂದರೆ ಉತ್ತರ ಪ್ರದೇಶದಲ್ಲಿ ಬಿಜೆಪಿ, ಬಿ.ಎಸ್.ಪಿ.ಗೆ ಪ್ರಯೋಜನವಾಗುವವರೆಗೆ ಕ್ರಿಮಿನಲ್‌ಗಳಿಗೆ ಎಲ್ಲದರಿಂದಲೂ ವಿನಾಯಿತಿ ದೊರೆಯುತ್ತದೆ. ಆದ್ದರಿಂದಲೇ ಸುಂದರ ಸಂಸತಿಯ ನಗರ ಲಕ್ನೌ ಈಗ ಕೊಲೆ-ಸುಲಿಗೆಗಳ ನಗರವಾಗಿಬಿಟ್ಟಿರುವುದು.

ಬಾಚಿಕೊಳ್ಳುವ ನಾಯಕರು.

ಜನತೆಯ ದುಸ್ಥಿತಿ.

ಇದು ಬಿಎಸ್‌ಪಿ-ಬಿಜೆಪಿಯ ಪೋಷಣೆಯಡಿ



ಉತ್ತರ ಪ್ರದೇಶವನ್ನು ಆವರಿಸಿರುವ ಬಿಕ್ಕಟ್ಟಿನ ಒಂದು ಅಂಶ ಮಾತ್ರ. ಇನ್ನೂ ಅಪಾಯಕಾರಿ ಅಂಶವೆಂದರೆ ರಾಜ್ಯದಲ್ಲಿ ಸಾಗಿರುವ ಸಾರ್ವಜನಿಕ ಹಣದ ಲೂಟಿ ಒಂದೇ ಉದಾಹರಣೆ ತಗೊಳ್ಳಿ. ಈ ರಾಜ್ಯದಲ್ಲಿನ ಹೆಚ್ಚು ಸ್ಥಳೀಯ ಸಂಸ್ಥೆಗಳು ಹಣವಿಲ್ಲದೆ ನಿಷ್ಪ್ರಯೋಜಕವಾಗಿ ನಿಂತಿವೆ. ಈ ಸಂಸ್ಥೆಗಳಿಗೆ ಅಲ್ಪಸ್ವಲ್ಪ ನಿಧಿ ಸೇರಿದ ಆಳುವ ಮುಖಂಡರ ಜೇಬು ಸೇರುತ್ತದೆ. ಆದ್ದರಿಂದಲೇ ಆಗ್ರಾದ ವಿಶ್ವವಿಖ್ಯಾತ ತಾಜಮಹಲ್ ಸುತ್ತ ಮುತ್ತಲಿನ ರಸ್ತೆಗಳೂ ಹೊಲಸುನಾರುತ್ತಿವೆ.

ಇವೆಲ್ಲದರಲ್ಲಿ ಆಶ್ಚರ್ಯವೂ ಇಲ್ಲ. ಏಕೆಂದರೆ ಕೇಂದ್ರದಲ್ಲಿ ಎನ್.ಡಿ.ಎ. ಯಾಗಲೀ, ರಾಜ್ಯದಲ್ಲಿ ಬಿಜೆಪಿ- ಬಿಎಸ್‌ಪಿ ಮೈತ್ರಿಯಾಗಲೀ ಅನುಕೂಲವಿದ್ದ ಕೂಟಗಳಷ್ಟೇ ಕೇವಲ ಅಧಿಕಾರ ಮತ್ತು ಐಶ್ವರ್ಯದ ದುರಾಸೆಯೇ ಇತರನ್ನೆಲ್ಲಾ ಒಟ್ಟಾಗಿಟ್ಟಿರುವ ಸೂತ್ರ. ಯಾವಾಗ ಈ ಮೈತ್ರಿ ಕುಸಿಯುತ್ತದೆ ಎಂದು ಯಾರಿಗೂ ತಿಳಿಯದ ಪರಿಸ್ಥಿತಿಯಲ್ಲಿ ಸರಕಾರ ಬೀಳುವ ಮೊದಲು ಎಷ್ಟು ಸಾಧ್ಯವೋ ಅಷ್ಟನ್ನು ಬಾಚಿಕೊಳ್ಳುವುದೇ ಈ ಪಕ್ಷಗಳ ಎಲ್ಲಾ ಹಂತಗಳ ಮುಖಂಡರ ಏಕೈಕ ಗುರಿಯಾಗಿದ್ದರೆ ಆಶ್ಚರ್ಯವೇನು?

ಆದ್ದರಿಂದಲೇ ಉತ್ತರ ಪ್ರದೇಶದಲ್ಲಿ ಒಂದೆಡೆ ವಿಕಾಸ ಕಾರ್ಯಗಳು ನಿಂತುಬಿಟ್ಟಿದ್ದರೆ, ಇನ್ನೊಂದೆಡೆ ಪಾರ್ಕುಗಳು, ಪ್ರತಿಮೆಗಳು, ಹುಟ್ಟುಹಬ್ಬದ ಪಾರ್ಟಿಗಳಿಗೆ ಕೋಟಿಗಟ್ಟಲೆ ರೂಪಾಯಿಗಳು ಹರಿದು ಹೋಗುತ್ತಿವೆ. ಮತ್ತೊಂದೆಡೆ ಕಳೆದ ವರ್ಷ ತಾವು ನೀಡಿದ ಕಬ್ಬಿಗೆ ಮಿಲ್ ಮಾಲಿಕರಿಂದ ಬಾಕಿ ಹಣ ಕೇಳಿದ್ದಕ್ಕೆ ಬಸ್ತಿ ಜಿಲ್ಲೆಯ ಮುಂಡೇರ್ವಾ ಸಕ್ಕರೆ ಕಾರ್ಖಾನೆ ಬಳಿ ಕಬ್ಬು ಬೆಳೆಗಾರರ ಮೇಲೆ ಗೋಳೀಬಾರು ಮಾಡಿ ಸಾಯಿಸಲಾಯಿತು. ಅದಕ್ಕೆ ಮೊದಲು 1992ರಲ್ಲೂ ಬಿಜೆಪಿ ಮಾತ್ರವೇ ಅಧಿಕಾರದಲ್ಲಿದ್ದಾಗಲೂ ಇದೇ ಪ್ರಶ್ನೆಯ ಮೇಲೆ ಗೋಳೀಬಾರಿನಲ್ಲಿ ಮೂವರು ರೈತರನ್ನು ಸಾಯಿಸಲಾಗಿತ್ತು. ಈ ಬಾರಿಯೂ ಕಬ್ಬು ಬೆಳೆಗಾರರಿಗೆ ಕಳೆದ ವರ್ಷಕೊಟ್ಟ ಬೆಲೆಯೂ ಸಿಗುತ್ತಿಲ್ಲ. ಪ್ರಧಾನ ಮಂತ್ರಿಗಳು 'ಉದಾರ'ವಾಗಿ ಕನಿಷ್ಟ ಬೆಲೆಯಲ್ಲಿ ಕ್ವಿಂಟಲ್ 5 ರೂ ಹೆಚ್ಚಿಸಿದರೂ ಕೂಡ ಕಳೆದ ವರ್ಷದ ಮಟ್ಟಕ್ಕೆ ಅವಿನ್ನೂ ಬಂದಿಲ್ಲ.

ಕಬ್ಬು ಈ ರಾಜ್ಯ ಪ್ರಮುಖ ಹಣದ ಬೆಳೆ. ಬಹುಪಾಲು ರೈತರು ಇದರ ಕೃಷಿಯಲ್ಲೇ ತೊಡಗಿರುವಾಗ ಈ ರಾಜ್ಯದ ರೈತರ ದುಸ್ಥಿತಿಯನ್ನು ಯಾರಾದರೂ ಅರ್ಥ ಮಾಡಿಕೊಳ್ಳಬಹುದು.

ಅಜಿತ್ ಸಿಂಗ್ ರಾಜಿನಾಮೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಕೃಷಿ ಮಂತ್ರಿ ಅಜಿತ್ ಸಿಂಗ್ ಮೇ 29 ರಂದು ತನ್ನ ಮಂತ್ರಿಪದವಿಯನ್ನು ಮಾತ್ರವಲ್ಲ ಎನ್.ಡಿ.ಎ.ಯನ್ನೂ ಬಿಟ್ಟಿದ್ದಾರೆ. ಬಿಜೆಪಿ ನೇತೃತ್ವದ ಆಡಳಿತ ಸಬ್ಸಿಡಿಗಳು, ಕೃಷಿ ಆಮದು ಇತ್ಯಾದಿಗಳಲ್ಲಿ ರೈತ-ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದವರು ಆಪಾದಿಸಿದ್ದಾರೆ.

ಇದರ ಬೆನ್ನ ಹಿಂದೆಯೇ ಅವರ ಆರ್.ಎಲ್.ಡಿ. ಪಕ್ಷದ ಎಲ್ಲಾ 14 ಶಾಸಕರು ಮಾಯಾವತಿ ಸರಕಾರಕ್ಕೆ ಬೆಂಬಲವನ್ನು ಹಿಂತೆಗೆದುಕೊಂಡಿದ್ದಾರೆ. ತನ್ನ ಶಾಸಕರ ಬೇಟೆ ನಡೆಯದಿರಲಿ ಎಂದು ಅಜಿತ್ ಸಿಂಗ್ ಈ ಶಾಸಕರನ್ನು ಶ್ರೀನಗರದಲ್ಲಿ ಇಟ್ಟಿದ್ದಾರೆ. ಏಕೆಂದರೆ, ಮಾಯಾವತಿಯವರು ರಾಜ್ಯಕ್ಕೆ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಹೆಸರಲ್ಲಿ ಸ್ವಚ್ಛ ಲೇಬಲ್‌ನ ಪ್ರವಾಸದಲ್ಲಿದ್ದರೂ, ಇಲ್ಲಿ ಆಕೆಯ ಸಹಯೋಗಿಗಳು ಆರ್.ಎಲ್.ಡಿ. ಶಾಸನಗಳ ಬೇಟೆಯಲ್ಲಿ ಸಕ್ರಿಯ ಹಿನ್ನೆಲೆ ಎಂಬ ವರದಿಗಳಿವೆ. ಇದು ಮಾಯಾವತಿಯವರ ಪರಂಪರೆಗೆ ಅನುಗುಣವಾಗಿಯೇ ಇದೆ. ಬಿಜೆಪಿಯಿಂದ ಆಕೆ ಬಳುವಳಿ ಪಡೆದ ಪರಂಪರೆಯಿದು.

ಈ ಬೆಳವಣಿಗೆಯ ನಂತರ ಉತ್ತರ ಪ್ರದೇಶದಲ್ಲಿ 13 ಶಾಸಕ ಆಳುವ ಕೂಟವನ್ನು

ಕಾಂಗ್ರೆಸ್‌ನ ಶಾಸಕರ ಸಂಖ್ಯೆ 27 ರಿಂದ 16ಕ್ಕಿಳಿದಿದೆ. ಈ ಹಿಂದೆ 1997ರಲ್ಲೂ ಬಿಜೆಪಿಯ ಜೊತೆಗೆ ಬಲಿಯಾದ ಅನುಭವದಿಂದಲೂ ಈ ಪಕ್ಷ ಪಾಠ ಕಲಿಯಲಿಲ್ಲ.

ಇನ್ನೂ ಅಜಿತ್ ಸಿಂಗ್‌ರ ವಿಶ್ವಾಸಾರ್ಹತೆ ಮತ್ತು ಆತ ಎಷ್ಟರ ಮಟ್ಟಿಗೆ ತನ್ನ 14 ಶಾಸಕರನ್ನು ಜತೆಗಿಟ್ಟುಕೊಳ್ಳುತ್ತಾರೆ ಎಂಬ ಪ್ರಶ್ನೆಯೂ ಕಾಂಗ್ರೆಸನ್ನು ಬಾದಿಸುತ್ತಿವೆ ಎಂದು ಹಿಂದೂಸ್ತಾನ್ ಟೈಮ್ಸ್ (ಮೇ 30) ಪತ್ರಿಕೆ ಹೇಳಿದೆ. ಅಲ್ಲದೆ ಅಜಿತ್ ಸಿಂಗ್ ರಾಜಿನಾಮೆ ನೀಡುವಂತಾದ್ದು ರೈತರ ಬಗ್ಗೆ ಆತಂಕದಿಂದಲೇ ಅಥವಾ ತನ್ನ ನೆಲೆಗೆ ಟೀಕಾಯತ್‌ರಿಂದ ಬೆದರಿಕೆ ಬಂದಿರುವ ಹಿನ್ನೆಲೆಯೇ ಗೊತ್ತಿಲ್ಲ. ಆದರೂ ಈಗ ಬಿಎಸ್.ಪಿ - ಬಿಜೆಪಿಯನ್ನು ಅಧಿಕಾರದಿಂದಿಳಿಸಲು ಪ್ರತಿಪಕ್ಷಗಳ ಮೈತ್ರಿ ಬೆಸೆಯುವಲ್ಲಿ ಈಗ ಅಜಿತ್ ಸಿಂಗ್ ಏನೂ ಅಡ್ಡಿಯಾಗುವಂತೆ ಕಾಣುತ್ತಿಲ್ಲ.

ಬಿಟ್ಟರೂ ಈ ಸಮಯಸಾಧಕ ಕೂಟದ ಸರ್ಕಾರ ಬೀಳುವ ಪರಿಸ್ಥಿತಿ ಉಂಟಾಗಿದೆ. ಈಗ 81 ಲೋಕಸಭಾ ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿನ ಬೆಳವಣಿಗೆ ರಾಷ್ಟ್ರದ ರಾಜಕಾರಣದ ಮೇಲೂ ಪರಿಣಾಮ ಬೀರಲಿದೆ. ಉತ್ತರ ಪ್ರದೇಶದಲ್ಲಿ ಬಿಜೆಪಿಯ ಸೋಲು ಆ ಪಕ್ಷವನ್ನು ಕಾಲ್ಗಟ್ಟಬಹುದು.



ಸಹಜವಾಗಿಯೇ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್‌ನ ಮುಖಂಡರು ಬಿಎಸ್.ಪಿ.-ಬಿ.ಜೆ.ಪಿ. ಸರಕಾರವನ್ನು ಬೀಳುವ ಅವಕಾಶ ಒಂದಿದೆ ಎಂದು ಬೇಗನೇ ಅರಿತಿದ್ದಾರೆ. ಈ ಪಕ್ಷಗಳ ಮುಖಂಡರು ಅಜಿತ್ ಸಿಂಗ್‌ರೊಂದಿಗೆ ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ. ಅವರ ಮೊದಲು ಅಜಿತ್ ಸಿಂಗ್, ಮುಲಾಯಂ ಸಿಂಗ್‌ಯಾದವ್ ಮತ್ತು ಸೋನಿಯಾ ಗಾಂಧಿ ಇತರ ಮುಖಂಡರ ಸಮ್ಮುಖ ಮಾತುಕತೆ ನಡೆಸಿದರು.

ಮಹತ್ವಪೂರ್ಣ ಬೆಳವಣಿಗೆ.

ಇದು ಹಲವು ದೃಷ್ಟಿಗಳಿಂದ ಒಂದು ಮಹತ್ವಪೂರ್ಣ ಬೆಳವಣಿಗೆ. ಹಲವು ವರ್ಷಗಳಿಂದ ಪರಸ್ಪರರನ್ನು ಸಂಶಯದಿಂದ ಕಾಣುತ್ತಿದ್ದ ಮುಲಾಯಂ ಮತ್ತು ಅಜಿತ್ ಬಹುಶಃ ಮೊದಲ ಬಾರಿಗೆ ಒಟ್ಟಾಗಿದ್ದಾರೆ. ಅಲ್ಲದೆ ಅಜಿತ್‌ಸಿಂಗ್ ತಾನು ಉತ್ತರ ಪ್ರದೇಶದ ಮುಖ್ಯಮಂತ್ರಿ ಪದದ ಸ್ಪರ್ಧೆಯಿಂದ ಹಿಂತೆಗೆದುಕೊಳ್ಳುತ್ತಿದ್ದೇನೆ ಎಂದೂ ಸಾರಿದ್ದಾರೆ.

ಇನ್ನೊಂದು ಸಕಾರಾತ್ಮಕ ಅಂಶವೆಂದರೆ ಮುಲಾಯಂ ಬಗ್ಗೆ ಕಾಂಗ್ರೆಸ್‌ನ ನಿಲುವಿನಲ್ಲಿ ಬಂದಿರುವ ಬದಲಾವಣೆ ಉತ್ತರ ಪ್ರದೇಶದಲ್ಲಿ ಫೆಬ್ರವರಿ 2002ರ ಚುನಾವಣೆಗಳ ನಂತರ ಮುಲಾಯಂ ಸಿಂಗ್ ಸೋನಿಯಾಗಾಂಧಿಯ ಬಗ್ಗೆ ತನ್ನ ಹಿಂದಿನ ನಿಲುವನ್ನು ಬದಲಿಸಿ ಬಿಜೆಪಿಯೇತರ ಸರಕಾರ ರಚಿಸಲು ಬೆಂಬಲ ಕೇಳಿದರು. ಆಗಿನ ಪರಿಸ್ಥಿಯಲ್ಲಿ ಒಂದು ಪರಸ್ಪರ ಒಪ್ಪಿದ ಕಾರ್ಯಕ್ರಮದ ಆಧಾರದಲ್ಲಿ ಈ ಎರಡು ಪಕ್ಷಗಳು ಸೇರಿದ್ದರೆ. ಬಿಜೆಪಿಗೆ ಜನತೆಯ ತೀರ್ಪನ್ನು ಸುಳ್ಳಾಗಿಸುವ ಅವಕಾಶ ದೊರೆಯುತ್ತಿರಲಿಲ್ಲ. ಮಹಾರಾಷ್ಟ್ರದಲ್ಲಿ ಬಿಜೆಪಿ - ಶಿವಸೇನೆಯನ್ನು ಹೊರಗಿಡಲು ತನ್ನನ್ನು ತೀವ್ರವಾಗಿ ಟೀಕಿಸುತ್ತಿದ್ದ ಶರದ್ ಪವಾರ್ ಎನ್.ಸಿ.ಪಿ. ಜತೆ ಮೈತ್ರಿ ಮಾಡಿಕೊಂಡಿರುವಾಗ ಉತ್ತರ ಪ್ರದೇಶದಲ್ಲಿ ಮುಲಾಯಂ ಜತೆ ಸೇರದಿರಲು ಕಾರಣಗಳಿರಲಿಲ್ಲ.

ಆದರೆ ಶ್ರೀಮತಿ ಸೋನಿಯಾ ಗಾಂಧಿ ಮೈತ್ರಿಗೆ ಮುಂದಾಗಲಿಲ್ಲವಷ್ಟೇ ಅಲ್ಲ, ಕಳೆದ ವಿಧಾನ ಪರಿಷತ್ ಚುನಾವಣೆಗಳಲ್ಲಿ ಆ ಪಕ್ಷದ ಸದಸ್ಯರು ಗೈರು ಹಾಜರಾಗಿ ಬಿಜೆಪಿಗೆ ಒಂದು ಸ್ಥಾನ ದೊರಕುವಂತಾಯಿತು. ಇದರಿಂದ ಈ ಎರಡು ಪಕ್ಷಗಳ ನಡುವೆ ವೈಷಮ್ಯ ಹೆಚ್ಚಿತು.

ಇದರ ಪರಿಣಾಮ ಕಾಂಗ್ರೆಸ್ ಮೇಲೆ ಆಗದಿರಲಿಲ್ಲ. ಬಿಎಸ್.ಪಿಯ ಜೊತೆಗೆ ಬಲಿಯಾಗಿ

ಕಾಂಗ್ರೆಸ್ ನಿಲುವಿನಲ್ಲಿ ಬದಲಾವಣೆ.

ಮುಲಾಯಂ ಸಿಂಗ್ ಬಗ್ಗೆ ಕಾಂಗ್ರೆಸ್‌ನ ದ್ವೇಷದಲ್ಲಿ ಇಳಿಕೆಯ ಜೊತೆಗೆ ಮೈತ್ರಿಗಳ ಬಗ್ಗೆ ಕಾಂಗ್ರೆಸ್‌ನ ನಿಲುವಿನಲ್ಲೂ ಬದಲಾವಣೆಯಾದಂತೆ ಕಾಣುತ್ತದೆ. ಮೇ 31 ರಂದು ಪತ್ರಿಕಾ ಸಮ್ಮೇಳನದಲ್ಲಿ ಶ್ರೀಮತಿ ಸೋನಿಯಾ ಗಾಂಧಿ ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವ ಮೈತ್ರಿಗಳಿಗೆ ವಿರೋಧಿಯಾಗಿಲ್ಲ ಎಂದರು. ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ, ಆರ್.ಎಲ್.ಡಿ. ಮತ್ತಿತರರೊಂದಿಗೆ ಮೈತ್ರಿಯ ಬಗ್ಗೆ ಆಶಾಭಾವನೆ ವ್ಯಕ್ತಪಡಿಸಿದರು.

ಈ ಹಿಂದೆ ಕಾಂಗ್ರೆಸ್ಸಿನ ಪಂಚಮರಿ ಸಭೆಯಲ್ಲಿ ತಮ್ಮ ಪಕ್ಷ ಏಕಾಂಗಿಯಾಗಿಯೇ ಕೇಂದ್ರದಲ್ಲಿ ಸರಕಾರ ರಚಿಸುವುದು ಎಂದು ಸಾರಲಾಗಿತ್ತು. ಈ ಡಂಭಾಚಾರಕ್ಕೆ ಅದು ಸಾಕಷ್ಟು ಬೆಲೆ ತೆತ್ತಿದೆ. ಅತ್ತ ಏಕಪಕ್ಷ ಸರಕಾರಗಳ ಯುಗ ಮುಗಿದಿದೆ ಎಂದು ಬೇಗನೇ ಅರಿತ ಬಿಜೆಪಿ ಅದರ ಪೂರ್ಣ ಲಾಭ ಪಡೆಯಿತು. ಸದ್ಯ ದೊಡ್ಡ (1998ರಲ್ಲಿ 14, 1999ರಲ್ಲಿ 27) ಪಕ್ಷಗಳ ಜೊತೆ ಕೈಜೋಡಿಸಿ ಅಧಿಕಾರ ಕಿತ್ತುಕೊಳ್ಳಲು ಕಾಂಗ್ರೆಸ್‌ನ ಆ ನೀತಿ ನೆರವಾಯಿತು. ಇತ್ತೀಚೆಗೂ ಹಿರಿಯ ಕಾಂಗ್ರೆಸ್ಸಿನ ಅರ್ಜುನ್ ಸಿಂಗ್ ಚುನಾವಣಾ ಪೂರ್ವ ಮೈತ್ರಿಗಳು, ಕೋಮುವಾದದ ವಿರುದ್ಧ ಹೋರಾಟದ ಬಗ್ಗೆ ಹೇಳಿದಾಗ ಅವರ ವಿರುದ್ಧ ಹರಿಹಾಯಲಾಯಿತು . ಆದರೆ ಅಜಿತ್ ಸಿಂಗ್‌ರ ರಾಜೀನಾಮೆಯ ನಂತರ ಇವೆಲ್ಲಾ ಬದಲಾದಂತೆ ಕಾಣುತ್ತದೆ.


ಅದೇನೇ ಇರಲಿ ಸಧ್ಯಕ್ಕೆ ಉತ್ತರ ಪ್ರದೇಶ ವಿಧಾನಸಭೆಯ ತುರ್ತು ಅಧಿವೇಶನವನ್ನು ತಕ್ಷಣವೇ ಕರೆಯುವಂತೆ ಮಾಡುವತ್ತ ವಿರೋಧಪಕ್ಷಗಳು ಗಮನ ಕೇಂದ್ರೀಕರಿಸಬೇಕು.

ಎಡಪಕ್ಷಗಳ ಪಾತ್ರ

ಇಂತಹ ಸನ್ನಿವೇಶದಲ್ಲಿ ಎಡ ಪಕ್ಷಗಳ ಪಾತ್ರವೇನು ಎಂಬುದು ನಿರ್ಣಾಯಕ ಪ್ರಶ್ನೆ. ಕೆಲವು ದಿನ್ನ ಎಡಪಕ್ಷಗಳು ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ

ಪುಟ 8 ಕ್ಕೆ

ವಿದ್ಯುತ್ ಕ್ಷೇತ್ರದ ಸುಧಾರಣೆ ಹೆಸರಿನಲ್ಲಿ ತರಲಾಗುತ್ತಿರುವ ಕ್ರಮಗಳು ವಿದ್ಯುತ್ ಕ್ಷೇತ್ರವನ್ನು ಖಾಸಗಿ ಕಂಪನಿಗಳಿಗೆ ಮುಕ್ತವಾಗಿ ಒಪ್ಪಿಸುವಂತಹವು. ಈಗಿನ ವಿದ್ಯುತ್ ಮಸೂದೆ ಅದಕ್ಕೆ ಅಧಿಕೃತ ಮುದ್ರೆ ಒತ್ತಲಿದೆ. ಇಂತಹ ನೀತಿ ಅಳವಡಿಸಿದವರ ಪಾಡೇನು ? ಒಂದು ನೋಟವಿಲ್ಲಿ




ವಿದ್ಯುತ್ : ಬೆನ್ನಟ್ಟಿರುವ ಲೂಟಿಕೋರರ

ಖಾಸಗೀರಂಗದಲ್ಲಿರುವ 'ದಕ್ಷತೆ' ಸಾರ್ವಜನಿಕ ಕ್ಷೇತ್ರದಲ್ಲಿಲ್ಲ. ಪರಿಣಾಮವಾಗಿ ಗ್ರಾಹಕರು (ಅಂದರೆ ಜನಸಾಮಾನ್ಯರು) ಉತ್ತಮ 'ಸೇವೆ' ಹಾಗೂ 'ಸೌಲಭ್ಯ'ಗಳಿಂದ ವಂಚಿತರಾಗುತ್ತಿದ್ದಾರೆ. ಆದುದರಿಂದಲೇ ಖಾಸಗೀಕರಣವೆಂಬುದು 'ಜನಪರ'ವೇ ಹೊರತು ಜನವಿರೋಧಿಯಲ್ಲ" - ಇದು, ಜಾಗತೀಕರಣದ ತುತ್ತೂರಿ ಊದುವವರು ದಿನನಿತ್ಯ ಹರಿಯಬಿಡುವ ಹಲವಾರು ಸಬೂಬುಗಳಲ್ಲಿ ಒಂದು. ಲಾಭಕೋರತನ ಮತ್ತು ಲೂಟಿಯೇ ಪ್ರಧಾನವಾದ ಆರ್ಥಿಕ ನೀತಿಯನ್ನು ಜಾರಿಗೊಳಿಸುವಾಗ ಅದರ ದುಷ್ಪರಿಣಾಮಗಳ ಕಟು ವಾಸ್ತವ ಮತ್ತು ಕಹಿ ಅನುಭವಗಳನ್ನು ಮರೆಮಾಚಲು ಇಂತಹ ಹಲವಾರು ಭ್ರಮೆಗಳನ್ನು ಆಳುವ ಜನ ಎಣೆಯಿಲ್ಲದೆ ಹರಡುತ್ತಾರೆ. ಕಡಿಯುವ ಮುನ್ನ ಕುರಿಯ ಕತ್ತು ಸವರಿದಂತೆ.

ವಿದ್ಯುತ್‌ರಂಗದ ಖಾಸಗೀಕರಣದ ಪ್ರಕ್ರಿಯೆ ಕೂಡಾ ಇಂತಹ ದಗಲಬಾಜಿತನದ ನಿದರ್ಶನಗಳಲ್ಲೊಂದು.

ಡಾ. ಅಂಬೇಡ್ಕರರು ರೂಪಿಸಿದ 1948 ರ ವಿದ್ಯುತ್ ಮಸೂದೆಯ ಮುಖ್ಯ ಉದ್ದೇಶ, ವಿದ್ಯುತ್ ಕ್ಷೇತ್ರವನ್ನು ವಿಸ್ತರಿಸಿ ಕಡಿಮೆ ವೆಚ್ಚದಲ್ಲಿ ವಿದ್ಯುತ್ತನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಬಳಸುವುದಾಗಿತ್ತು. ಈಗ ಸಂಸತ್ತಿನ ಕೇಂದ್ರ ಸರ್ಕಾರ ಮಂಡಿಸಿರುವ 'ವಿದ್ಯುಚ್ಛಕ್ತಿ ವಿಧೇಯಕ 2001' (ಬಹುಶಃ ಈಗ ಅದನ್ನು 2003 ಎಂದು ಬದಲಾಯಿಸಬಹುದು) ಉದ್ದೇಶ ಬೆಳವಣಿಗೆಯಲ್ಲ. ಅಭಿವೃದ್ಧಿಯೂ ಅಲ್ಲ. ವಿದ್ಯುತ್ ರಂಗವನ್ನು ಸಕ್ಷಮಗೊಳಿಸುವುದಂತೂ ಅಲ್ಲವೇ ಅಲ್ಲ. ಹಾಗಾದರೆ ಇನ್ನೇನು? ಬೇರೇನಿದೆ? ಲಾಭ! ಈ ಕ್ಷೇತ್ರದಿಂದ ಸಾಧ್ಯವಾದಷ್ಟೂ ಲಾಭವನ್ನು ಕೊಳ್ಳೆ ಹೊಡೆಯುವ ಹವಣಿಕೆ. ವಿಶ್ವಬ್ಯಾಂಕ್ ಮತ್ತಿತರ ಸಂಸ್ಥೆಗಳು ಮತ್ತು ಅವುಗಳ 'ಸಲಹೆಗಾರರು' ಲಾಗಾಯ್ತಿನಿಂದ ಈ ಕರಡು ಮಸೂದೆಯು ಇದೊಮ್ಮೆ ಅಂಗೀಕೃತವಾದಲ್ಲಿ, ಅವರ ಹಂಚಿಕೆ ಫಲಿಸುತ್ತದೆ. ಬಾಜಪ ಹಾಗೂ ಕಾಂಗ್ರೆಸ್ ಪಕ್ಷಗಳ ಗುರಿಯೂ ಈಡೇರುತ್ತದೆ. ಬೇಕಾಬಿಟ್ಟಿ ಕಬಳಿಕೆಗಾಗಿ ಇನ್ನೊಂದು ಮಹತ್ವದ ಕ್ಷೇತ್ರವನ್ನು ಖಾಸಗೀ ಕುಳಗಳಿಗೆ ತೆರೆದಿಟ್ಟಂತಾಗುತ್ತದೆ.



ವಿಶ್ವಸಂಸ್ಥೆ ಆರ್ಥಿಕ ಸಲಹೆಗಾರ

ಈ ನಡುವೆ, ಮಾರುಕಟ್ಟೆ ಪ್ರೇರಿತ ವಿದ್ಯುತ್ ರಂಗದ ಸುಧಾರಣೆಗಳು ನೆಲಕಚ್ಚಿರುವ ನಿದರ್ಶನಗಳಿಂದ ನಮ್ಮ ಆಳುವ ಜನರಾಗಲೀ, ಅವರ ಮುಖವಾಣಿಗಳಾಗಿರುವ ಮಾಧ್ಯಮಗಳಾಗಲೀ ಪಾಠ ಕಲಿತಂತೆ ಕಾಣುವುದಿಲ್ಲ. ಅಮೇರಿಕೆಯ ಕ್ಯಾಲಿಫೋರ್ನಿಯಾ ರಾಜ್ಯದ ವಿದ್ಯುತ್ ಬಿಕ್ಕಟ್ಟಿನ ಬಗ್ಗೆ ಪುಂಜಾನುಪುಂಜವಾಗಿ ಹೊರಬರುತ್ತಿರುವ ವರದಿಗಳನ್ನು ತಿಲಮಾತ್ರವಾದರೂ ಉಲ್ಲೇಖಿಸುವ ಗೋಜಿಗೆ ನಮ್ಮದೇಶದ ಮಾಧ್ಯಮಗಳು ಹೋಗುತ್ತಿಲ್ಲ. ಸತ್ಯ ಮರೆಮಾಚಿದರೆ ತಾನೇ, ಲೂಟಿಗೆ, ಕೊಳ್ಳೆಗೆ ಅವಕಾಶವಿರುವುದು!

ವಿದ್ಯುತ್ ಕ್ಷೇತ್ರವನ್ನು 'ಸ್ಪರ್ಧೆಗೆ' ಒಡ್ಡಿ ಆ ಮೂಲಕ ಉತ್ತಮ ವಿದ್ಯುತ್ ಪೂರೈಕೆಯನ್ನು ಕಡಿಮೆ ಖರ್ಚಿನಲ್ಲಿ ಸಾಧಿಸುವ 'ಕನಸ' ನ್ನು ತೋರಿಸುತ್ತಾ, ಕ್ಯಾಲಿಫೋರ್ನಿಯಾದ ರಾಜ್ಯ ಸರ್ಕಾರ ವಿದ್ಯುತ್ ಉತ್ಪಾದನೆ, ಮಾರಾಟ ಮತ್ತು ವಿತರಣೆಯ ಎಲ್ಲಾ ಹಂತಗಳನ್ನೂ ಖಾಸಗೀಯವರಿಗೆ ತೆರೆದಿಟ್ಟಿತು. ಕೇವಲ 34000 ಮೆಗಾವ್ಯಾಟ್‌ಗಳಷ್ಟು ಮಾತ್ರಕ್ಕೆ ಬೇಡಿಕೆ ಸೀಮಿತವಾಗಿದ್ದ ಮಾರುಕಟ್ಟೆಯಲ್ಲಿ ಉತ್ಪಾದನಾ ಸಾಮರ್ಥ್ಯ ಇದ್ದದ್ದು 50,000 ಮೆಗಾವ್ಯಾಟ್‌ಗಳಷ್ಟು. ಇಲ್ಲಿ ಉತ್ಪಾದಕರ ನಡುವೆಯೇ ಸ್ಪರ್ಧೆ ಏರ್ಪಟ್ಟು, ವಿದ್ಯುತ್ ಅಗ್ಗವಾಗುತ್ತಿದೆ ಎಂದೇ ಭಾವಿಸಿ, ಅದರಂತೆಯೇ ಪ್ರಚಾರ ನಡೆದಿತ್ತು.

ಆದರೆ ಆದದ್ದು ಬೇರೆಯೇ. ಅಗ್ಗವಾಗುವುದರ ಬದಲು, ವಿದ್ಯುತ್ ಅತ್ಯಂತ ದುಬಾರಿಯಾಗಿ, 2000 ವರ್ಷವೊಂದರಲ್ಲೇ ಕ್ಯಾಲಿಫೋರ್ನಿಯಾದ ವಿತರಕರು ಹಾಗೂ ಬಳಕೆದಾರರು ಸುಮಾರು 2.2 ಲಕ್ಷ ಕೋಟಿ ರೂಪಾಯಿಗಳಷ್ಟು (50 ಬಿಲಿಯ ಡಾಲರುಗಳು) ಭಾರೀ ನಷ್ಟ ಅನುಭವಿಸಿದರು. ಕೊನೆಗೆ ಸರ್ಕಾರವೇ ವಿದ್ಯುತ್ ಸೇವೆಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕಾಯಿತು.

ರತ್ನಾಕರ ಶೆಟ್ಟಿ

'ಸುಧಾರಣೆ'ಯ ಹೆಸರಿನಲ್ಲಿ ಕ್ಯಾಲಿಫೋರ್ನಿಯಾದ ವಿದ್ಯುತ್ ಕ್ಷೇತ್ರವನ್ನು ಖಾಸಗೀ ಕ್ಷೇತ್ರಕ್ಕೆ ಒಪ್ಪಿಸುವ ಪ್ರಕ್ರಿಯೆ ಆರಂಭವಾದಾಗ, ಅಲ್ಲಿನ ವಿತರಕರು (ಅಂದರೆ ಬಳಕೆದಾರರಿಗೆ ವಿದ್ಯುತ್ ಪೂರೈಸುವವರು) ಕೆಲವು ವರ್ಷಗಳವರೆಗೆ ಬೆಲೆ ಏರಿಸಬಾರದೆಂಬ ಕಟ್ಟಳೆಗೆ ಒಪ್ಪಿದ್ದರು. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಬೆಲೆಗಳು ಇಳಿಯುತ್ತವೆ ಎಂಬುದೇ ಅವರ ನಂಬಿಕೆಯಾಗಿತ್ತು.

ಆದರೆ ಉತ್ಪಾದಕರು ಹಾಗೂ ಸಗಟು ಮಾರಾಟಗಾರರು ಸಂಚು ನಡೆಸಿ ಕೃತಕ ಅಭಾವ ನಿರ್ಮಿಸಿದಾಗ ವಿತರಕರು ಕಂಗಾಲಾದರು. ಮಾರು ಬೆಲೆ ಏರಿಸುವಂತಿರಲಿಲ್ಲ. ಆದರೆ ಖರೀದಿ ಮಾತ್ರ ದುಬಾರಿಯಾಗತೊಡಗಿತು. ಪರಿಣಾಮವಾಗಿ ವಿತರಕ ಕಂಪನಿಗಳೆಲ್ಲಾ ದಿವಾಳಿಯಾದವು. ಹಿಂದೆಂದೂ ಇಲ್ಲದಂತಹ ಹಾಹಾಕಾರದ ಪರಿಸ್ಥಿತಿ ಉಂಟಾಗಿ, ಇಡೀ ಕ್ಯಾಲಿಫೋರ್ನಿಯಾ ವಿದ್ಯುತ್ ವಿನಿಮಯ ಕೇಂದ್ರವನ್ನು ವಿಸರ್ಜಿಸಲಾಯಿತು ಹಾಗೂ ಸಗಟು ಖರೀದಿಯ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡಿತು.

ಈ ಮಧ್ಯೆ, 'ಸುಧಾರಣೆ'ಯ ವೈಫಲ್ಯಕ್ಕೆ ಕಾರಣಗಳನ್ನು ಗುರುತಿಸಲು ಡಿಕ್ ಚೆನಿ (ಅಮೇರಿಕೆಯ ಈಗಿನ ಉಪಾಧ್ಯಕ್ಷ) ಯ ನೇತೃತ್ವದ ಸಮಿತಿಯೊಂದನ್ನು ನೇಮಿಸಲಾಯಿತು. ಖಾಸಗೀ ಕುಳಗಳ ನಿಕಟವರ್ತಿಯಾಗಿದ್ದ ಈ ಸಮಿತಿ ವಿದ್ಯುತ್ ಬಿಕ್ಕಟ್ಟಿಗೆ ಪರಿಸರವಾದಿಗಳು ಹಾಗೂ ಕ್ಯಾಲಿಫೋರ್ನಿಯಾದ ಬಳಕೆದಾರರೇ ಕಾರಣ ಎಂದು ದೂಷಿಸಿತು! ಪಾಪ ಬೇರಾರೂ ಸಿಗಲಿಲ್ಲ ಆ ಸಮಿತಿಗೆ! ಯಾವುದೇ ರೀತಿಯ ಸರ್ಕಾರಿ ಮಧ್ಯಪ್ರವೇಶ ಮಾರುಕಟ್ಟೆಯನ್ನು 'ವಿರೂಪಗೊಳಿಸುತ್ತದೆ' ಎಂದು ಅಪ್ಪಣೆ ಕೊಡಿಸಿದ ಆ ಸಮಿತಿ ಕೊನೆಗೆ ಸೂಚಿಸಿದ ಪರಿಹಾರಗಳೇನು ಗೊತ್ತೆ?

ಪರಿಸರ ಮಾಲಿನ್ಯದ ವಿರುದ್ಧವಿರುವ ಎಲ್ಲಾ ನಿಯಮಾವಳಿಗಳನ್ನು ರದ್ದುಪಡಿಸುವುದು, ಅಲಾಸ್ಕದ ತುಂಡ್ರಾ ಪ್ರದೇಶದಲ್ಲಿನ ತೈಲ ನಿಕ್ಷೇಪಕ್ಕಾಗಿ ಬಾವಿಗಳನ್ನು ಕೊರೆಯುವುದು ಮತ್ತು ಏರಿರುವ ವಿದ್ಯುತ್ ಬೆಲೆಗಳನ್ನು ಅದೇ ಮಟ್ಟದಲ್ಲಿರುವಂತೆ ಮಾಡುವುದು! ಇದರಿಂದಾಗಿ ಹೊಸ ಹೊಸ ಸ್ಥಾವರಗಳನ್ನು ನಿರ್ಮಿಸಲು ಬಂಡವಾಳಿಗರು ಉತ್ಸುಕರಾಗಿ ಮುಂದೆ ಬರುತ್ತಾರೆ ಎಂದೂ ಆ ಸಮಿತಿ ಹೇಳಿತು.

ಆದರೆ ಕ್ಯಾಲಿಫೋರ್ನಿಯಾ ಸರ್ಕಾರ ಚೆನಿ ಸಮಿತಿಯ ವರದಿ ಹಾಗೂ ಶಿಫಾರಸ್ಸುಗಳನ್ನು ಸಾರಾ ಸಗಟಾಗಿ ತಿರಸ್ಕರಿಸಿತು. ವಿದ್ಯುತ್ ಬೆಲೆಗಳ ಮೇಲೆ ನಿಯಂತ್ರಣ ಹೇರಿತು. ದೀರ್ಘಾವಧಿ ಒಪ್ಪಂದದ ಆಧಾರದಲ್ಲಿ ವಿದ್ಯುತ್‌ನ ಖರೀದಿ ನಡೆಸಿತು. ಲಾಭ ಪಿಪಾಸುಗಳು ಸುಮ್ಮನಿರಲಿಲ್ಲ. ಸರ್ಕಾರದ ಕ್ರಮಗಳಿಂದಾಗಿ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸಲಿದೆ ಎಂದು ಬೊಬ್ಬೆ ಹೊಡೆದರು. ಕ್ಯಾಲಿಫೋರ್ನಿಯಾದ ಜನತೆ ಬೆಳಕನ್ನೇ ಕಾಣಲಾರದ ದುಸ್ಥಿತಿ ಬರಲಿದೆ ಎಂದು ಹಪಹಪಿಸಿದರು. 2002 ರ ಬೇಸಿಗೆ ವಿದ್ಯುತ್ ಕ್ಷಾಮ ತರಲಿದೆ ಎಂದು ನಿರ್ಧರಿಸಿಯೇಬಿಟ್ಟರು. ಮಾಧ್ಯಮಗಳೂ ಸಹ ಅವರ ಜತೆಗೇ ಇದ್ದುವಲ್ಲ. ಆದರೆ ಅಂತಹುದ್ದೇನೂ ಆಗಲಿಲ್ಲ. ಚೇನಿ ಸಮಿತಿಯು ಶಿಫಾರಸ್ಸುಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಸರ್ಕಾರ ನಡೆಸಿದ ಪ್ರಯತ್ನಗಳಿಂದಾಗಿ ಪರಿಸ್ಥಿತಿ ಹತೋಟಿಗೆ ಬಂತು. ಬಿಕ್ಕಟ್ಟು ಶಮನವಾಯಿತು.

ಇದೆಲ್ಲಾ ಆದದ್ದಾದರೂ ಹೇಗೆ? ಕ್ಯಾಲಿಫೋರ್ನಿಯಾದ ಸಾರ್ವಜನಿಕ ಸೇವಾ ಆಯೋಗ ಮತ್ತು ವಿದ್ಯುತ್ ಮೇಲುಸ್ತುವಾರಿ ನಿಗಮಗಳು ನಡೆಸಿದ ವ್ಯಾಪಕ ತನಿಖೆಯ ನಂತರ ಸತ್ಯ ನಿಧಾನವಾಗಿಯಾದರೂ ಹೊರಬರುತ್ತಿದೆ. ಬೇಕೆಂದೇ ಬಿಕ್ಕಟ್ಟಿನ ವಾತಾವರಣವನ್ನು ಸೃಷ್ಟಿಸಿ, ಅಲ್ಲಿನ ವಿದ್ಯುತ್ ಉತ್ಪಾದಕರು ಮತ್ತು ಸಗಟು ಮಾರಾಟಗಾರರು ಅಪಾರ ಪ್ರಮಾಣದ ಲಾಭವನ್ನು ಕೊಳ್ಳೆಹೊಡೆದಿದ್ದು ಈಗ ಬಹಿರಂಗವಾಗಿದೆ. ಮಾರುಕಟ್ಟೆಯ ನಿಯಮದಂತೆ ಬೆಲೆಯಲ್ಲಿ ಕಡಿತವಾಗುವುದರ ಬದಲು, ವಿದ್ಯುತ್‌ನ ಬೆಲೆ ಗಗನಕ್ಕೇರಿದುದಕ್ಕೆ ಕಾರಣಗಳನ್ನು ಕೆದಕಲು ನಡೆಸಿದ ಈ ತನಿಖೆಯಿಂದಾಗಿ, ಲಾಭಪಿಪಾಸುಗಳ ದೊಡ್ಡ ಸಂಚಿನ ಜಾಲವೇ ಬಯಲಾಯಿತು.

ಎಲ್ಲಾ ಉತ್ಪಾದಕರೂ ಒಂದೇ ಸಮಯದಲ್ಲಿ ತಮ್ಮ ಘಟಕಗಳನ್ನು ದುರಸ್ತಿಯ ನೆಪದಲ್ಲಿ ಸ್ಥಗಿತಗೊಳಿಸಿ, ಕೃತಕ ಅಭಾವ ಸೃಷ್ಟಿಸಿದ್ದೇ ಅಲ್ಲದೆ, ಅಂತಹ ಪರಿಸ್ಥಿತಿಯ ಲಾಭ ಪಡೆದು ಬೆಲೆಗಳನ್ನು ಯದ್ವಾತದ್ವಾ ಏರಿಸಿ ಅಪಾರ ಪ್ರಮಾಣದ ಕೊಳ್ಳೆ ಹೊಡೆದ ಸತ್ಯ ಈಗ ಬಯಲಾಗಿದೆ. ಉತ್ಪಾದಕರೆಲ್ಲರೂ ಈ ಸಂಚಿನಲ್ಲಿ ಭಾಗಿಯಾಗಿದುದ್ದಕ್ಕೆ ಹೇರಳವಾದ ಸಾಕ್ಷ್ಯಾಧಾರಗಳೂ, ದಾಖಲೆಗಳೂ ಲಭ್ಯವಾಗಿವೆ. 44000 ಕೋಟಿ ರೂಪಾಯಿಗಳನ್ನು (8.9 ಬಿಲಿಯನ್ ಡಾಲರು) ಸರ್ಕಾರ ಉತ್ಪಾದಕರನ್ನು ಕೇಳಿದೆ.

ತನಿಖೆ ನಡೆಸಿದ ಸಂಸ್ಥೆಗಳು ಸಹ ಮೊದ ಮೊದಲು ಸರ್ಕಾರದ ಮಧ್ಯಪ್ರವೇಶಕ್ಕೆ ಅನುಮತಿ ನೀಡಲಿಲ್ಲ. ಎರಡು ವರ್ಷಗಳ ಸುದೀರ್ಘ ಅವಧಿಯ ನಂತರವೇ ಈ ಬಿಕ್ಕಟ್ಟು ಮಾನವ ನಿರ್ಮಿತವಾದದ್ದು ಮತ್ತು ಲಾಭಕೋರತನದಿಂದಾಗಿ ಪ್ರೇರಿತವಾದದ್ದು ಎಂಬ ಸತ್ಯವನ್ನು ಒಪ್ಪಲೇಬೇಕಾಗಿ ಬಂತು. ಕೆಲ ಉತ್ಪಾದಕರು ಮತ್ತು ಮಾರಾಟಗಾರರು ಸುಮಾರು 9000 ಕೋಟಿ ರೂಪಾಯಿಗಳನ್ನು ಮರುಪಾವತಿ ಮಾಡಬೇಕೆಂದು ಸಮಿತಿ ಆದೇಶಿಸಿತು. ತನ್ನ ಈ ಅಂದಾಜು ತಪ್ಪೆಂದೂ, ಈ ಪ್ರಕರಣದಲ್ಲಿ ನಡೆದ ಲೂಟಿಯ ಪ್ರಮಾಣ ಬಹಳ ಹೆಚ್ಚೆಂದೂ ಸಮಿತಿ ಇದೀಗ ಒಪ್ಪಿಕೊಂಡಿದೆ ಇಷ್ಟೆಲ್ಲಾ ಆದ ನಂತರವೂ, ಕ್ಯಾಲಿಫೋರ್ನಿಯಾದ ಅನುಭವಗಳು ಮರುಕಳಿಸದ ಹಾಗೆ ವಿದ್ಯುತ್ ರಂಗವನ್ನು 'ಸುಧಾರಿಸುವ' ಬಗೆ ಹೇಗೆ ಎಂಬ ಬಗ್ಗೆ ಬಹಳಷ್ಟು ಲೇಖನಗಳು ಇದೀಗ ಹೊರಬರುತ್ತಿವೆ. ಆದರೆ ಈ ಯಾವುದೇ ಬರಹಗಳಲ್ಲಿ ವಿದ್ಯುತ್ತಿನ ವಿಶಿಷ್ಟತೆಯನ್ನು ಪರಿಗಣಿಸಿಯೇ ಇಲ್ಲ. ಉತ್ಪಾದನೆಯ ಹಂತದಿಂದ ಬಳಕೆಯವರೆಗೆ ಯಾವುದೇ ಹಂತದಲ್ಲಿ ವಿದ್ಯುತ್ತನ್ನು ಸಂಗ್ರಹಿಸಿ ಇಡಲಾಗುವುದಿಲ್ಲ. ಆದುದರಿಂದ ಇತರೆ 'ಸರಕುಗಳಂತೆ' ಅದನ್ನು ಅಕ್ರಮ ದಾಸ್ತಾನಿನಲ್ಲಿಟ್ಟ ಕೃತಕ ಅಭಾವ ಸೃಷ್ಟಿಸಲಾಗದು. ಹಾಗೆಯೇ ಅದರ ಬೇಡಿಕೆಯನ್ನು ಕಡಿಮೆ ಮಾಡಲಾಗದು. ಏಕೆಂದರೆ ಜನರಿಗೆ ವಿದ್ಯುತ್ತು ಬೇಕೇ ಬೇಕು. ಬೇಡಿಕೆ ಜಾಸ್ತಿ ಮತ್ತು ಪೂರೈಕೆ ಕಡಿಮೆ ಇರುವ ಮಾರುಕಟ್ಟೆಯಲ್ಲಿ ಕೊಳ್ಳುವವರ ನಡುವೆ ತೀವ್ರ ಪೈಪೋಟಿಯೇರ್ಪಟ್ಟು ಬೆಲೆ ಏರುತ್ತದೆ. ಕ್ಯಾಲಿಫೋರ್ನಿಯಾದಲ್ಲಿ ಆದದ್ದು ಹೀಗೆಯೇ. (ಆದರೆ ಪೂರೈಕೆಯ ಕೊರತೆಯನ್ನು ಕೃತಕವಾಗಿ ಸೃಷ್ಟಿಸಲಾಯಿತು ಎಂಬುದನ್ನು ನಾವು ಗಮನಿಸಬೇಕು) ವಿದ್ಯುತ್ ಕಡಿತದ ಭಯದಿಂದಾಗಿ ವಿತರಕರು ಉತ್ಪಾದನಾ ವೆಚ್ಚದ 20 ರಿಂದ 30 ಪಟ್ಟು ಬೆಲೆ ತೆತ್ತು ವಿದ್ಯುತ್ ಖರೀದಿಸಬೇಕಾಯಿತು. ನಮ್ಮ ದಾಭೋಲ್‌ನ ಕುಖ್ಯಾತ ಎನ್ರೋನ್ ಹೆಸರು ಯಾರೂ ಮರೆತಿಲ್ಲ. ಈ ಕಂಪನಿ ಕೂಡಾ ಸುಮಾರು 2500 ಕೋಟಿ ರೂಪಾಯಿಗಳಷ್ಟು ಕೊಳ್ಳೆ ಹೊಡೆದಿತ್ತು ಎಂಬ ಸತ್ಯ ಬಯಲಾಗಿದೆ.

ಈಗ ನಮ್ಮ ಸರ್ಕಾರ ಮಂಡಿಸಿರುವ ವಿದ್ಯುತ್ ಮಸೂದೆಗೆ ಬರೋಣ. ನಮ್ಮಲ್ಲಿ ವಿದ್ಯುತ್ತಿನ ತೀವ್ರ

ಪುಟ 10 ಕ್ಕೆ

...ಣ್ಣೀರು ಬಾವಿ ವಿದ್ಯುತ್ ಕಂಪನಿಗೆ 285.6 ಕೋಟಿ ರೂ!

...ನತೆಗೆ ಇನ್ನಷ್ಟು ಹೊರೆ

...2001ನೇ ವರ್ಷದ ನವೆಂಬರ್‌ನಲ್ಲಿ ಆರಂಭವಾದ ವಿವಾದದ ನಾಟಕಕ್ಕೆ ...ದೀಗ ಅಂತಿಮ ತೆರೆ ಬಿದ್ದಿದೆ. ಕೆಪಿಟಿಸಿಎಲ್, ತಣ್ಣೀರು ಬಾವಿ ಕಂಪನಿಗೆ ...85.6 ಕೋಟಿ ರೂ. ನೀಡಬೇಕೆಂದು ನ್ಯಾಯ ಪಂಚಾಯತಿ ನಿರ್ಧರಿಸಿದೆ. ...ನಿಜಕ್ಕೂ ಹೇಳಬೇಕೆಂದರೆ ತಣ್ಣೀರು ಬಾವಿ ಕಂಪನಿಯು ಕೆಪಿಟಿಸಿಎಲ್ ...ಾತೆಯಿಂದ ಯಾವುದೇ ಮುನ್ಸೂಚನೆ ನೀಡದೆ ಹಣ ಪಡೆದುಕೊಂಡಿದೆ. ಈ ಹೊರೆಯನ್ನು ವಿದ್ಯುತ್ ಗ್ರಾಹಕ ಅಥವಾ ಸರ್ಕಾರದ ಮೂಲಕ ...ನಸಾಮಾನ್ಯರು ಮುಂದಿನ ದಿನಗಳಲ್ಲಿ ಭರಿಸಬೇಕಾಗಿದೆ. ಎಂತಹ ಘೋರ ವಂಚನೆ !

■ ಬಾಲಕೃಷ್ಣ ಶೆಟ್ಟಿ

...ರ್ನಾಟಕ ವಿದ್ಯುತ್ ಪ್ರಸರಣ ನಿಗಮ ...ಟಿ.ಸಿ.ಎಲ್) ಮತ್ತು ತಣ್ಣೀರುಬಾವಿ ...ತ್ ಕಂಪನಿ (ಟಿ.ಬಿ.ಪಿ.ಸಿ) ಇವುಗಳ ನಡುವಿನ ...ದದಿಂದಾಗಿ 2001-02 ಮತ್ತು 2002-03 ...ವರ್ಷಕ್ಕೆ 285.6 ಕೋಟಿ ರೂ.ಗಳನ್ನು ...ಟಿ.ಸಿ.ಎಲ್. ತಣ್ಣೀರು ಬಾವಿ ಕಂಪನಿಗೆ ...ಬೇಕಾಗಿದೆ. ಮಾರ್ಚ್ 2005 ಹಣಕಾಸು ...ಅಂತ್ಯವಾಗುವ ಹೊತ್ತಿನಲ್ಲಿ ಇನ್ನೂ 600 ...700 ಕೋಟಿ ರೂ. ನೀಡಬೇಕಾಗುತ್ತದೆ. ...ತೀವ್ರವಾಗಿ ಪ್ರತಿಭಟಿಸದೆ ಹೋದಲ್ಲಿ ಈ ...ವಿದ್ಯುತ್‌ದರ ಹೆಚ್ಚಳದ ಮೂಲಕ ಗ್ರಾಹಕರ ...ಲೆ ಬೀಳುವುದರಲ್ಲಿ ಯಾವುದೇ ...ಮಾನವಿಲ್ಲ.

...ಡಪಕ್ಷಗಳು, ಪ್ರಗತಿಪರ ಸಂಘಟನೆಗಳು ...ುತ್ ಕ್ಷೇತ್ರವನ್ನು ಖಾಸಗೀಯವರಿಗೆ ...ಬಾರದು' ಎಂದು ಪದೇ ಪದೇ ...ಯಿಸುತ್ತಾ ಬಂದಿವೆ. ಆದರೆ ...ಬ್ಯಾಂಕ್‌ನಿಂದ ಹೇರಳವಾಗಿ ಸಾಲ ...ಯುತ್ತಿರುವ ಕಾಂಗ್ರೆಸ್, ಬಿಜೆಪಿ ಸರ್ಕಾರಗಳು ...ಕಾದ ಒತ್ತಡಕ್ಕೆ ಮಣಿದು ಅಲ್ಲಿನ ಕಂಪನಿಗಳು ...ದೇಶದ ವಿದ್ಯುತ್ ಕ್ಷೇತ್ರದಲ್ಲಿ ಹೇರಳ ...ಳಿಸುವಂತೆ ನೋಡಿಕೊಳ್ಳುತ್ತಿವೆ.

...ಮೇರಿಕಾದ ಎನ್ರಾನ್ ಕಂಪನಿ, ...ರಾಷ್ಟ್ರದಲ್ಲಿ ವಿದ್ಯುತ್ ಉತ್ಪಾದನೆ ಆರಂಭಿಸಿ, ...ಮುಳುಗಿ ಮಹಾರಾಷ್ಟ್ರದ ಜನತೆಯನ್ನು ...ರುಲ್ಲಿ ಮುಳುಗಿಸಿದ ಬಗ್ಗೆ ಈಗಾಗಲೇ ...ವರದಿಯಾಗಿದೆ. ಅದೇ ರೀತಿ ಒರಿಸ್ಸಾದಲ್ಲಿ ...ನಿರ್ವಹಿಸುತ್ತಿದ್ದ ಏಇಎಸ್ ಕಂಪನಿ ...ದೆ ಮುಚ್ಚಿಕೊಂಡು ಹೋಗಿತ್ತು. ...ಡದಲ್ಲಿರುವ 'ಮಿನಿಎನ್ರಾನ್' ಎಂದೇ ...ಳಿಸಿರುವ ತಣ್ಣೀರು ಬಾವಿ ಪವರ್ ಕಂಪನಿ ...ಜನತೆಯನ್ನು ಲೂಟಿ ಹೊಡೆಯುವುದನ್ನು ...ಮುಂದುವರೆಸಿದೆ.

...ಲೂಟಿ ಕೃತ್ಯಕ್ಕೆ ಸರ್ಕಾರದ ಆಶೀರ್ವಾದವೂ ...ವಿಶ್ವಬ್ಯಾಂಕ್ ಅಧಿಕಾರಿಗಳಿಂದ ...ಸ್‌ಗಿರಿ' ಪಡೆದ 'ಹೈಟೆಕ್' ಕೃಷ್ಣರ ಸರಕಾರ ...ು ಮೇಲೆ ಧಾಳಿ ಮಾಡುತ್ತಿದೆ. ಅದರ ...ಾಗಿಯೇ ತಣ್ಣೀರು ಬಾವಿ ಕಂಪನಿಗೆ, ...ಸಿ.ಎಲ್. ಮೂಲಕ 285.6 ಕೋಟಿ ...ಹೊರಟಿದೆ. ಅಂತಿಮವಾಗಿ ಈ ...ನ್ನು ಕರ್ನಾಟಕ ರಾಜ್ಯದ ತೆರಿಗೆದಾರ ...ವಿದ್ಯುತ್ ಗ್ರಾಹಕ ಭರಿಸಬೇಕಾಗುತ್ತದೆ ...ರಲ್ಲಿ ಎರಡು ಮಾತಿಲ್ಲ.

...ನ್ನೆಲೆ: ಅಮೇರಿಕಾ ಮೂಲದ ...ಇ.ಜಿ.(PSEG) ಗುಂಪಿಗೆ ಸೇರಿದ ...ಪವರ್ ಕಂಪನಿ (Chicago Power ...ಮತ್ತು ಹಿಂದಿನ ಕರ್ನಾಟಕ ಇಲೆಕ್ಟ್ರಿಸಿಟಿ ...ರ್ಡ್ (ಕೆ.ಇ.ಬಿ)ಯೊಂದಿಗೆ ಒಪ್ಪಂದ ...ಅದರ ಆಧಾರದಲ್ಲಿ ದಕ್ಷಿಣ ಕನ್ನಡ ...ಮಂಗಳೂರು ಕರಾವಳಿಯಿಂದ 7 ಕಿ.ಮೀ ...ಲ್ಲಿರುವ ಗುರುಪುರ ನದಿಯಲ್ಲಿ ತಣ್ಣೀರು ಬಾವಿ ಎನ್ನುವ ಪ್ರದೇಶದಲ್ಲಿ, 220 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವುಳ್ಳ ತೇಲುವ ತೆಪ್ಪದ ಮೇಲೆ (Large Mounted) ವಿದ್ಯುತ್ ಕಂಪನಿಯೊಂದನ್ನು ಸ್ಥಾಪಿಸಲಾಗಿತ್ತು. ಇದರ ಹೆಸರು 'ತಣ್ಣೀರು ಬಾವಿ ವಿದ್ಯುತ್ ಕಂಪನಿ'(ಟಿ.ಬಿ.ಪಿ.ಸಿ). ಈ ಕಂಪನಿ ಸ್ಥಾಪಿಸಲಾಗಿತ್ತು. ಎಂದರೆ, ಇದನ್ನು ಕಟ್ಟಿದವರು ದಕ್ಷಿಣ ಕನ್ನಡ ಜಿಲ್ಲೆಯ ಕೂಲಿಕಾರರಲ್ಲ ಅಥವಾ ಭಾರತ ದೇಶದ ಯಾವುದೇ ದುಡಿಯುವ ಜನರೂ ಅಲ್ಲ. ಈ ತೇಲುವ ಕಂಪನಿಯನ್ನು ದಕ್ಷಿಣ ಕೋರಿಯಾದಿಂದ ಹಡಗಿನಲ್ಲಿ ತಂದು ತಣ್ಣೀರು ಬಾವಿಯಲ್ಲಿ ಇರಿಸಲಾಗಿದೆ. ಇಲ್ಲಿ ಬೇಡವೆಂದಾಗ ಇನ್ನೊಂದು ಹಡಗಿನಲ್ಲಿ ಇನ್ನೊಂದೂರಿಗೆ ಅದನ್ನು ತೇಲಿಸಿಕೊಂಡು ಹೋಗಲಾಗುವುದು.

ಈ ಕಂಪನಿಯ ಯೋಜನಾ ವೆಚ್ಚ 934.65 ಕೋಟಿ ರೂ ಎಂದು ಅಂದಾಜು ಮಾಡಲಾಗಿದ್ದು, ಅದರಲ್ಲಿ ಡಾಲರ್ ರೂಪದಲ್ಲಿ 820.25 ಕೋಟಿ ಹಾಗೂ ರೂಪಾಯಿ ಆಧಾರದಲ್ಲಿ 114.40 ಕೋಟಿ ರೂ. ಖರ್ಚು ಮಾಡಲಾಗಿದೆ.

ನಿಗದಿತ ವೆಚ್ಚದ ಹೆಸರಿನಲ್ಲಿ ಲೂಟಿ : ತಣ್ಣೀರು ಬಾವಿ ಕಂಪನಿಯಿಂದ ವಿದ್ಯುತ್ ಖರೀದಿ ದರ ಯೂನಿಟ್ಟಿಗೆ 3.57 ರೂ. ಎಂದು ನಿಗದಿಪಡಿಸಿದ್ದರೂ ನಿಗದಿತ ವೆಚ್ಚ(Fixed Charges)ದ ಹೆಸರಿನಲ್ಲಿ ದರ ಹೆಚ್ಚಿಸಲಾಗಿದೆ. ಅಂದರೆ ಆ ಕಂಪನಿಯಿಂದ ವಿದ್ಯುತ್ ಖರೀದಿ ಮಾಡಲಿ ಅಥವಾ ಮಾಡದಿರಲಿ 1 ಯೂನಿಟ್ಟಿಗೆ 4 ಸೆಂಟ್ಸ್‌ನಂತೆ(ಒಂದು ಡಾಲರ್‌ಗೆ 100 ಸೆಂಟ್ಸ್) ಡಾಲರ್ ರೂಪದಲ್ಲಿ ಹಾಗೂ 1 ಯೂನಿಟ್ಟಿಗೆ 14.5 ಪೈಸೆಯಂತೆ ನಿಗದಿತ ವೆಚ್ಚ (fixed charges) ನೀಡಬೇಕಾಗುತ್ತದೆ. ಅಂದರೆ 220 ಮೆಗಾವಾಟ್ ಸಾಮರ್ಥ್ಯದ ಆ ಕಂಪನಿಯಿಂದ 187 ಮೆಗಾವಾಟ್ ವಿದ್ಯುತ್ ಖರೀದಿಸಿದರೆ (ಶೇ.85 load factor) 1 ಯೂನಿಟ್ ವಿದ್ಯುತ್ ಖರೀದಿ ದರ ಯೂನಿಟ್ಟಿಗೆ 5.65 ರೂ. ಆಗುತ್ತದೆ. ಒಂದು ವೇಳೆ ಕಡಿಮೆ ದರದಲ್ಲಿ ಬೇರೆ ಕಡೆ ವಿದ್ಯುತ್ ದೊರಕಿ, ತಣ್ಣೀರು ಬಾವಿ ಕಂಪನಿಯಿಂದ ವಿದ್ಯುತ್ ಖರೀದಿ ಮಾಡದಿದ್ದರೆ ಆ ಕಂಪನಿಗೆ ಪ್ರತಿ ವರ್ಷ ಸಾಧಾರಣ 160 ಕೋಟಿ ರೂ. ನೀಡಬೇಕಾಗುತ್ತದೆ. ಅದಕ್ಕೇ ನಿಗದಿತ ವೆಚ್ಚ ಅಥವಾ Fiexd Charges ಎಂದು ಹೇಳುವುದು. ಭಾಗಾಂಶ ಡಾಲರ್ ರೂಪದಲ್ಲಿಯೂ ಇರುವುದರಿಂದ ಒಟ್ಟು ಮೊತ್ತದಲ್ಲಿ ಏರಿಳಿತ ಆಗುತ್ತದೆ. ಅದರ ಭಾಗವಾಗಿಯೇ ಇದೀಗ ಎರಡು ವರ್ಷಗಳಿಗೆ 285.6 ಕೋಟಿ ರೂ. ನೀಡಬೇಕಾಗಿ ಬಂದಿದೆ.

ಹಾಗೆಯೇ ರಾಯಲಸೀಮಾ ಎನ್ನುವ ಇನ್ನೊಂದು ಖಾಸಗಿ ಕಂಪನಿಯಿಂದ ಯಾವುದೇ ವಿದ್ಯುತ್ ಖರೀದಿ ಮಾಡದೆ ಪ್ರತಿವರ್ಷ ನಿಗದಿತ ವೆಚ್ಚದ ಹೆಸರಿನಲ್ಲಿ 21.97 ಕೋಟಿ ರೂ.ಗಳನ್ನು ನೀಡಲಾಗುತ್ತಿದೆ.


ಉನ್ನತ ಅಧಿಕಾರಿಗಳು ಮತ್ತು ಸರಕಾರ ಶಾಮಿಲು:

ಈ (ಅ)ವ್ಯವಹಾರದಲ್ಲಿ ಕರ್ನಾಟಕ ರಾಜ್ಯ ಸರಕಾರ, ಕೆ.ಪಿ.ಟಿ.ಸಿ.ಎಲ್‌ನ ಕೆಲವು ಉನ್ನತ ಅಧಿಕಾರಿಗಳು ಹಾಗೂ ತಣ್ಣೀರು ಬಾವಿ ಕಂಪನಿಯ ಅಧಿಕಾರಿಗಳು ಶಾಮೀಲಾಗಿರುವುದು ಮೇಲುನೋಟಕ್ಕೆ ಕಂಡುಬರುತ್ತದೆ. 2001 ನವೆಂಬರ್‌ನಲ್ಲಿ ಈ ಕಂಪನಿಯು ತನ್ನ ಪ್ರಥಮ ಬಿಲ್ಲನ್ನು ಕೆ.ಪಿ.ಟಿ.ಸಿ.ಎಲ್ ಗೆ ನೀಡಿದಾಗ ನಿಗದಿತ ವೆಚ್ಚದ ವಿಚಾರದಲ್ಲಿ ತಗಾದೆ ಎತ್ತಲಾಯಿತು. ಆದರೆ ಕರ್ನಾಟಕ ರಾಜ್ಯ ಸರಕಾರದ ಅಡ್ವೋಕೇಟ್ ಜನರಲ್ ಪಿ.ಎಸ್.ಜಯರಾಂ ಅವರು ನೀಡಿದ ಅಭಿಪ್ರಾಯದಂತೆ ಇಂಧನ ಇಲಾಖೆಯ ಕಾರ್ಯದರ್ಶಿಯವರು ಡಿಸೆಂಬರ್1, 2001 ರಂದು ಹೊರಡಿಸಿದ ಆಜ್ಞೆಯ ಪ್ರಕಾರ ನಿಗದಿತ ವೆಚ್ಚವನ್ನು ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿತು.

ಈ ವಿವಾದವನ್ನು ಹೈಕೋರ್ಟಿನಲ್ಲಿ ಇತ್ಯರ್ಥಗೊಳಿಸಬೇಕು ಎಂದು ಬಯಸಿದ ಕೆ.ಪಿ.ಟಿ.ಸಿ.ಎಲ್‌ನ ಉನ್ನತ ಅಧಿಕಾರಿಗಳನ್ನು ಬೇರೆ ಇಲಾಖೆಗಳಿಗೆ ವರ್ಗಾಯಿಸಲಾಗಿತ್ತು. ಈ ಕುರಿತ ಕೆಲವು ಮಾಹಿತಿಗಳನ್ನು ಹೊರಗೆ ಹಾಕಲಾಗಿದೆ ಎಂಬ ಅನುಮಾನದ ಮೇಲೆ ಕೆಳ ಹಂತದ ಒಬ್ಬ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು ಎಂದು ವರದಿಯಾಗಿದೆ.

ಭಾರತ ದೇಶದ ಪ್ರಜಾಪ್ರಭುತ್ವದ ಆಧಾರದಲ್ಲಿ ಆಯ್ಕೆಯಾದ ಸರಕಾರದ ನಿರ್ಧಾರಗಳನ್ನೇ ಬದಲಿಸಬಲ್ಲ ಶಕ್ತಿ ಅಮೇರಿಕಾ ಮೂಲದ ಕಂಪನಿಗಳಿಗಿದೆ!

ಈಗ 285.6 ಕೋಟಿ ರೂ. ನೀಡಬೇಕೆಂದು ನಿರ್ಧರಿಸಿದವರು, ಒಪ್ಪಂದದ ಪ್ರಕಾರ ನೇಮಿಸಿದ ನ್ಯಾಯ ಪಂಚಾಯತಿ(arbitration)ಯ ಸದಸ್ಯರು. ಇದರಲ್ಲಿ ಕೆ.ಪಿ.ಟಿ.ಸಿ.ಎಲ್ ಪರವಾಗಿ ಒಬ್ಬರು, ತಣ್ಣೀರು ಬಾವಿ ಕಂಪನಿ ಪರವಾಗಿ ಒಬ್ಬರು, ಇನ್ನೊಬ್ಬರು 'ನ್ಯೂಟ್ರಲ್'. ಈ ನ್ಯಾಯ ಪಂಚಾಯತಿಯು ಒಮ್ಮತದ ಅಭಿಪ್ರಾಯದಲ್ಲಿ 285.6 ಕೋಟಿ ರೂ ನೀಡುವುದು 'ಸರಿಯಾಗಿದೆ' ಎಂದು ಅಭಿಪ್ರಾಯಪಟ್ಟಿದೆ.



ಅಮೇರಿಕಾದ ಮಾರ್ವಾಡಿ : ಸಾಮಾನ್ಯವಾಗಿ ಸುಳ್ಳು ಲೆಕ್ಕ ಬರೆದು, ಜಾಸ್ತಿ ಬಡ್ಡಿ ಹಾಕಿ, ವ್ಯಾಪಾರದ ಹೆಸರಿನಲ್ಲಿ ಜನರನ್ನು ಲೂಟಿ ಮಾಡುವವರನ್ನು ಮಾರ್ವಾಡಿ ಎಂದು ಹೇಳುವುದು ವಾಡಿಕೆ. ಇದು ಯಾವುದೇ ಜಾತಿ ಅಥವಾ ರಾಜ್ಯದ ಜನರಿಗೆ ಸೀಮಿತವಲ್ಲ. ಆ ವಾಡಿಕೆಯಂತೆ ತಣ್ಣೀರು ಬಾವಿ ಕಂಪನಿಯನ್ನು ಅಮೇರಿಕಾದ ಮಾರ್ವಾಡಿ ಎಂದೇ ಕರೆಯಬೇಕಾಗುತ್ತದೆ.

ಏಕೆಂದರೆ ತಣ್ಣೀರು ಬಾವಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿರುವುದು 7 ವರ್ಷಗಳಿಗೆ. ಈ 7 ವರ್ಷಗಳಿಗೆ, ಪ್ರತಿ ವರ್ಷ 160 ಕೋಟಿ ರೂ. ನಂತೆ ನಿಗದಿತ ವೆಚ್ಚ (ಡಾಲರ್‌ನಲ್ಲಿ ಹೆಚ್ಚು ಕಡಿಮೆ ಆದಂತೆ ನಿಗದಿತ ವೆಚ್ಚದಲ್ಲಿ ಏರಿಳಿತ ಉಂಟಾಗುತ್ತದೆ) ನೀಡಬೇಕಾಗುತ್ತದೆ. ಅಂದರೆ ಆ ಕಂಪನಿಯು ವೆಚ್ಚವಾಡಿದೆ ಎಂದು ಅಂದಾಜಿಸಲಾದ 934 ಕೋಟಿ ರೂ.ಗಿಂತಲೂ ಹೆಚ್ಚು ಹಣ ನಿಗದಿತ ವೆಚ್ಚವೊಂದರಲ್ಲೇ ಸಿಗುತ್ತದೆ. ವಿದ್ಯುತ್‌ನ್ನು ಮಾರಾಟ ಮಾಡಿದ್ದೇ ಆದಲ್ಲಿ ಸಾಧಾರಣ 2503 ಕೋಟಿ ರೂ. ಬರುತ್ತದೆ ಎಂದು ಅಂದಾಜಿಸಲಾಗಿದ್ದು ಶೇ.65 ರಷ್ಟು ಲಾಭ ನೀಡಿದಂತಾಗುತ್ತದೆ.

ಬದಲಾಗಿ ಸರಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ (ಕೆ.ಪಿ.ಸಿ) ಕ್ಕೆ ವಿದ್ಯುತ್ ಉತ್ಪಾದನೆಯನ್ನು ಒಪ್ಪಿಸಿದ್ದೇ ಆದಲ್ಲಿ ಸಾವಿರಾರು ಕೋಟಿ ರೂ. ಹಣ ಉಳಿಯುತ್ತಿತ್ತು. ಸಾವಿರಾರು ಜನರಿಗೆ ಉದ್ಯೋಗ ದೊರಕುತ್ತಿತ್ತು.


ದರ ಹೆಚ್ಚಳಕ್ಕೆ ದಾರಿ? ತಣ್ಣೀರು ಬಾವಿ ಕಂಪನಿಗೆ 285.6 ಕೋಟಿ ರೂ. ನೀಡಬೇಕಾಗುತ್ತದೆ ಎಂಬ ನೆಪವೊಡ್ಡಿ ವಿದ್ಯುತ್ ದರ ಹೆಚ್ಚಳಕ್ಕೆ ಕೆ.ಇ.ಆರ್.ಸಿ. ಗೆ ಅರ್ಜಿ ಸಲ್ಲಿಸಲು ಕೆ.ಪಿ.ಟಿ.ಸಿ.ಎಲ್ ತಯಾರಿ ನಡೆಸುತ್ತಿದೆ ಎಂದು ವರದಿಯಾಗಿದೆ. ಹಾಗೊಂದು ವೇಳೆ ಕೆ.ಇ.ಆರ್.ಸಿ ಒಪ್ಪಿದ್ದೇ ಆದಲ್ಲಿ ಯೂನಿಟ್ಟಿಗೆ ಈಗಿರುವ ದರಕ್ಕಿಂತ 1.80 ರೂ ಹೆಚ್ಚಳ ಆಗಲಿದೆ ಎಂದು ಅಂದಾಜು ಮಾಡಲಾಗಿದೆ.

2002 ರ ಹಣಕಾಸು ವರ್ಷದಲ್ಲಿ ತಣ್ಣೀರು ಬಾವಿ ಕಂಪನಿಯಿಂದ 935 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿಸಲು 493.52 ಕೋಟಿ ರೂ. ಹಾಗೂ 2003 ರ ಹಣಕಾಸು ವರ್ಷದಲ್ಲಿ 1560 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿಸಲು 750.66 ಕೋಟಿ ರೂ ಬೇಕಾಗುತ್ತದೆ ಎಂದು ಕೆ.ಪಿ.ಟಿ.ಸಿ.ಎಲ್, ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ)ಕ್ಕೆ ಸಲ್ಲಿಸಿದ ಮನವಿಯಲ್ಲಿ ವಾದಿಸಿತ್ತು. ಆದರೆ ನಿಯಂತ್ರಣ ಆಯೋಗವು 2002 ರಲ್ಲಿ 943 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿ ಮಾಡಲು 310.81 ಕೋಟಿ ರೂ. ಹಾಗೂ 2003 ರಲ್ಲಿ 1560 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿಸಲು 542.33 ಕೋಟಿ ರೂ.ಗೆ ಮಾತ್ರ ಒಪ್ಪಿಗೆ ನೀಡಿತ್ತು. ಇದರಿಂದ ಸಾಧಾರಣ 390 ಕೋಟಿ ರೂ. ಹೊರೆ ಗ್ರಾಹಕರ ಮೇಲೆ ಬೀಳುವುದನ್ನು ತಪ್ಪಿಸಲಾಗಿತ್ತು. ಈಗ ವಿದ್ಯುತ್ ದರ ಹೆಚ್ಚಳದ ತೂಗುಕತ್ತಿ ಗ್ರಾಹಕರ ಮೇಲೆ ಯಾವ ಕ್ಷಣದಲ್ಲಾದರೂ ಬೀಳಬಹುದು.

07.06.2003 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದ ವರದಿಯ ಪ್ರಕಾರ ರಾಜ್ಯ ಸರಕಾರವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧಿಕಾರವನ್ನು ತಾನೇ ತೆಗೆದುಕೊಳ್ಳುವ ಬಗ್ಗೆ ಮಸೂದೆ ತಯಾರಿಸುತ್ತಿದೆ ಎಂದು ತಿಳಿದು ಬಂದಿದೆ. ಅಂದರೆ ಕೆ.ಇ.ಆರ್.ಸಿ. ಮುಂದೆ ರಾಜಕೀಯ ಪಕ್ಷಗಳಿಗೆ, ಸಂಘಟನೆಗಳಿಗೆ, ಜನರಿಗೆ ವಾದ ಮಂಡಿಸುವ ಅವಕಾಶವೂ ದೂರವಾಗಲಿದೆ ಎಂಬ ಅನುಮಾನ ಬರುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ವಿದ್ಯುತ್ ನೀತಿಯ ವಿರುದ್ಧವಾಗಿ ಐಕ್ಯತೆಯಿಂದ ರಾಜ್ಯದಾದ್ಯಂತ ಹೋರಾಟ ನಡೆಸುವುದೊಂದೇ ಉಳಿದಿರುವ ದಾರಿ. ●

ಮಾರುಗಟ್ಟಲೆ ಸುಳ್ಳಿನ ಹಾರ ನೇಯ್ದವರು



ಪ.ಬಂಗಾಳದ ಪಂಚಾಯತ್ ಚುನಾವಣೆಯಲ್ಲಿ ಕೆಲವು ಪತ್ರಿಕೆಗಳು ಎಂಜಲು ಕಾಸಿಗೆ ಸುಳ್ಳು ಕಂತೆ ಸೃಷ್ಟಿಸಿ ತಮ್ಮ ಮಾನ ಹರಾಜಿಗಿಟ್ಟುಕೊಂಡವು. ಈ ಮಾಧ್ಯಮಗಳ ಭಯೋತ್ಪಾಕರ ವರಸೆಗಳಿಗೆ ಏನಾದರೂ ನೀತಿ ನಿಯತ್ತು, ಮಿತಿ ಇದೆಯೇ?

ಪಶ್ಚಿಮ ಬಂಗಾಳದಲ್ಲಿ ಇತ್ತೀಚಿಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆ ಇಡೀ ದೇಶ ಮಾತ್ರವಲ್ಲದೆ ಅಂತರ್‍ರಾಷ್ಟ್ರೀಯ ಗಮನವನ್ನು ಸೆಳೆದಿತ್ತು. ಈ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಭರ್ಜರಿ ಜಯ ದಾಖಲಿಸಿದೆ. ಇದು ಕಮ್ಯುನಿಸ್ಟ್ ವಿರೋಧಿ ಡಂಗುರ ಸಾರಿದ ಮಾಧ್ಯಮ ಜನರಲ್ಲಿ ಆತಂಕ ಹುಟ್ಟಿಸಿರಲಿಕ್ಕೂ ಸಾಕು. ಕಮ್ಯುನಿಸ್ಟರ ವಿರುದ್ಧ 'ಶಾಯಿ ಕಾರಿದ' ರೀಮುಗಟ್ಟಲೆ ಪೇಪರ್ ಸವೆಸಿದ ಬಂಡವಾಳಶಾಹಿ ಪರ 'ಪೆನ್' ಸೂತ್ರಧಾರಿಗಳು ಮುಟ್ಟಿ ನೋಡಿಕೊಳ್ಳುವಂಥದ್ದಾಗಿದೆ ಈ ಚುನಾವಣೆ ಫಲಿತಾಂಶ.

ವಿಶೇಷವಾಗಿ ಆರ್.ಎಸ್.ಎಸ್. ಕೃಪಾಪೋಷಿತ ಪತ್ರಕರ್ತರ ವಿಚಾರದಲ್ಲಿ ಈ ವಿಚಾರ ತುಂಬಾ ದಿಟ.

ಕೇಸರಿ ಬಳಗದ ಎಂಜಲು ಕಾಸಿಗೆ ಪವಿತ್ರ ಲೇಖನಿ ಮಾರಿಕೊಂಡವರ ಪೈಕಿ ಕೆಲವರು ಮುದಿಯರಾದರೂ ತಮ್ಮ ಹಳೆ ಚಾಳಿಯನ್ನು ಬಿಡದೆ ಈ ವಯಸ್ಸಿನಲ್ಲೂ ತಮ್ಮ ಬೆನ್ನು ಹುರಿಗಳನ್ನು ವಕ್ರಗೊಳಿಸಿ ಜನಪರ ರಾಜಕಾರಣದ ಮೇಲೆ ವಿಷಕಾರಿದರು, ಸುಳ್ಳಿನ ಕಂತೆಗಳನ್ನೇ ಹೆಣೆದರು.

ಇದಕ್ಕೊಂದು ಒಳ್ಳೆಯ ಉದಾಹರಣೆ ಟಿ.ವಿ.ಆರ್. ಶೆಣೈ ಅವರ ರಿಡಿಫ್.ಕಾಂ. ನಲ್ಲಿನ ಅಂಕಣಬರಹ (ಮೇ 16).

ಬಹುತೇಕ ರಾಷ್ಟ್ರೀಯ ದಿನಪತ್ರಿಕೆಗಳು ಈ ಚುನಾವಣೆಗಳ ಬಗ್ಗೆ ಸಂಪಾದಕೀಯ ಬರೆದು ಪ್ರತಿಕ್ರಿಯಿಸಿದವು. (ಇದನ್ನು ಪ್ರತಿಕ್ರಿಯೆ ಎನ್ನುವುದಕ್ಕಿಂತ ಸಿಪಿಐ(ಎಂ) ವಿರೋಧಿ ಟೀಕಾಪ್ರಹಾರ ಎಂದು ಓದಿಕೊಳ್ಳಿ) ಪತ್ರಿಕೆಗಳಲ್ಲಿ 'ದ ಹಿಂದೂ' ಹೊರತುಪಡಿಸಿ ಉಳಿದೆಲ್ಲವೂ ಆಯ್ದು ಪದಪುಂಜಗಳನ್ನು ಬಳಸಿ ಸಿಪಿಐ(ಎಂ)ನ 'ಭಯೋತ್ಪಾದನೆಯ ಆಡಳಿತ'ವನ್ನು ಖಂಡಿಸಿದವು. ('ದ ಹಿಂದೂ' ಮಾತ್ರ ಎಡರಂಗಕ್ಕೆ ವಿಶ್ವಾಸಾರ್ಹ ಪರ್ಯಾಯ ಕಟ್ಟಲು ಮಮತಾ ಬ್ಯಾನರ್ಜಿ ಏನು ಮಾಡಬಹುದು ಎಂಬ ಬಗ್ಗೆ ಸಲಹೆ ಮಾಡಿತು)

"ಸಿಪಿಐ(ಎಂ) ಭಯೋತ್ಪಾದನೆ ನಡೆಸಿದ್ದಿಲ್ಲವಾದರೆ ಚುನಾವಣೆಯಲ್ಲಿ ಗೆಲ್ಲಲು ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ ಎನ್ನುವುದು ಪತ್ರಿಕಾ ಪಂಡಿತರ ಅಂದಾಜು".

ಆದರೆ ಒಂದು ಕ್ಷಣ ತಡೆಯಿರಿ. ತಾನು 'ಸ್ವಯಂಸೇವಕ' ಎಂದೇ ಘೋಷಿಸಿಕೊಂಡಿರುವ ಪ್ರಧಾನಿ ಎ.ಬಿ. ವಾಜಪೇಯಿ ಅವರೇನೂ ಸಿಪಿಐ(ಎಂ) ಮಿತ್ರರಲ್ಲ ಆದರೆ ಅವರು ಸಿಪಿಐ(ಎಂ) ಚುನಾವಣೆಯಲ್ಲಿ ಗೆಲ್ಲುವುದು ನಿಶ್ಚಿತವಾಗಿರುವಾಗ ಹಿಂಸೆಗೆ ಏಕೆ ಎರಗುತ್ತದೆಯೋ ಗೊತ್ತಿಲ್ಲ ಎಂದು ಹೇಳಿದ್ದರು. ಇದು ಕೂಡ ಅರ್ಥವಿಲ್ಲದ ತರ್ಕವೇ ಆಗಿದೆ.

ಪಶ್ಚಿಮ ಬಂಗಾಳದಲ್ಲಿನ ಕಟ್ಟಾ ಕಮ್ಯುನಿಸ್ಟ್ ವಿರೋಧಿ ಪತ್ರಿಕಾ ಬಳಗ 'ಆನಂದ ಬಜಾರ್ ಪತ್ರಿಕಾ' ಸಮೂಹ. ಈ ಬಳಗದ ಇಂಗ್ಲಿಷ್ ದೈನಿಕ 'ದ ಟೆಲಿಗ್ರಾಫ್' ಅದು ತನ್ನ ಮೇ15ರ ಸಂಪಾದಕೀಯದಲ್ಲಿ ಪ್ರಧಾನಿಯ ಹೇಳಿಕೆಯನ್ನು ಅನುಮೋದಿಸಿತು. ಆದರೆ ಪ್ರಧಾನಿ ಎದುರಿಸಿದ ಗೊಂದಲಕ್ಕೆ ಉತ್ತರ ನೀಡಲು ಅದು ವಿಫಲವಾಯಿತು. ಬದಲಿಗೆ ಸಿಪಿಐ(ಎಂ)ನ 'ಭಯೋತ್ಪಾದನೆ ಮೈತ್ರಿಕೂಟ'ದ ಬಗ್ಗೆ ಊಹಾಪೋಹದ ಸುದ್ದಿಗಳನ್ನು ಪ್ರಕಟಿಸಿತು.

'ದ ಪಯನೀರ್' ಇದು ಬಿಜೆಪಿಯ ಅನಧಿಕೃತ ಮುಖವಾಣಿ. ಇದು ಕಮ್ಯುನಿಸ್ಟ್ ವಿರೋಧಿ ಪ್ರಚಾರದಲ್ಲಿ ಹಿಂದುಳಿಯಲು ಸಾಧ್ಯವೇ ಇಲ್ಲ ಅಲ್ಲವೇ? ಅದು ತನ್ನ ಮೇ 14ರ ಸಂಪಾದಕೀಯದಲ್ಲಿ 'ರಕ್ತ ಸಿಕ್ತ', 'ಬರ್ಬರ' "ಆದಿಕಾಲದ ಬರ್ಬರತೆಗೆ ಹಾದಿ ಮಾಡಿಕೊಟ್ಟ ವೈಜ್ಞಾನಿಕ



ರಿಗ್ಗಿಂಗ್ ಎಂಬಿತ್ಯಾದಿ ಉದ್ರೇಕಕಾರಿ ಪದಗಳನ್ನು ಬಳಸಿತು 'ದ ಸ್ಟೇಟ್ಸ್‌ಮನ್' ಮೇ 16ರ ಸಂಪಾದಕೀಯದಲ್ಲಿ ಈ ಚುನಾವಣೆ 'ಮತದಾರರ ಮೇಲೆ ಹೇರಿದ ರಕ್ತಪೂರಿತ ಹುಸಿ ಕ್ರಮ' ಎಂಬ ವಟಗುಟ್ಟಿತು.

ವ್ಯಾಪಕ ಹಿಂಸಾಚಾರದಿಂದಾಗಿ ಈ ಚುನಾವಣೆಗೆ ನ್ಯಾಯಸಮ್ಮತ ಸಿಂಧುತ್ವ ಇಲ್ಲ' ಎಂದು 'ಹಿಂದೂಸ್ತಾನ್ ಟೈಮ್ಸ್' ಮೇ 16 ರಂದು ವ್ಯಾಖ್ಯಾನಿಸಿತು.'! "ಸಿಪಿಐ(ಎಂ) ಅನ್ನು ಇನ್ನು ಮುಂದೆ ಒಂದು ರಾಜಕೀಯ ಪಕ್ಷವಾಗಿ ಪರಿಗಣಿಸಲು ಸಾಧ್ಯವಿಲ್ಲ" ಎಂದು ಅದು ಫರ್ಮಾನು ಹೊರಡಿಸಿತು.

ಆಶ್ಚರ್ಯದ ಸಂಗತಿಯಲ್ಲ!

ಪಶ್ಚಿಮ ಬಂಗಾಳದ ಚುನಾವಣೆ ವಿಚಾರದಲ್ಲಿ 'ಭಯೋತ್ಪಾದನೆ' ಇತ್ಯಾದಿ ಪದಗಳನ್ನು ಬಳಸುತ್ತಿರುವ ಮಾಧ್ಯಮಗಳು ಗುಜ... ಸರಕಾರ ಕೃಪಾಪೋಷಿತ, ಆರ್.ಎಸ್... ನೇತೃತ್ವದಲ್ಲಿ ಕೋಮುವಾದಿ ದಾವಾನಲ ... ಸಾವಿರಾರು ಜನರನ್ನು ಜೀವಂತ ಬೂದಿ... ದಾಗ ಈ ರೀತಿ ಬರೆಯದಿದ್ದುದು ಆ... ವಿಚಾರವೇನೂ ಅಲ್ಲ. ಮಾನವ ಹತ್ಯಾ... ಹಿನ್ನಲೆಯಲ್ಲಿ ಗುಜರಾತಿನಲ್ಲಿ ನಡೆದ ... ಯಲ್ಲಿ ಬಿಜೆಪಿ ಗಳಿಸಿದ ಗೆಲವು ಪ್ರಜಾ... ಪ್ರಕ್ರಿಯೆಯ ವಿಜಯ' ಎಂದು ... ಬೋಧಿಸಲಾಯಿತು. ಮಾ... ಮೂಲಕ!

ಇರಲಿ, ಸಂಪಾ... ಕಾಲಂಗಳು ಹಾಗೂ ಸುದ್ದಿ... ಮೂಲಕ, ಸಿಪಿಐ(ಎಂ) ಹ... ಭಯೋತ್ಪಾದನೆ ಬಗ್ಗೆ ... ಪುಂಖಾನು ಪುಂ... ಬರೆದಿದ್ದರಿಂದ ಒಂದಂ... ಅನುಮಾನಕ್ಕೆಡೆಯಿ... ಸಾಬೀತಾಗುತ್ತದೆ. ಭಾ... ಆಳುವ ವರ್ಗಗಳು ಮ... ಕೋಮುವಾದದ ... ಕಾರುತ್ತಿರುವ ಅವರ ಪ್ರ... ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ... ಎಡ ರಂಗವನ್ನು ಸೋಲಿಸುವ ... ಅವಕಾಶವನ್ನು ಕಳೆದುಕೊಂಡಿವೆ ಎನ... ವಾಸ್ತವಾಂಶ.

ಕಮ್ಯುನಿಸ್ಟ್ ವಿರೋಧಿ ಅಪಪ್ರ... ನಡೆಸಿದ ಮಾಧ್ಯಮಗಳ ವಿಚಾರದ... ಕಾರ್ಲ್‌ಮಾರ್ಕ್ಸ್ ಅವರ ಒಂದು... ವಾಕ್ಯವನ್ನು ಸ್ವಲ್ಪ ಬದಲಾಯಿಸಿ ಹ... ಬಹುಶಃ ಸೂಕ್ತ ಅನಿಸುತ್ತದೆ.

"ಜಗತ್ತಿನ ಗುಲಾಮಿ ಲೇಖಕರೇ... ನೀವು ಆತ್ಮಸಾಕ್ಷಿಯಲ್ಲದೆ ಬೇ... ಕಳೆದುಕೊಳ್ಳಲಾರಿರಿ. ಪೊಳ್ಳುತನದ ಇ... ನಿಮಗಾಗಿದೆ ಹಾಗೂ ಸರ್ವಾಧಿಕಾರ... ನಿಮ್ಮದಾಗಲಿದೆ.

ಆಧಾರ: ಸೀತಾರಾಂ ಯೆಚೂ...

....ಉತ್ತರ ಪ್ರದೇಶ ಘಟನೆಗಳು

ಪುಟ 5 ರಿಂದ


ಸಮಾನ ದೂರದಲ್ಲಿರಬೇಕು, ಕಾಂಗ್ರೆಸ್‌ನೊಂದಿಗೆ ಯಾವುದೇ ಸಂಬಂಧವಿರಬಾರದು ಎನ್ನುತ್ತಿವೆ.

ಈ ವಿಷಯದಲ್ಲಿ ಸಿಪಿಐ(ಎಂ) ನಿಲುವು ಸ್ಪಷ್ಟ ಕಾಂಗ್ರೆಸ್ ಪಕ್ಷವೂ ಬಿಜೆಪಿ ಯಂತೆಯೇ ಒಂದು ಬಂಡವಾಳಶಾಹಿ ಭೂಮಾಲಿಕ ಪಕ್ಷವೆಂಬುದನ್ನು ನಾವು ಗುರುತಿಸುತ್ತೇವೆ. ಆದರೂ ಅವೆರಡನ್ನು ಒಂದೇ ತಕ್ಕಡಿಯಲ್ಲಿ ತೂಗಲು ಸಾಧ್ಯವಿಲ್ಲ. ಬಿಜೆಪಿ ಅತ್ಯಂತ ಕೋಮುವಾದಿ ಪಕ್ಷವಾಗಿದ್ದರೆ, ಕಾಂಗ್ರೆಸ್ ಒಟ್ಟಾರೆಯಾಗಿ ಧರ್ಮನಿರಪೇಕ್ಷ ಪಕ್ಷ ನಿಜ. ಆಗಾಗ ಒಂದು ರಾಜಿಮಾಡಿಕೊಳ್ಳುತ್ತದೆ. ಚಂಚಲತೆ ತೋರಿಸುತ್ತದೆ. ಆದರೆ ಇದನ್ನು ರಾಜಕೀಯ ಮತ್ತು ಸೈದ್ಧಾಂತಿಕ ಹೋರಾಟಗಳ ಮೂಲಕ ಎದುರಿಸಬೇಕಷ್ಟೆ. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಒಂದು ಎಂದು ಹೇಳಲು ಸಾಧ್ಯವಿಲ್ಲ.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಕಾಂಗ್ರೆಸ್‌ನೊಂದಿಗೆ ಒಂದು ಮೈತ್ರಿ ಅಥವಾ ಕಾರ್ಯಕ್ರಮಾತ್ಮಕ ರಂಗದ ಪ್ರಶ್ನೆಯೇ ಇಲ್ಲ. ಈಗಿನ ಮೂರ್ತ ಸನ್ನಿವೇಶದಲ್ಲಿ ಕಾಂಗ್ರೆಸ್‌ನೊಂದಿಗೆ ನಾವು ಹೊಂದಬಹುದಾದ ತಿಳುವಳಿಕೆ ಒಂದು ಸೀಮಿತವಾದ ಆದರೆ ಅತ್ಯಂತ ಮುಖ್ಯವಾದ ಒಂದು ವಿಷಯದ ಮೇಲಷ್ಟೇ- ಅದೆಂದರೆ ಬಿಜೆಪಿಯನ್ನು ಸೋಲಿಸುವುದು, ಅದನ್ನು ಅಧಿಕಾರದಿಂದ ಹೊರಹಾಕುವುದು.

ಇದು ಈಗಿನ ವಾಸ್ತವತೆಯ ಮೇಲೆ ನಿಂತಿರುವ ನಿಲುವು. ನಮಗೆ ರುಚಿಸಲಿ, ಬಿಡಲಿ, ಇಡೀ ದೇಶದಲ್ಲಿ ಎಡಶಕ್ತಿಗಳಿಗೆ ಶೇಕಡಾ 10ಕ್ಕಿಂತ ಹೆಚ್ಚಿನ ಬೆಂಬಲವಿಲ್ಲ. ಅಂದರೆ 90 ಶೇಕಡದಷ್ಟು ಭಾರತದ ಜನತೆ ಈಗಲೂ ವಿವಿಧ ಆಳುವ ಪಕ್ಷಗಳ ಸುತ್ತ ನೆರೆದಿದ್ದಾರೆ.

ನವಂಬರ್‌ನಲ್ಲಿ ಚುನಾವಣೆಗೆ ಹೋಗುವ


ಮಾಯಾವತಿ ರಾಜನಾಥ್ ಸಿಂಗ್

ರಾಜಸ್ತಾನ, ಮಧ್ಯಪ್ರದೇಶ, ಚತ್ತೀಸ್ ಗಢ್ ಮತ್ತು ದಿಲ್ಲಿಯ ವಿಷಯದಲ್ಲೂ ಇದು ನಿಜ. ಇಲ್ಲಿ ಕಾಂಗ್ರೆಸ್ ಮಾತ್ರವೇ ಬಿಜೆಪಿಯನ್ನು ಸೋಲಿಸಬಲ್ಲುದು. ಮಾರ್ಕ್ಸ್‌ವಾದಿಗಳಾಗಿ ನಾವು ಕೇವಲ ಆಕಾಂಕ್ಷೆಗಳ ಮೇಲೆ ನಿರ್ಧಾರಕ್ಕೆ ಬರುವುದಿಲ್ಲ, ಮೂರ್ತ ಪರಿಸ್ಥಿತಿಗಳನ್ನು ನಿರ್ಲಕ್ಷಿಸುವುದಿಲ್ಲ. ಇದರರ್ಥ ಇದು ನಾವು ಕಂಡರಿಸುವ ಮೂರನೇ ಪರ್ಯಾಯದಂತಿರುತ್ತದೆ ಎಂಬುದು ಖಂಡಿತಾ ಅಲ್ಲ. ಮೂರನೇ ಪರ್ಯಾಯ ಬರಬೇಕಾದರೆ ಪರ್ಯಾಯ ನೀತಿಗಳಿರಬೇಕು, ಈಗಿರುವ ಭೂಮಾಲಿಕ ಪರ, ಬಂಡವಾಳಶಾಹಿ ಪರ, ಸಾಮ್ರಾಜ್ಯಶಾಹಿ-ಪರ ನೀತಿಗಳ ಬದಲು ಜನ ಪರ ನೀತಿಗಳನ್ನು ಅನುಸರಿಸಬೇಕು ಒಟ್ಟಾರೆಯಾಗಿ ಕಾಂಗ್ರೆಸ್‌ನಿಂದ ಇದನ್ನು ನಿರೀಕ್ಷಿಸುವಂತಿಲ್ಲ.

ಅಂದರೆ ಕೋಮುವಾದಿ ಶಕ್ತಿಗಳೀಗ ರಾಷ್ಟ್ರೀಯ ಐಕ್ಯತೆಯನ್ನು ಮತ್ತು ಕೋಮು ಸಾಮರಸ್ಯವನ್ನು ರಕ್ಷಿಸುವ ಪ್ರಶ್ನೆಯೂ ಕಾಂಗ್ರೆಸ್‌ನೊಂದಿಗೆ ತಿಳುವಳಿಕೆ ಈಗಿನ ಸನ್ನಿವೇಶದಲ್ಲಿ ಹಲವು ಕಾರಣಗಳಿಂದಾಗಿ ಇದು ಅಗತ್ಯ.

ಮೊದಲನೆಯದಾಗಿ, ಬಿಜೆಪಿ ಹೇಗಾದರಾಗಲೀ ನವಂಬರ್ ಚುನಾವಣೆಗಳಲ್ಲಿ ಗೆಲ್ಲಬೇಕು, ಅದರ ತಕ್ಷಣ ಲೋಕಸಭಾ ಚುನಾವಣೆಗಳನ್ನು ನಡೆಸಬೇಕು ಎಂದು ಪ್ರಯತ್ನಿಸುತ್ತಿದೆ. ಇದನ್ನು ವಿಫಲಗೊಳಿಸಬೇಕು. ಎರಡನೆಯದಾಗಿ, ಎನ್.ಡಿ.ಎ. ನಿಜವಾಗಿಯೂ ತೀವ್ರ ಬಿಕ್ಕಟ್ಟಿನಲ್ಲಿದೆ. ಪಾಸ್ವಾನ್, ಅಜಿತ್ ಸಿಂಗ್‌ರ ನಿರ್ಗಮನ ಸಮತಾ, ಮಮತ ಮತ್ತು ಸ್ವತಃ ಬಿಜೆಪಿಯೊಳಗಿನ ಆಂತರಿಕ ಕಚ್ಚಾಟಗಳಿಂದ ಇದು ಸ್ಪಷ್ಟ ಒಂದು ಗಟ್ಟಿಯಾದ ಹೊಡೆತ ನೀಡಿದರೆ ಅದು ಕುಸಿದು ಬೀಳಬಹುದು. ಮೂರನೆಯದಾಗಿ ರಾಜಸ್ತಾನದಲ್ಲಿ ತೊಗಾಡಿಯಾ ಬಂಧನ ಸಂಘ ಪರಿವಾರದ ಈ ಪ್ರಖ್ಯಾತರೆಲ್ಲಾ ಕಾಗದದ ಹುಲಿಗಳು ಎಂಬುದನ್ನು ... ಮಾಡಿದೆ. ಎಡ ಪ್ರಜಾಪ್ರಭುತ್ವ ಶಕ್ತಿಗ... ದೃಢ ಕ್ರಮಗಳನ್ನು ಕೈಗೊಳ್ಳುವಂತೆ... ಸರಕಾರಗಳ ಮೇಲೆ ಒತ್ತಡ ತರಬೇ...

ಕೊನೆಯದಾಗಿ, ಉತ್ತರ ಪ್ರದೇಶ... ಅಜೆಂಡಾದಲ್ಲಿ ಇರುವುದರಿಂದ ರಾಜ್ಯ... ಪ್ರಭುತ್ವ ವಿಧಿ - ವಿಧಾನಗಳನ್ನು ಪ... ಎಡ-ಪ್ರಜಾಪ್ರಭುತ್ವ ಶಕ್ತಿಗಳು ಮಾಡಬೇ... ಮತಗಳಿಸಲು ಮತ್ತೆ ಅಯೋಧ್ಯೆ ... ದುರುಪಯೋಗ ಪಡಿಸಿ ಪರಿ... ಕೋಮುಗಲಭೆಗಳು ... ಮುಂದಾಗುತ್ತಿರುವುದರಿಂದ ಆರ್.ಎಸ್.ಎಸ್. ಈಗಾಗ... ಸಂಘಟನೆಗಳನ್ನು ಚುರುಕುಗೊಳಿಸ... ಸರ್ವಶಕ್ತಿಯನ್ನು ಬಳಸಿ ... ವಿಫಲಗೊಳಿಸಬೇಕು. ಇಂತಹ ಭಾ... ಪ್ರಯತ್ನಗಳ ಸಂದರ್ಭದಲ್ಲಿ ಬಿಜೆ... ಪಕ್ಷಗಳು ಹೇಗೆ ಪ್ರತಿಕ್ರಿಯಿಸ... ರಾಷ್ಟ್ರ-ವಿರೋಧಿ, ಪ್ರಜಾಪ್ರಭುತ್ವ... ಹೋರಾಟ ಎನ್.ಡಿ... ಮುಂದುವರೆಯುತ್ತವೋ ಗೊತ್ತಿಲ್ಲ. ... ಸನ್ನಿವೇಶದಲ್ಲಿ ಎಡ ಧವ... ಪ್ರಜಾಪ್ರಭುತ್ವವಾದಿ ಶಕ್ತಿಗಳ ಪಾತ್ರ ನಿ... ಯಾವುದೇ ರೀತಿಯಲ್ಲಿ ವಿಫಲವಾ... ದೇಶಕ್ಕೆ ಮತ್ತು ಈ ಶಕ್ತಿಗಳಿಗೂ ಅದು...

ಸಮುದಾಯ ಭವನ ಕಟ್ಟಿದ್ದು ದಲಿತರ ಉಪಯೋಗಕ್ಕಾಗಿ. ಆದರೆ ಕಬ್ಜಾ ಮಾಡಿದ್ದು ಮೇಲ್ಜಾತಿ ಧಣಿ. ನಮ್ಮ ಬಳಕೆಗೆ ಬಿಡಿರೆಂದು ಮನವಿ ಮಾಡಲು ಮಾತನಾಡಿಕೊಂಡ ಯುವಕರನ್ನು ಕರೆಂಟ್ ಕಂಬಕ್ಕೆ ಕಟ್ಟಿಹಾಕಿ ಅಮಾನುಷವಾಗಿ ಥಳಿಸಿರುವ ಘಟನೆ ಗಂಗಾವತಿ ತಾಲೂಕಿನಲ್ಲಿ ನಡೆದಿದೆ. ಕೃಷಿಕೂಲಿಕಾರರ ಸಂಘ ಸಿಡಿದೇಳದಿದ್ದರೆ ಈ ಹೈಟೆಕ್ ಆಡಳಿತದಲ್ಲಿ ಹೂತುಹೋದ ಘಟನೆಯಾಗುತ್ತಿತ್ತು. ಅದರ ಪ್ರತ್ಯಕ್ಷ ವರದಿಯಿಲ್ಲಿ.

ಗಂಗಾವತಿ : ದಲಿತ ಯುವಕರ ಮೇಲೆ ಧಣಿಗಳ ಹಲ್ಲೆ

ಪೇಜಾವರ ಮಠಾಧೀಶರು ಮತ್ತೊಮ್ಮೆ ಹರಿಜನ ಕೇರಿಗೆ ಪಾದಬೆಳೆಸಿ ಸುದ್ದಿ ಮಾಡಿದ್ದಾರೆ. ಭಜರಂಗಿಗಳಂತೂ ಹಿಂದುಗಳೆಲ್ಲ ಒಂದು ಎಂದು ಗರ್ಜಿಸುತ್ತಲೇ ಇದ್ದಾರೆ. ಹಿಂದು ದಲಿತರ ಮೇಲೆ ಹಿಂದು ಮೇಲ್ಜಾತಿಯವರ ದಾಳಿ ದಬ್ಬಾಳಿಕೆ ನಿಂತಿಲ್ಲ. ದಲಿತರ ಗುಡಿಸಲು ನಾಶ, ದಲಿತರಿಗೆ ಬಹಿಷ್ಕಾರ, ದಲಿತರ ಮೇಲೆ ಹಲ್ಲೆ, ದಲಿತ ಮಹಿಳೆಯರ ಮಾನಭಂಗದಂತಹ ಸುದ್ದಿಗಳು ದಿನ ಬಿಟ್ಟು ದಿನ ಎಂಬಂತೆ ವರದಿಯಾಗುತ್ತಾ ಇರುತ್ತವೆ. ಜಾತಿ ನಿಂದನೆ, ಜಾತಿ ದೌರ್ಜನ್ಯ ತಡೆಗಟ್ಟುವ ಕಾನೂನುಗಳು ಇದ್ದರೂ ಅಪರಾಧಿಗಳಿಗೆ ಶಿಕ್ಷೆಯಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಜನಪ್ರತಿನಿಧಿಗಳೇ ಭಾಗಿಯಾಗಿ ಕಾನೂನು ವ್ಯವಸ್ಥೆಯ ಗೇಲಿ ಮಾಡುತ್ತಾರೆ. ಶತಮಾನಗಳ ಯಾತನೆ ಹೀಗೆ ಮುಂದುವರೆಯುತ್ತಲೇ ಇದೆ.


ಕಂಬಕ್ಕೆ ಕಟ್ಟಿ ಹಲ್ಲೆ:- ದಲಿತರಿಗಾಗಿ ನಿರ್ಮಿಸಿದ್ದ ಸಮುದಾಯ ಭವನದಲ್ಲಿ ಭೂಮಾಲಿಕನೊಬ್ಬ ಭತ್ತ ತುಂಬಿರುವುದಕ್ಕೆ ಆಕ್ಷೇಪ ಎತ್ತಿದರೆಂಬ ಕ್ಷುಲ್ಲಕ ಕಾರಣಕ್ಕಾಗಿ ಐದು ಜನ ದಲಿತ ಯುವಕರನ್ನು ಕಂಬಕ್ಕೆ ಕಟ್ಟಿ ಹಲ್ಲೆ ನಡೆಸಿದಲ್ಲದೆ, ತಲಾ 2500 ರೂ. ದಂಡ ಕಟ್ಟಲು ಒಪ್ಪಿಕೊಂಡ ನಂತರ ಬಿಡುಗಡೆ ಮಾಡಿರುವ ಅಮಾನವೀಯ ಘಟನೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ದಲಿತರ ಕೇರಿಯಲ್ಲಿ ಮನೆಗಳಿರುವುದು ಕೇವಲ 40. ಸಣ್ಣ ಸಣ್ಣ ಮನೆಗಳಲ್ಲಿ ಮೂರು ನಾಲ್ಕು ಕುಟುಂಬಗಳು ವಾಸ ಮಾಡುತ್ತಿವೆ. ಶುಭ ಕಾರ್ಯಗಳಿಗಾಗಿ ಸಮುದಾಯ ಭವನವೊಂದನ್ನು 2 ವರ್ಷಗಳ ಹಿಂದೆ ಕಟ್ಟಲಾಗಿದೆ. ಆದರೆ ಭವನ ನಿರ್ಮಾಣವಾದ ದಿನದಿಂದ ಅದು ಗ್ರಾಮದ ಶ್ರೀಮಂತ ರೈತರ ದಾನ್ಯ ಸಂಗ್ರಹಿಸಿಡುವ ಉಗ್ರಾಣವಾಗಿ ಬಳಕೆಯಾಗುತ್ತಾ ಬಂದಿದೆ. ದಲಿತರ ದೇವಿಗೆ ಸಹಾಯ ಮಾಡುವ ಅವರ ಭರವಸೆ ಕೇರಿಯ ಹಿರಿಯರನ್ನು ಸುಮ್ಮನಾಗಿಸಿದೆ.

ರಾತ್ರಿ ಹೊತ್ತು ತಮ್ಮ ಮನೆಗಳಲ್ಲಿ ಮಲಗಿಕೊಳ್ಳಲು ಜಾಗ ಸಾಲದಿರುವುದರಿಂದ ಕೇರಿಯ ಯುವಕರು ಸಮುದಾಯ ಭವನದ ಮೇಲ್ಛಾವಣಿಯ ಮೇಲೆ ಮಲಗುತ್ತಿದ್ದರು. ಕೇರಿಯಲ್ಲಿ ನಡೆಯಲಿದ್ದ ಶುಭ ಕಾರ್ಯಕ್ಕಾಗಿ ಸಮುದಾಯ ಭವನ ದೊರೆಯದಿರುವ ಬಗ್ಗೆ ಒಂದು ರಾತ್ರಿ ಅಲ್ಲಿ ಮಲಗಲು ಹೋಗಿದ್ದ ಯುವಕರು ಪರಸ್ಪರ ಮಾತನಾಡಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಭತ್ತ ಶೇಖರಿಸಿಟ್ಟಿದ್ದ ತಿರುಮಲ್ಲಪ್ಪ ದಣಿಯನ್ನು ಕಂಡು ಸಮುದಾಯ ಭವನದಿಂದ ಭತ್ತವನ್ನು ತೆಗೆದು ಖಾಲಿ ಮಾಡಿಕೊಡುವಂತೆ ಕೇಳುವುದೆಂದು ಅಂದುಕೊಂಡಿದ್ದಾರೆ.

ಹುಡುಗರು ಮಲಗಿಕೊಳ್ಳುವಾಗ ಆಡಿದ ಮಾತುಗಳು ತಿರುಮಲ್ಲಪ್ಪನವರ ಕಿವಿಗೆ ಬಿದ್ದಾಗ ಆತನ ಪಿತ್ತ ನೆತ್ತಿಗೇರಿತು. 'ಕೇರಿಯ ಹುಡುಗರಿಗೆ ಅದೆಷ್ಟು ಸೊಕ್ಕು. ನನ್ನನ್ನು ವಿಚಾರ ಮಾಡುವಷ್ಟು ಕೊಬ್ಬು ಅವರಿಗೆ' ಎಂದು ರಾತ್ರಿ ಸಮುದಾಯ ಭವನದ ಮೇಲ್ಛಾವಣಿಯ ಮೇಲೆ ಮಲಗಿದವರು ಯಾರ್ಯಾರು ಎಂದು ವಿಚಾರಿಸಿದ್ದಾನೆ. ಹುಡುಗರ ಹೆಸರುಗಳನ್ನು ಪಟ್ಟಿ ಮಾಡಿಕೊಂಡು ಒಬ್ಬೊಬ್ಬರ ಮನೆಗೆ ಒಬ್ಬೊಬ್ಬರನ್ನು ಕಳುಹಿಸಿ ಹುಡುಗರನ್ನು ಕರೆಯಿಸಿ ಕೊಂಡಿದ್ದಾನೆ. ಹುಡುಗರ ತಂದೆತಾಯಿಯವರಿಗೆ ವಿಷಯ ಏನು, ದಣಿ ಮಕ್ಕಳನ್ನು ಏಕೆ ಕರೆಯಿಸಿದ್ದಾನೆ ಎಂಬ ವಿಷಯ ಗೊತ್ತಿಲ್ಲ. ಏನಾದರೂ ಕೂಲಿ ಕೆಲಸಕ್ಕಾಗಿ ಕರೆದಿರಬಹುದು ಎಂದು ಅವರೆಲ್ಲರೂ ಸುಮ್ಮನಾಗಿದ್ದಾರೆ. ಮಧ್ಯ ರಾತ್ರಿಯ ಹೊತ್ತಿನಲ್ಲಿ ಗ್ರಾಮದ ಹನುಮಂತ ದೇವಸ್ಥಾನದ ಎದುರು ಸೇರಿದ್ದ ಜನಜಂಗುಳಿಯ ನಡುವೆ ಹುಡುಗರ ಚೀರಾಟದ ಸದ್ದು ಕೇಳಿದಾಗಲೇ ಕೇರಿಯ ಹುಡುಗರನ್ನು ದೇವಸ್ಥಾನದ ಎದುರು ಇರುವ ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ ಸುಮಾರು 25ಕ್ಕೂ ಹೆಚ್ಚು ಮೇಲ್ಜಾತಿ ಜನ ಮನಬಂದಂತೆ ಥಳಿಸುತ್ತಿರುವ ವಿಷಯ ಕೇರಿಯ ಜನರಿಗೆ ಗೊತ್ತಾದದ್ದು.

ಭೀಮೇಶ ತಂದೆ ಫಕೀರಪ್ಪ, ಗೌರೀಶ ತಂದೆ ಹುಸೇನಪ್ಪ, ಬಸವರಾಜ ತಾಯಿ ಫಕೀರಮ್ಮ


ಹಲ್ಲೆಗೊಳಗಾದ ಯುವಕರು

ಪಾಂಡುರಂಗ ತಂದೆ ಈರಪ್ಪ, ಮತ್ತು ಹನುಮೇಶ ತಂದೆ ಫಕೀರಪ್ಪ ಎಂಬ ಐದು ಜನ ಯುವಕರನ್ನು ಅರೆಬೆತ್ತಲೆಗೊಳಿಸಿ ಹಗ್ಗಗಳಿಂದ ಚಪ್ಪಲಿಗಳಿಂದ ಹೊಡೆಯುತ್ತಿದ್ದರು. ನಮ್ಮ ಮಕ್ಕಳನ್ನು ಯಾಕೆ ಹೀಗೆ ಹೊಡೆಯುತ್ತಿದ್ದೀರಿ ಎಂದು ಅವರ ಪಾಲಕರು ಕೇಳಿದ್ದಾರೆ. ಅವರು ಭತ್ತ ಕದಿಯಲು ಬಂದದ್ದಕ್ಕಾಗಿ ಈ ಶಿಕ್ಷೆ ಎಂದು ದಣಿಯ ಕಡೆಯವರು ಹೇಳಿದಾಗ ಅವರು ಕುಸಿದು ಬಿದ್ದಿದ್ದಾರೆ. "ನಾವು ಕಳವು ಮಾಡಿಲ್ಲ, ನಮ್ಮನ್ನು ಬಿಟ್ಟುಬಿಡಿ" ಎಂದು ಹುಡುಗರು ಅಂಗಲಾಚಿ ಬೇಡಿಕೊಂಡರೂ ಘಟನೆಯನ್ನು ನೋಡುತ್ತಾ ನಿಂತ ಗ್ರಾಮಸ್ಥರು ಯಾರೂ ಅವರನ್ನು ಬಿಡಿಸಲು ಮುಂದಾಗಲಿಲ್ಲ. ಮಕ್ಕಳ ಮೈಮೇಲೆ ಗಾಯಗಳಾಗುವಷ್ಟು ಬಲವಾಗಿ ಹೊಡೆಯುತ್ತಿರುವುದನ್ನು ನೋಡಲಾಗದೆ ಅಡ್ಡ ಬಂದ ಅವರ ತಾಯಂದಿರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ತಡೆದಿದ್ದಾರೆ. ಕೊನೆಗೆ ತಲಾ 2500 ರೂ. ದಂಡ ಕಟ್ಟುವ ಷರತ್ತಿಗೆ ಒಪ್ಪಿ ಹುಡುಗರನ್ನು ಬಿಡಿಸಿಕೊಂಡಿದ್ದಾರೆ.

ಕೂಲಿಕಾರ ಸಂಘದ ಮಧ್ಯಪ್ರವೇಶ : ಮರಕುಂಬಿ ಗ್ರಾಮದಲ್ಲಿ ದಲಿತ ಯುವಕರ ಮೇಲೆ ನಡೆದ ಈ ಅಮಾನುಷ ಹಲ್ಲೆಯ ಸುದ್ದಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕ ಸಮಿತಿಗೆ ತಲುಪಿದ ತಕ್ಷಣ ಸಂಘದ ಕಾರ್ಯಕರ್ತರು ಸ್ಥಳಕ್ಕೆ ಧಾವಿಸಿದ್ದಾರೆ. ಭಯಭೀತಿಗೊಳಗಾದ ದಲಿತ ಕುಟುಂಬಗಳಿಗೆ ಧೈರ್ಯ ಹೇಳಿ ಪೋಲೀಸ್ ಠಾಣೆಗೆ ದೂರು ನೀಡಲು ವ್ಯವಸ್ಥೆ ಮಾಡಿದ್ದಾರೆ. ಅಷ್ಟರೊಳಗೆ ಆರೋಪಿ ತಿರುಮಲ್ಲಪ್ಪ ತನ್ನ ಕುಲಬಾಂಧವನಾದ ಸಂಸತ್ ಸದಸ್ಯ ಹೆಚ್.ಜಿ.ರಾಮುಲು ಗೆ ಮೊರೆ ಇಟ್ಟಿದ್ದಾನೆ. ಸಂಸತ್ ಸದಸ್ಯ ಮತ್ತು ವಿಧಾನಸಭಾ ಸದಸ್ಯ ಇಬ್ಬರು ಪರಸ್ಪರ ಸಮಾಲೋಚಿಸಿ ಪೋಲೀಸ್ ಠಾಣೆಯಿಂದ ಹಿಡಿದು ಪಬ್ಲಿಕ್ ಪ್ರಾಸಿಕ್ಯೂಟರ್‌ವರೆಗೂ ಬಂದೋಬಸ್ತ್ ಮಾಡಿಕೊಂಡಿದ್ದಾರೆ.

ಹಲ್ಲೆಗೊಳಗಾದ ಹುಡುಗರು ನಡೆದ ಘಟನೆಯನ್ನು ವಿವರವಾಗಿ ಬರೆದುಕೊಂಡು ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ ದಾಖಲು ಮಾಡಿಕೊಳ್ಳಲು ಸಬ್ ಇನ್ಸ್‌ಪೆಕ್ಟರ್ ಅಬ್ದುಲ್ ಸತ್ತಾರ್ ಒಪ್ಪಲಿಲ್ಲ. ದೂರನ್ನು ಸ್ವೀಕರಿಸದಿದ್ದರೆ ನಾವು ಇಲ್ಲಿಂದ ಕದಲುವುದಿಲ್ಲ ಎಂದು ಕೂಲಿಕಾರ ಸಂಘದ ಮುಖಂಡರು ಪಟ್ಟು ಹಿಡಿದಾಗ, ಸಬ್‌ಇನ್ಸ್‌ಪೆಕ್ಟರ್ ಅಲ್ಲಿ - ಇಲ್ಲಿ ಫೋನ್ ಮಾಡಿ ಕೊನೆಗೆ ತಾನು ಹೇಳುವ ರೀತಿಯಲ್ಲಿ ದೂರನ್ನು ಬರೆದುಕೊಟ್ಟರೆ ಮಾತ್ರ ಸ್ವೀಕರಿಸುವುದಾಗಿ ಒತ್ತಡ ಹಾಕಿದ. ಅನಿವಾರ್ಯವಾಗಿ ಆತ ಹೇಳಿದಂತೆ ದೂರನ್ನು ಬರೆದುಕೊಟ್ಟು ಎಫ್.ಐ.ಆರ್. ಪಡೆದುಕೊಳ್ಳಲಾಯಿತು. ಆಗ ರಾತ್ರಿ ಹತ್ತು ಗಂಟೆಯಾಗಿತ್ತು.

ಆರೋಪಿಗಳಲ್ಲಿ 4 ಜನರನ್ನು ಅದೇ ರಾತ್ರಿ ಬಂಧಿಸಲಾಯಿತು. ಉಳಿದವರನ್ನು ಮರುದಿನ ವಶಕ್ಕೆ ತೆಗೆದುಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತಾದರೂ ಅವರೆಲ್ಲರೂ ಜಾಮೀನು ಪಡೆದು ಹೊರಬಂದರು. ಆಳುವ ಪಕ್ಷದ ಚುನಾಯಿತ ಪ್ರತಿನಿಧಿಗಳ ಬಾಹುಗಳು ನ್ಯಾಯಾಲಯದವರೆಗೂ ಹಬ್ಬಿಕೊಂಡಿವೆ ಎಂಬುದು ಗಂಗಾವತಿ ತಾಲೂಕಿನ ಹಳ್ಳಿ ಹಳ್ಳಿಗಳಲ್ಲಿ ಚರ್ಚೆಯ ವಿಷಯವಾಗಿದೆ. ದಲಿತ ದೌರ್ಜನ್ಯ ವಿರೋಧಿ ಕಾನೂನು ಇದ್ದೂ ಸತ್ತಂತಾಗಿದೆ,


ಜಿಲ್ಲಾಧಿಕಾರಿ ಭೇಟಿ : ವಿಷಯ ತಿಳಿಯುತ್ತಲೇ ಜಿಲ್ಲಾಧಿಕಾರಿ ಡಾ.ಎನ್.ನಾಗಾಂಬಿಕಾದೇವಿ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಎಸ್.ರವಿ ಅವರು ಮರಕುಂಬಿಗೆ ಭೇಟಿ ನೀಡಿ ವಿಚಾರಣೆ ನಡೆಸಿದ್ದಾರೆ. ಕಾನೂನು ಕೈಗೆ ತೆಗೆದುಕೊಂಡು ಜಾತಿ ನಿಂದನೆ, ಜಾತಿ ದೌರ್ಜನ್ಯ ಮಾಡಿದ ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ಜಾಮೀನು ದೊರೆತಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಸರಕಾರಕ್ಕೆ ಸೇರಿದ ಸಮುದಾಯ ಭವನದಲ್ಲಿ ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಭತ್ತ ತುಂಬುತ್ತಿದ್ದ ವಿಷಯ ಗೊತ್ತಿದ್ದರೂ ಅದನ್ನು ಮುಚ್ಚಿಟ್ಟಿದ್ದ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಬಿ.ಆರ್. ನೀರಲಿಗಿ ಅವರನ್ನು ಅಮಾನತ್ತುಗೊಳಿಸುವ ಭರವಸೆ ನೀಡಿದ್ದಾರೆ. ಸಮುದಾಯ ಭವನದಲ್ಲಿ ಸಂಗ್ರಹಿಸಿಡಲಾದ ಭತ್ತದ ಚೀಲಗಳನ್ನು ವಶಪಡಿಸಿಕೊಳ್ಳಲು ತಹಶೀಲ್ದಾರ ಎಸ್.ಆರ್.ಪಾಟೀಲರಿಗೆ ಆದೇಶಿಸಿದ್ದಾರೆ. ಇದೇ ಸಂದರ್ಭದಲ್ಲಿ ದೌರ್ಜನ್ಯಕ್ಕೊಳಗಾದ ಐದು ಜನ ದಲಿತ ಯುವಕರಿಗೆ ತಲಾ ಹತ್ತು ಸಾವಿರ ರೂ.ಗಳ ಪರಿಹಾರದ ಚೆಕ್‌ಗಳನ್ನು ವಿತರಿಸಿದ್ದಾರೆ. ದಲಿತರಲ್ಲಿ ಸ್ವಂತ ಮನೆ ಇಲ್ಲದವರಿಗೆ ಸರ್ಕಾರದ ಯೋಜನೆಯಲ್ಲಿ ಕನಿಷ್ಠ 40 ಮನೆಗಳನ್ನು ನಿರ್ಮಿಸಿಕೊಡಲಾಗುವುದೆಂದು, ಶೌಚಾಲಯ ನಿರ್ಮಾಣಕ್ಕೂ ಕ್ರಮ ತೆಗೆದುಕೊಳ್ಳಲಾಗುವುದೆಂದು ಡಾ.ನಾಗಾಂಬಿಕದೇವಿ ಹೇಳಿದ್ದಾರೆ.

ರಕ್ಷಣೆಗೆ ಆಗ್ರಹ : ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗ್ರಾಮದಲ್ಲಿ ಶಾಂತಿ ಸಭೆಯೊಂದನ್ನು ವ್ಯವಸ್ಥೆಗೊಳಿಸಲಾಗಿತ್ತು. ನಡೆದ ಘಟನೆಯನ್ನು ಮರೆತು ಗ್ರಾಮದಲ್ಲಿ ಎರಡೂ ಕಡೆಯವರು ಶಾಂತಿಯನ್ನು ಕಾಯ್ದುಕೊಂಡು ಹೋಗಬೇಕೆಂದು ಪೋಲೀಸ್ ಅಧಿಕಾರಿಗಳು ಮನವಿ ಮಾಡಿದರು. ಸವರ್ಣೀಯರ ಪರವಾಗಿ ಮಾತನಾಡಿದ ಗ್ರಾಮಸ್ಥರು ನಡೆದ ಘಟನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ದಲಿತರ ಪರವಾಗಿ ಸಭೆಯಲ್ಲಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಮತ್ತು ಉಪಾಧ್ಯಕ್ಷರಾದ ಬಾಳಪ್ಪ ಮಾತನಾಡುತ್ತಾ ಗ್ರಾಮದ ದಲಿತರಿಗೆ ಅವಶ್ಯಕ ರಕ್ಷಣೆ ಒದಗಿಸಬೇಕೆಂದು ಆಗ್ರಹಿಸಿದರಲ್ಲದೆ ಅಪರಾಧಿಗಳು ತಮ್ಮ ತಪ್ಪಿಗೆ ಪಶ್ಚಾತ್ತಾಪ ವ್ಯಕ್ತಪಡಿಸುವ ಮೂಲಕ ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂದು ಹೇಳಿದರು. ಗ್ರಾಮದ ದಲಿತರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತೀರ್ಮಾನದಂತೆ ನಡೆಯುವುದಾಗಿ ತಿಳಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷ ತಾಲ್ಲೂಕ್ ಸಮಿತಿಯು ಮರಕುಂಬಿ ಘಟನೆಯನ್ನು ಬಲವಾಗಿ ಖಂಡಿಸಿದೆಯಲ್ಲದೆ ತಹಶೀಲ್ದಾರರಿಗೆ ಮನವಿಯೊಂದನ್ನು ಸಲ್ಲಿಸಿ ಆಕ್ರಮಣಕ್ಕೆ ಒಳಗಾದ ದಲಿತರಿಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿದೆ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿವತಿಯಿಂದ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇವರಿಗೂ ಜಿಲ್ಲಾಧಿಕಾರಿಗಳಿಗೂ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೂ ಪ್ರತ್ಯೇಕ ಮನವಿಯನ್ನು ಸಲ್ಲಿಸಿ, ಅಪರಾಧಿಗಳು ಗ್ರಾಮದಲ್ಲಿ ಓಡಾಡುತ್ತಾ ದಲಿತರಿಗೆ ಬೆದರಿಕೆ ಹಾಕಿ ಅಪಾಯವನ್ನುಂಟು ಮಾಡುವ ಸಾಧ್ಯತೆ ಇರುವುದರಿಂದ ಅವರಿಗೆ ನೀಡಲಾದ ಜಾಮೀನನ್ನು ರದ್ದುಪಡಿಸಬೇಕೆಂದೂ, ವಶಪಡಿಸಿಕೊಳ್ಳಲಾದ ಭತ್ತವನ್ನು ಹರಾಜು ಮಾಡಿ ಆ ಹಣವನ್ನು ದಲಿತರ ಕೇರಿಯ ಅಭಿವೃದ್ಧಿಗೆ ಬಳಸಬೇಕೆಂದೂ ತಾಲ್ಲೂಕಿನ ಹೋಟೇಲುಗಳಲ್ಲಿ ಆಚರಿಸಲಾಗುತ್ತಿರುವ ಅಸ್ಪೃಶ್ಯತೆಯ ಆಚರಣೆಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಲಾಗಿದೆ. ತಾಲ್ಲೂಕಿನ ದಲಿತ ಸಂಘರ್ಷ ಸಮಿತಿಯ ಎರಡು ಬಣಗಳೂ ಮರಕುಂಬಿ ದಲಿತರಿಗೆ ತಮ್ಮ ಸೌಹಾರ್ದ ಬೆಂಬಲ ವ್ಯಕ್ತಪಡಿಸಿವೆ.

- ನಿತ್ಯಾನಂದಸ್ವಾಮಿ



ಜಿ.ಎಸ್.ಮಣಿ

ವಿಶ್ವಬ್ಯಾಂಕಿನ ವಾರ್ಷಿಕ ಸಮಾವೇಶ

ವಿಶ್ವ ಬ್ಯಾಂಕ್ ಪ್ರಥಮ ಬಾರಿಗೆ ತನ್ನ ವಾರ್ಷಿಕ ಸಮಾವೇಶವನ್ನು ಅಭಿವೃದ್ಧಿಶೀಲ ದೇಶವೊಂದರಲ್ಲಿ ನಡೆಸಿದೆ.

ಮೇ 21 ರಿಂದ 28ರವರೆಗೆ ಬೆಂಗಳೂರಿನಲ್ಲಿ ಈ ಸಮಾವೇಶ ನಡೆಯಿತು. ಉದ್ಯಮಶೀಲತೆಯನ್ನು ಬಲಪಡಿಸುವುದು, ನವೋನ್ವೇಷಣೆ ಮತ್ತು ಬೆಳವಣಿಗೆ, ಹಿಂದೆ ಉಳಿಯುತ್ತಿರುವ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಸವಾಲುಗಳು ಇತ್ಯಾದಿ ವಿಷಯಗಳ ಮೇಲೆ ಚರ್ಚೆ ನಡೆದಿರುವ ಈ ಸಮಾವೇಶದಲ್ಲಿ ಮತ್ತೆ ಆರ್ಥಿಕ ಸುಧಾರಣೆಗಳ ಬಗ್ಗೆ ಮಾತುಕತೆ ನಡೆದಿದೆ.



ಸಮಾವೇಶದಲ್ಲಿ ಕೃಷ್ಣ

ಭಾರತದಲ್ಲಿ ಆರ್ಥಿಕ ಸುಧಾರಣೆಗಳು ಸರಿಯಾದ ದಾರಿಯಲ್ಲಿ ನಡೆಯುತ್ತಿವೆ ಎಂಬ ಶಹಬಾಸ್‌ಗಿರಿಯನ್ನು ಭಾರತಕ್ಕೆ ನೀಡಲಾಯಿತು. ಇಂದು ವಿಶ್ವಬ್ಯಾಂಕ್, ಐಎಂಎಫ್ ಮತ್ತು ವಿಶ್ವ ವ್ಯಾಪಾರ ಸಂಘಟನೆಗಳ ಷರತ್ತುಗಳಿಂದಾಗಿ ದೇಶದ ಜನತೆ ಪಡುತ್ತಿರುವ ಯಾತನೆಯ ಬಗೆಗೆ ಮಾತು ಬಂದಿಲ್ಲ. ಅದು ಅವರ ಕಾಳಜಿಯೂ ಅಲ್ಲ.

ಇನ್ನೂ ಹೆಚ್ಚೆಚ್ಚಾಗಿ ವ್ಯಾಪರ ನಿರ್ಬಂಧಗಳನ್ನು ತೆಗೆದು ಹಾಕಿ ಎಂದು ವಿಶ್ವಬ್ಯಾಂಕಿನ ಮುಖ್ಯ ಅರ್ಥಶಾಸ್ತ್ರಜ್ಞ ನಿಕೋಲಸ್ ಸರ್ನ್ ಹೇಳಿದ್ದಾನೆ.

ಈಗಾಗಿರುವ ಅಧ್ವಾನಗಳು ಸಾಲದು ನಮ್ಮ ದುಡಿವ ಜನರ ಅದರಲ್ಲೂ ರೈತರ ಜೀವನ ಮೂರಾಬಟ್ಟೆಯಾಗಬೇಕೆಂದು ವಿಶ್ವಬ್ಯಾಂಕ್ ಬಯಸುವುದು ಹಗಲಿನ ಬೆಳಕಿನಷ್ಟು ಸ್ಪಷ್ಟವಲ್ಲವೆ?

ಮೋಸ ಮಾಡುವವರಿಗೆ ರಕ್ಷಣೆ

ಭಾರತೀಯ ಕಂಪನಿಗಳಿಗೆ ಮೋಸ ಮಾಡುವ ವಿದೇಶಿ ಕಂಪನಿಗಳಿಗೆ ಸರ್ಕಾರ ರಕ್ಷಣೆ ನೀಡುವ ಹುನ್ನಾರದಲ್ಲಿದೆಯಂತೆ.

ಭಾರತೀಯ ಕಂಪನಿಯೊಂದರ ಜೊತೆಗೆ ಸಹಭಾಗಿತ್ವ ಹೊಂದಿದ್ದ ವಿದೇಶೀ ಕಂಪನಿ ಸಂಬಂಧ ಕಡಿದುಕೊಂಡು ಇನ್ನೊಂದು ಭಾರತೀಯ ಕಂಪನಿಯ ಜೊತೆಗೆ ಸಹಭಾಗಿತ್ವ ಹೊಂದ ಹೊರಟರೆ ಅದಕ್ಕೆ ಹಳೆ ಭಾರತೀಯ ಕಂಪನಿಯ ಆಕ್ಷೇಪಣೆ.

ಬ್ಯಾಂಕುಗಳಿಗೆ ದುಡಿಯದ ಆಸ್ತಿ ಬಂಡವಾಳಿಗರಿಗೆ ದುಡಿಯುತ್ತವೆ

ಬ್ಯಾಂಕಿಂಗ್ ವಲಯದಲ್ಲಿ ದುಡಿಯದ ಆಸ್ತಿ ಎಂದರೆ ಕಟ್ಟುಬಾಕಿಯಾಗಿರುವ ಸಾಲ. ಈ ಸಾಲದಿಂದ ಪ್ರತಿಫಲ(ಅಂದರೆ ಬಡ್ಡಿ) ಬಾರದೇ ಇರುವುದರಿಂದ ಹೀಗೆ ಕರೆಯುತ್ತಾರೆ.

ಭಾರತೀಯ ಬ್ಯಾಂಕುಗಳಿಗೆ ಈ ದುಡಿಯದ ಆಸ್ತಿ ಬಹಳ ದೊಡ್ಡ ತಲೆನೋವು. 1991-92 ರಲ್ಲಿ ಬರೀ 37,000 ಕೋಟಿ ರೂಪಾಯಿಗಳಾಗಿದ್ದ ಈ ದುಡಿಯದ ಆಸ್ತಿ 2001-02 ರಲ್ಲಿ 1100000 ಕೋಟಿ ರೂಪಾಯಿಗಳಿಗೇರಿದೆ. ಇದರಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳದ್ದೇ 56000 ಕೋಟಿ ರೂಪಾಯಿಗಳಷ್ಟು ದುಡಿಯದ ಆಸ್ತಿ. ಈ ದುಡಿಯದ ಆಸ್ತಿಗಳ ವಿಶ್ಲೇಷಣೆ ಮಾಡಿದರೆ ದೊಡ್ಡ ಬಂಡವಾಳಿಗರದೇ ಬಹುದೊಡ್ಡ ಪಾಲು ಇರುವುದು ಕಂಡುಬರುತ್ತದೆ.

ಒಂದು ವಿಶ್ಲೇಷಣೆ ಪ್ರಕಾರ 11,000 ಖಾತೆಗಳಲ್ಲಿರುವ ಈ ದೊಡ್ಡವರ ಹೆಸರಿನಲ್ಲಿರುವ ದುಡಿಯದ ಆಸ್ತಿಯ ಮೊತ್ತ 40,000 ಕೋಟಿ ರೂಪಾಯಿಗಳಂತೆ.

ಶ್ರೀಮಂತರ ಹೆಸರಿನಲ್ಲಿ ಸಾಲವಿದ್ದರೆ ವಸೂಲಾತಿ ಸುಲಭವಾಗಬೇಕಲ್ಲವೆ ಎಂದು ನೀವು ಕೇಳಬಹುದು. ಬಡವರ ಮನೆಗಳನ್ನೇ ಜಪ್ತಿ ಮಾಡಿ ವಸೂಲಿ ಮಾಡಬಹುದಾದರೆ ಶ್ರೀಮಂತರಿಂದ ಜಪ್ತಿ ಮಾಡಲು ನಾನಾ ತರಹದ ವಸ್ತುಗಳಿವೆಯಲ್ಲವೆ? ಉದಾಹರಣೆಗೆ ಕಾರು, ಪೀಠೋಪಕರಣ ಇತ್ಯಾದಿ ಅಲ್ಲದೆ ಅವರ ಮನೆಗಳು, ಸೈಟುಗಳು ಫ್ಯಾಕ್ಟರಿಗಳು ಇತ್ಯಾದಿ, ಇತ್ಯಾದಿ.

ಆದರೆ ಈ ಕುಳಗಳಿಂದ ಏನೂ ವಸೂಲಿಯಾಗುವುದಿಲ್ಲ. ಕಂಪನಿಗಳಾದರೆ ಔದ್ಯಮಿಕ ಹಣಕಾಸು ಪುನರುಜ್ಜೀವನ ಮಂಡಳಿ (ಇದೂ ವಸೂಲಾತಿಗೆ ಸಹಾಯ ಮಾಡಬೇಕಾದ ಸಂಸ್ಥೆ- ನ್ಯಾಯಾಲಯದ ಅಧಿಕಾರವೂ ಅದಕ್ಕಿದೆ) ಡಿಆರ್‌ಟಿ (ಸಾಲ ವಸೂಲಿ ಟ್ರಿಬ್ಯೂನಲ್)ಗಳೆಲ್ಲ ಇವೆ. ಆದರೆ ಬಂಡವಾಳಿಗರು ಅವೆಲ್ಲವೂ ವೇಗದಲ್ಲಿ ಕೆಲಸ ಮಾಡದಂತೆ ಮಾಡಿಬಿಡುತ್ತಾರೆ. ಬಂಡವಾಳಿಗ-ಭೂಮಾಲಿಕರ ಸರ್ಕಾರವಾದ್ದರಿಂದ ಅದೂ ಇದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಿಲ್ಲ.

ಕಟ್ಟು ಬಾಕಿದಾರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಲು ಹೊಸ ಕಾನೂನೊಂದನ್ನು ಸರ್ಕಾರ ತಂದಿದೆ. ಆದರೂ ಈ ಕಾನೂನು ಅಷ್ಟು ವೇಗದಲ್ಲಿ ಕೆಲಸ ಮಾಡುತ್ತಿಲ್ಲ.

ಇವೆಲ್ಲದರ ಪರಿಣಾಮ? ಬ್ಯಾಂಕುಗಳ ಈ ಸಾಲ ಬ್ಯಾಂಕುಗಳಿಗೆ ಪ್ರತಿಫಲ ನೀಡದೆ ದುಡಿಯದ ಆಸ್ತಿಯಾಗಿರುತ್ತದೆ. ಅದೇ ಬಂಡವಾಳಿಗರಿಗೆ? ಇದು ಸದಾ ದುಡಿಯುವ ಅತೀ ಕಡಿಮೆ ಬೆಲೆಯ ಬಂಡವಾಳ.

ದೇಶ ರಕ್ಷಣೆ ವೈರಿಗಳ ಜವಾಬ್ದಾರಿ

ದೇಶದ ರಕ್ಷಣಾ ಇಲಾಖೆಯ ಹತ್ತಿರ ಹಲವು ರಹಸ್ಯಗಳಿರುತ್ತದೆ. ಆದ್ದರಿಂದಲೇ ಈ ಕೆಲಸದಲ್ಲಿ ವಿದೇಶಿಯರ ಪಾಲು ಇಲ್ಲದಿರುವುದು ಒಳ್ಳೆಯದು.

ಕೇಂದ್ರದ ಎನ್.ಡಿ.ಎ ಸರ್ಕಾರದ ರಕ್ಷಣಾ ಮಂತ್ರಾಲಯ ರಕ್ಷಣಾ ಇಲಾಖೆಗೆ ಪೂರೈಕೆ ಮಾಡುತ್ತಿರುವ ಖಾಸಗಿ ಕಂಪನಿಗಳಲ್ಲಿ ವಿದೇಶಿ ಪಾಲುದಾರಿಕೆ ಶೆ.49 ರಷ್ಟರವರೆಗೂ ಏರಲು ಬಿಡುವ ವಿಚಾರದಲ್ಲಿದೆಯಂತೆ. ಈಗಾಗಲೇ ಇದು ಶೆ.26 ರಷ್ಟಿದೆ. ಹೀಗೆ ಇಂತಹ ಸೂಕ್ಷ್ಮ ಕ್ಷೇತ್ರಗಳಲ್ಲಿ ವಿದೇಶಿ ಪಾಲುದಾರಿಕೆಯನ್ನು ಅನುಮತಿಸಿದರೆ ದೇಶದ ರಕ್ಷಣಾ ಪರಿಸ್ಥಿತಿ ಏನಾಗಬಹುದು?

ಅತ್ಯಂತ ದೇಶಭಕ್ತರು ತಾವೆಂದು ಎದೆ ತಟ್ಟಿಕೊಳ್ಳುವ ಬಿಜೆಪಿಗಳಿಗೆ ದೇಶದ ರಕ್ಷಣೆಯ ಕಾಳಜಿ ಎಷ್ಟಿದ್ದಿತೆಂದು ಇದರಿಂದ ಗೊತ್ತಾಗುತ್ತದಲ್ಲವೆ?

ಖಾಸಗೀಕರಣ....

ಪುಟ 7 ರಿಂದ

ಅಭಾವವಿದೆ. ಆದುದರಿಂದ ಗ್ರಾಹಕರಿಗೆ ಅನುಕೂಲವಾಗುವಂತಹ ಸ್ಪರ್ಧೆಯೇನೂ ಇಲ್ಲಿ ನಡೆಯದು. ಅಲ್ಲದೆ ಹೊಸ ಘಟಕಗಳ ಉತ್ಪಾದನಾ ವೆಚ್ಚವೂ ಹಳೆಯದವುಗಳಿಗಿಂತ ಬಹಳ ಹೆಚ್ಚು. ವಿದ್ಯುತ್ ಉತ್ಪಾದನೆ ಅಧಿಕವಾಗಿದ್ದ ಕ್ಯಾಲಿಫೋರ್ನಿಯಾದಲ್ಲೇ ಕೊಳ್ಳೆ ಹೊಡೆದ ಖಾಸಗಿ ತಿಮಿಂಗಿಲಗಳು ತೀವ್ರ ಅಭಾವವಿರುವ ನಮ್ಮ ದೇಶದಲ್ಲಿ ಏನು ಮಾಡಬಲ್ಲರು ಎಂಬುದನ್ನು ಊಹಿಸಲಾಗದು. ನಮ್ಮದೇಶದ ವಿದ್ಯುತ್ ರಂಗದಲ್ಲಿ ಖಾಸಗೀಯವರ ಪ್ರವೇಶ ಈಗಾಗಲೇ ಆಗಿದೆ. ಅಧಿಕ ಬೆಲೆಯಲ್ಲಿ ಅವರ ವಿದ್ಯುತ್ತನ್ನು ಖರೀದಿಸಿ, ಕಡಿಮೆ ಬೆಲೆಗೆ ವಿತರಕರಿಗೆ (ಸದ್ಯಕ್ಕೆ ರಾಜ್ಯ ವಿದ್ಯುತ್ ನಿಗಮಗಳು) ಮಾರುವ ಸರ್ಕಾರಗಳು ನಷ್ಟವನ್ನು ತಾವೇ ಭರಿಸುತ್ತಿವೆ.

ಜನಸಾಮಾನ್ಯರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಆಗುವ ವೆಚ್ಚವನ್ನು 'ನಷ್ಟ' ಎಂದು ಬೊಬ್ಬೆ ಹಾಕುವ ಸರ್ಕಾರಗಳು, ಖಾಸಗಿ ಖಜಾನೆಯನ್ನು ತುಂಬಿಸುವ ಕಾರ್ಯವನ್ನು ಬಹುತೇಕ ಗುಟ್ಟಾಗಿಯೇ, ಯಾವುದೇ ಮಾತಿಲ್ಲದೆ ನಡೆಸುತ್ತವೆ. ಇತ್ತ ರಾಜ್ಯದ ಖಜಾನೆಗಳು ಖಾಲಿ ಅತ್ತ ಗ್ರಾಹಕರಿಗೆ ಬೆಲೆ ಏರಿಕೆಯ ಬರೆ. ಇವೆರಡರ ನಡುವೆ ಖಾಸಗೀ ಬೊಕ್ಕಸಗಳು ತುಂಬಿ ತುಳುಕುವಷ್ಟು ಭರ್ತಿ.

ಹೊಸ ವಿದ್ಯುತ್ ನೀತಿಯ ಹಿಂದೆ ಹುದುಗಿರುವ ಹುನ್ನಾರು ಇಷ್ಟು ಮಾತ್ರ. ಗ್ರಾಮೀಣ ಪ್ರದೇಶಕ್ಕೆ ವಿದ್ಯುತ್ ಸೌಲಭ್ಯ ಕಲ್ಪಿಸುವುದಾಗಲೀ, ವಿದ್ಯುತ್ ಪೂರೈಕೆ ವೃದ್ಧಿಸುವುದಾಗಲೀ, ಕಾರ್ಯಕ್ಷಮತೆಯ ಉತ್ತಮಪಡಿಸುವಿಕೆಯಾಗಲೀ, ಬಳಕೆದಾರರ ಹಿತಾಸಕ್ತಿಗಳಾಗಲೀ ಅಷ್ಟೇಕೆ ದೇಶದ ಆರ್ಥಿಕತೆಯ ಬಗ್ಗೆ ಕಾಳಜಿಯಾಗಲೀ ಯಾವುದೂ ಇಲ್ಲ. ಲಾಭ ಮಾತ್ರ. ಅದನ್ನು ಬಿಟ್ಟು ಬೇರೇನೂ ಇಲ್ಲ.

ಕ್ಯಾಲೊಫೋರ್ನಿಯಾದ ಪಾಠವನ್ನು ನಮ್ಮ ಆಳುವ ಜನ ಕಲಿತಿಲ್ಲ. ಅನರ್ಥಕಾರೀ ಆರ್ಥಿಕ ನೀತಿಗಳು ತಂದೊಡ್ಡುವ ಅಪಾಯಗಳ ಬಗ್ಗೆ ಕಣ್ಣುಮುಚ್ಚಿಯೇ ಕೂತಿದ್ದಾರವರು

ಇದು ನಿಮಗೆ ಗೊತ್ತೆ?

ಗೋರಿಗಳ ಮೇಲೆ ನಿರ್ಮಾಣವಾದ ದೇಶ

ಅಮೆರಿಕಾವನ್ನು ಬಿಳಿಯರು ಪ್ರವೇಶಿಸಿದ ಮೊದಲ ದಿನದಿಂದಲೇ ಅನ್ಯಾಯ ಅತ್ಯಾಚಾರಗಳಿಗೆ ನಾಂದಿ ಹಾಡಿದ್ದಾರೆ. ಅಮೆರಿಕವನ್ನು ಕಂಡು ಹಿಡಿದ ಕೊಲಂಬಸ್ ಎಂದು ನಮಗೆ ಪಠ್ಯ ಪುಸ್ತಗಳಲ್ಲಿ ಓದಿಸಲಾಗಿದೆ. ಅಂದರೆ ಈಗಾಗಲೇ ಜನ ವಸತಿಯಿದ ಭೂ ಭಾಗವೊಂದನ್ನು ರೇಡಿಯೋ, ಟೀವಿ, ಟೆಲಿಫೋನ್, ವಿಮಾನ, ಉಪಗ್ರಹದಂತೆ ಹೊಸದಾಗಿ ಸೃಷ್ಟಿಸಿದ ವಸ್ತುವೆಂಬಂತೆ ನಮ್ಮ ತಲೆಗೆ ತುಂಬಲಾಗಿದೆ. ಆದರೆ ಈ ಕೊಲಂಬಸ್ ಎಂಬ ಖ್ಯಾತ(!)ಚಾಣಾಕ್ಷ ಅಮೆರಿಕದ ನೆಲಕ್ಕೆ ಕಾಲಿರಿಸಿದೊಡನೆ ಅಲ್ಲಿನ ಮೂಲ ನಿವಾಸಿಗಳಾದ ರೆಡ್ ಇಂಡಿನ್ನಯರು, ಅತಿಥಿಯನ್ನು ತಮ್ಮ ಬುಡಕಟ್ಟಿನ ಸಂಪ್ರದಾಯದಂತೆ ಆತ್ಮೀಯತೆಯಿಂದ ಸ್ವಾಗತಿಸಿದರು. ಯಥೋಚಿತವಾಗಿ ಸತ್ಕರಿಸಿದರು. ಅವರ ಮೈಮೇಲೆಲ್ಲಾ ಹೊಳೆಯುವ ಚಿನ್ನದ ಆಭರಣಗಳು. ಅದನ್ನು ಕಂಡ ಕೊಲಂಬಸ್ ಉದ್ಗರಿಸಿದ್ದು ಹೀಗೆ "ಇವರ ಮೈ ತುಂಬಾ ಚಿನ್ನದ ಆಭರಣಗಳಿವೆ. ಆದರೆ ಇವರಿಗೆ ಕಬ್ಬಿಣದ ಉಪಯೋಗ ತಿಳಿಯದೇ ಇಲ್ಲ. ಹಾಗಾಗಿ ಈ ನಾಡನ್ನು ವಶಪಡಿಸಿಕೊಳ್ಳುವುದು ಸುಲಭ". ನಂತರ ಕೊಲಂಬಸ್, ರೆಡ್ ಇಂಡಿಯನ್ನರು ಚಿನ್ನವನ್ನು ಸಂಸ್ಕರಿಸುವ ವಿವರಗಳನ್ನೆಲ್ಲ ತಿಳಿದುಕೊಂಡು ಹೊರಡಲನುವಾದನು. ಬುಡಕಟ್ಟಿನ ಪದ್ಧತಿಯಂತೆ ಅವನನ್ನು ಹಡಗಿನವರೆಗೆ ಬೀಳ್ಕೊಡಲು ಒಬ್ಬನನ್ನು ಬೆಂಗಾವಲಿಗೆ ಕಳುಹಿಸಲಾಯಿತು. ಇನ್ನೇನು ವಿದಾಯ ಹೇಳಬೇಕೆನ್ನುವಾಗ ಆತನನ್ನು ಹತ್ತಿರಕ್ಕೆ ಕರೆದ ಕೊಲಂಬಸ್ ತನ್ನ ಸೊಂಟದಲ್ಲಿದ್ದ ಕತ್ತಿಯಿಂದೆ ಅಮಾಯಕ ರೆಡ್ ಇಂಡಿಯನ್ನನನ್ನು ಇರಿದು ಕೊಂದು ಅವನ ಮೈಮೇಲಿದ್ದ ಆಭರಣಗಳನ್ನೆಲ್ಲ ದೋಚಿದ. ಇದು ತಮ್ಮನ್ನು ತಾವೇ 'ನಾಗರೀಕ' ಎಂದೂ, ಉಳಿದವರೆಲ್ಲರನ್ನೂ 'ಕಾಡು ಜನ - ಅನಾಗರಿಕ'ರೆಂದೂ ಕರೆಯುವ ಬಿಳಿಯರ ಪ್ರತಿನಿಧಿಯೊಬ್ಬ ಒಂದು ನಾಡಿನ ಅತಿಥಿಯಾಗಿ ಕಾಲಿರಿಸಿ ಮಾಡಿದ ಮೊದಲ ಘನಕಾರ್ಯ.

ನಂತರ ಹಿಂಡು ಹಿಂಡಾಗಿ, ಅಮೆರಿಕದ ಸಂಪತ್ತನ್ನು ಕೊಳ್ಳೆ ಹೊಡೆಯಲು ಬಂದ ಬಿಳಿಯರು ಅಲ್ಲಿನ ಮೂಲ ನಿವಾಸಿಗಳನ್ನು ಮಾತ್ರವಲ್ಲದೆ, ಅಕ್ಷರಶಃ ಬಲೆ ಬೀಸಿ ಪ್ರಾಣಿಗಳಂತೆ ಹಿಡಿದು ತಂದ ಆಫ್ರಿಕಾದ ಜನರನ್ನು, ಲ್ಯಾಟಿನ್ ಅಮೆರಿಕದ ಜನರನ್ನು ಅಗಾಧವಾಗಿದ್ದ ಅಲ್ಲಿನ ಖನಿಜಗಳನ್ನು ಬಗೆಯಲು ಬಳಸಿಕೊಂಡರು. ಅವರನ್ನು ಪ್ರಾಣಿಗಳಿಗಿಂತ ಕಡೆಯಾಗಿ ದುಡಿಸಿಕೊಂಡು, ಗಣಿಗಾರಿಕೆ ಮುಗಿದ ನಂತರ ಅದೇ ಗಣಿಯ ಸುರಂಗಗಳಲ್ಲಿ ಅವರನ್ನೆಲ್ಲಾ ಸ್ಫೋಟಿಸಿ ಕೊಂದರು. ಹೀಗೆ ಗಣಿಗಳಲ್ಲಿ ಇದ್ದಿಲಾದವರ ಸಂಖ್ಯೆ ಮೂರು ಕೋಟಿಗೂ ಅಧಿಕ. ಅದಕ್ಕೆಂದೇ ಖ್ಯಾತ ವಿಜ್ಞಾನಿ ಏಂಗೆಲ್ಸ್ ಹೇಳುತ್ತಾರೆ "ಅಮೆರಿಕ ಎಂಬುದು ಅಕ್ಷರಶಃ ಗೋರಿಗಳ ಮೇಲೆ ನಿರ್ಮಾಣವಾದ ದೇಶ" ಪ್ರಾಯಶಃ ಈ ಬಗ್ಗೆ ಇದಕ್ಕಿಂತ ಹೆಚ್ಚಿನ ವಿವರಣೆ ಅನಗತ್ಯ.

- ಕೃಪೆ : ಸಂಕ್ರಮಣ

ಈ ಜಗದ ಕೀಲಿ

ಬುಷ್ ಎಂಬ ಅಮಾನುಷ ವಂಚಕನ ಕೈಲಿ
ಕೊಡಬೇಕೆ ನಾವಿಂದು ಈ ಜಗದ ಕೀಲಿ?
ಈ ಕುರಿತು ಮನುಷ್ಯತ್ವ ಉಳ್ಳವರು ಕೂಡಿ
ತುರ್ತಾಗಿ ಒಂದಾಗಿ ವಿಚಾರ ಮಾಡಿ

- ವಿಡಂಬಾರಿ

ಪ್ರತಿಭಟನೆಯ ಅಲೆಯಲ್ಲಿ ಮುಳುಗಿದ ಜಿ. ಶೃಂಗಸಭೆ


ಜಿ-8 (ಎಂಟು ಪ್ರಬಲ ಅಭಿವೃದ್ಧಿ ...ಡವಾಳಶಾಹಿ ದೇಶಗಳ ಗುಂಪು) ಶೃಂಗಸಭೆ ...ರಡು ವರ್ಷಕ್ಕೊಮ್ಮೆ ಜರುಗುತ್ತದೆ. ಹಿಂದೆ ಇದು ...7 ಆಗಿದ್ದು 90 'ರ ದಶಕದಲ್ಲಿ ರಷ್ಯಾದಲ್ಲಿ ...ಡವಾಳಶಾಹಿ ಪುನಃ ಸ್ಥಾಪನೆ ಆದ ಮೇಲೆ ...ರನ್ನು ಸೇರಿಸಿಕೊಳ್ಳಬೇಕಾಯಿತು. ಈ ...ಂಗಸಭೆಯಲ್ಲಿ ಹೆಚ್ಚಾಗಿ ಈ ದೇಶಗಳು


ಶೋಷಕರ ಬೆನ್ನತ್ತಿದ ಜನತೆ

...ಳಗಿನ ಸಮಸ್ಯೆಗಳನ್ನು, ಜಗತ್ತಿನಲ್ಲಿ ತಮ್ಮ ...ತ್ರದ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ...ಸಿ ಪರಿಹರಿಸಿಕೊಳ್ಳುತ್ತಾರೆ. ಮೂರನೇ ...ತ್ತಿನ ದೇಶಗಳ ಮೇಲೆ ಅಧಿಪತ್ಯ ಮುಂದು ...ಸುವುದು ಹೇಗೆ ಎಂದು ನಿರ್ಧರಿಸುತ್ತಾರೆ. ...ರೆ ಇಡೀ ಜಗತ್ತಿನ ಬಗ್ಗೆ ತಾವು ಚಿಂತಿಸುತ್ತಿದ್ದೇವೆ ...ು ಪೋಸು ಕೊಡುತ್ತಾರೆ.

ಈ ವರ್ಷದ ಜಿ-8 ಸಭೆಯಲ್ಲಿ ನಡೆದಿದ್ದೂ ... ಆದರೆ ಈ ಬಾರಿಯ ಶೃಂಗಸಭೆಗೆ ವಿಶೇಷ ಮಹತ್ವ ಬಂದಿತ್ತು. ಇರಾಕ್ ಯುದ್ಧದ ಬಗ್ಗೆ ಜಿ-8 ಇಬ್ಭಾಗವಾಗಿತ್ತು ಅಮೇರಿಕ ಬ್ರಿಟನ್- ಇಟಲಿ ಒಂದು ಕಡೆಯಾದರೆ ಇನ್ನೊಂದು ಕಡೆ ಇತರ ದೇಶಗಳು. ಜಪಾನ್ ಹೆಚ್ಚು ಕಡಿಮೆ ತಟಸ್ಥವಾಗಿತ್ತು. ಇನ್ನೊಂದು ಮಹತ್ವವೂ ಶೃಂಗಸಭೆಗೆ ಬಂದಿತ್ತು. ಇರಾಕ್ ಯುದ್ಧದ ಮೊದಲು, ಯುದ್ಧ ಸಮಯದಲ್ಲಿ ನಡೆದ ಭಾರೀ ಸಾಮ್ರಾಜ್ಯಶಾಹಿ ಜಾಗತೀಕರಣ ವಿರೋಧಿ ಸಾಮೂಹಿಕ ಪ್ರತಿಭಟನೆಗಳ ಸರಣಿ ಮುಂದುವರೆಯುವುದೋ ಎಂದು ಎಲ್ಲರೂ ಕಾತರದಿಂದ ನೋಡುತ್ತಿದ್ದರು. ಇರಾಕ್ ಯುದ್ಧ ಮತ್ತು ಅತಿಕ್ರಮಣ ತಡೆಯಲು ಸಾಧ್ಯವಾಗದೆ ಜಿಗುಪ್ಸೆಯಿಂದ ತಣ್ಣಗಾಗಬಹುದು ಎಂದು ಕೆಲವರ ನಿರೀಕ್ಷೆಯಾಗಿತ್ತು.

ಇರಾಕ್ ಯುದ್ಧದ ಬಗೆಗಿದ್ದ ತೀವ್ರ ಬಿನ್ನಾಭಿಪ್ರಾಯಗಳನ್ನು ವಿಶ್ವಸಂಸ್ಥೆ ನಿರ್ಣಯದ ಸಮಯದಲ್ಲೇ ಪರಿಹರಿಸಿಕೊಂಡು ಆಗಿತ್ತು. ಆದರೆ ಹಿಂದಿನ ಕಹಿಯನ್ನು ಸ್ವಲ್ಪ ರಿಪೇರಿ ಮಾಡಿಕೊಳ್ಳಲು ಜಿ-8 ದೇಶಗಳ ನಾಯಕರು ಪ್ರಯತ್ನಿಸಿದರು. ಮುಖ್ಯವಾಗಿ ಫ್ರಾನ್ಸ್, ಜರ್ಮನಿ, ರಷ್ಯಾ ಈ ಪ್ರಯತ್ನ ನಡೆಸಿದವು. ಆದರೆ ಆರ್ಥಿಕ ವಿಷಯಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಮುಂದುವರೆಯಿತು. ಡಾಲರು ಕುಸಿತದಿಂದ ಯುರೋಪು, ಜಪಾನುಗಳ ಆರ್ಥಿಕಕ್ಕೆ ಆಗುತ್ತಿರುವ


ಪ್ರತಿಭಟನೆಯ ಮಹಾಪೂರ

ನಷ್ಟ, ಹಲವು ಆರ್ಥಿಕ ವಿಷಯಗಳ ಬಗ್ಗೆ ಅಮೆರಿಕ ಯುರೋಪುಗಳಿಗಿರುವ ತೀವ್ರ ಭಿನ್ನಾಭಿಪ್ರಾಯ, ಜಗತ್ತಿನ ಒಟ್ಟಾರೆ ಆರ್ಥಿಕ ಸ್ಥಗಿತತೆ ಇವೆಲ್ಲವೂ ಚರ್ಚಿತವಾದರೂ, ನಿಜವಾಗಿಯೂ ಯಾವುದೇ ನಿರ್ಧಾರಗಳು ಬರಲಿಲ್ಲ.

ಪ್ರತಿಭಟನೆಗಳ ಸರಣಿ ಹಿಂದಿನಷ್ಟೇ ದೃಡವಾಗಿ ಮುಂದುವರೆದದ್ದು ಜಿ-8 ಮುಖ್ಯ ಅಂಶಗಳಲ್ಲಿ ಒಂದು. ಬೇರೆ ಯಾವುದೇ ರೀತಿಯಲ್ಲಿ ಗಮನಾರ್ಹವಾಗಿ ಇಲ್ಲದೆ, ಪ್ರತಿಭಟನೆಗಳ ಅಲೆಯಲ್ಲಿ ಜಿ-8 ಮುಳುಗಿ ಹೋಯಿತು ಎಂದರೂ ತಪ್ಪಾಗಲಿಕ್ಕಿಲ್ಲ. ಸ್ವಿಡ್ಜರ್‌ಲ್ಯಾಂಡ್ ಫ್ರಾನ್ಸ್ ಗಡಿಯಲ್ಲಿರುವ ಎವಿಯಾನ್ ಎಂಬ ಸ್ವಿಸ್ ಪಟ್ಟಣದಲ್ಲಿ ಶೃಂಗ ಸಭೆ ನಡೆಯಿತು. ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಎವಿಯಾನ್‌ನತ್ತ ನಡೆದರು. ಅಭೂತಪೂರ್ವ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಪ್ರತಿಭಟನಾಕಾರರು ಎವಿಯಾನ್ ಕಡೆ ಹೋಗುವುದನ್ನು ತಡೆಯಲೂ ಫ್ರಾನ್ಸ್- ಜರ್ಮನಿಗಳು ಅತ್ಯಂತ ಪ್ರಜಾಸತ್ತೆ- ವಿರೋಧಿ ಕ್ರಮಗಳನ್ನು ಕೈಗೊಂಡಿದ್ದವು. ತೀವ್ರ ದಮನಚಕ್ರ


ಭಿನ್ನಾಭಿಪ್ರಾಯಗಳ ನಡುವೆಯೂ ಶೋಷಕರ ಏಕತೆ

ಹರಿಯಬಿಡಲಾಗಿತ್ತು.

ಎವಿಯಾನ್ ತಲುಪಲು ಸಾಧ್ಯವಾಗದೆ ಹತ್ತಿರದ ದೊಡ್ಡ ನಗರಗಳಾದ ಜಿನೀವಾ ಮತ್ತು ಲಾಸೋಸ್‌ನಲ್ಲೇ ಬೃಹತ್ ಪ್ರತಿಭಟನೆಗಳನ್ನು ನಡೆಸಿದರು. ಶೃಂಗಸಭೆ ನಡೆದ ಮೂರು ದಿನಗಳಲ್ಲಿ ನಡೆದ ಈ ಪ್ರತಿಭಟನೆಗಳೂ ಶಾಂತಿ ಯುತವಾಗೇ ಇದ್ದವು. ಆದರೆ ಭದ್ರತಾ ಪಡೆಗಳ ಪ್ರಚೋದನೆ- ದಮನ ಮತ್ತು ಕೆಲವು ಅರಾಜಕ ವಾದಿ ಗುಂಪುಗಳು (ಬಹುಶಃ ಇವೆಲ್ಲ ಕೆಲವು ಗೂಢಾಚಾರ ಸಂಸ್ಥೆಗಳು ನುಸುಳಿದ್ದು ಅವರ ಪ್ರಚೋದನೆಯಿಂದ ಆದುವು) ಹಿಂಸಾಚಾರದಲ್ಲಿ ತೊಡಗಿದ್ದವು. ಲಕ್ಷದಷ್ಟು ಜನ ಭಾಗವಹಿಸಿದ ಪ್ರತಿಭಟನಾ ಪ್ರದರ್ಶನಗಳು ಈ ಹಿಂಸಾಚಾರದ ವರದಿಗಳಲ್ಲಿ ಸುದ್ದಿಯಾಗದೇ ಹೋದವು. ಇರಾಕ್- ಅತಿಕ್ರಮಣ, ಜನವಿರೋಧಿ ಜಾಗತೀಕರಣದ ಬಗ್ಗೆ ಘೋಷಣೆಗಳನ್ನು ಹೊತ್ತ ಭಾರಿ ಪ್ರದರ್ಶನಗಳು ಪುನಃ ಈಗಿನ ಜಗದೇಕ ಸೂಪರ್‌ಪವರ್‌ಗೆ ಸೆಡ್ಡು ಹೊಡೆದು ನಿಂತಿರುವ ಇನ್ನೊಂದು ಸೂಪರ್‌ಪವರ್ ಜಗತ್ತಿನ ಸಾಮಾನ್ಯ ಜನತೆ ಎಂದು ಇನ್ನೊಮ್ಮೆ ಸಿದ್ಧಪಡಿಸಿತು.

ಈ ಭಾರಿ ಜಿ-8 ನಲ್ಲಿ ಇನ್ನೊಂದು ಪ್ರಹಸನ ನಡೆಯಿತು. ಜಿ-8 ದೇಶಗಳಿಗೆ ತಾವು ಜಗತ್ತಿನ ಜನತೆಯ ಆಕ್ರೋಶಕ್ಕೆ ಗುರಿಯಾಗಿರುವುದರ ಬಗ್ಗೆ ಅರಿವಿದೆ. ಅದಕ್ಕಾಗಿ ಮೂರನೇ ಜಗತ್ತಿನ 12 ದೇಶಗಳನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಚೀನಾ, ಬ್ರೇಜಿಲ್, ಭಾರತ- ಇದರಲ್ಲಿ ಪ್ರಮುಖ ದೇಶಗಳು. ಇದು ಫ್ರಾನ್ಸ್ ಅಧ್ಯಕ್ಷ ಚಿರಾಕ್ ಮುತುವರ್ಜಿ ಆಗಿತ್ತು. ಬುಶ್-ಬ್ಲೇರ್ ಗಳಿಗೆ ಇದರಲ್ಲಿ ಆಸಕ್ತಿ ಇರಲಿಲ್ಲ. ಅಲ್ಲಿ ಭಾರತದ ಪ್ರಧಾನಿ ನಿಜವಾಗಿಯೂ ಸ್ವತಂತ್ರ ಮೂರನೇ ಜಗತ್ತಿನ ದೃಷ್ಟಿಕೋನವನ್ನು ಸ್ಪಷ್ಟವಾಗಿ ಮಂಡಿಸದೆ ಹೋದರು. ಚೀನಾ, ಬ್ರೆಜಿಲ್ ಅಧ್ಯಕ್ಷರುಗಳಿಗಿದ್ದ ಮಹತ್ವ ಭಾರತದ ಪ್ರಧಾನಿಗೆ ಸಿಗಲಿಲ್ಲ ಎಂದೂ ವರದಿಗಳು ಹೇಳಿವೆ.

ಅರ್ಜೆಂಟೀನಾದಲ್ಲೂ ಜಾಗತೀಕರಣ- ವಿರೋಧಿ ಅಧ್ಯಕ್ಷರ ಆಯ್ಕೆ

ಐಎಂಎಫ್- ವಿಶ್ವಬ್ಯಾಂಕ್ ಡಬ್ಲ್ಯು.ಟಿ.ಓ ...ಲೇಟೆಸ್ಟ್ ಬಲಿಪಶು ಅರ್ಜೆಂಟಿನಾದಲ್ಲಿ ...ೀಚಿಗೆ ಅಧ್ಯಕ್ಷೀಯ ಚುನಾವಣೆಗಳು ನಡೆದವು. ...01 ರಲ್ಲಿ ತೀವ್ರ ಆರ್ಥಿಕ ಕುಸಿತದ ನಂತರ ...ವು ತಿಂಗಳ ಕಾಲ ಮಾತ್ರ ಬಂದ ಹಲವು ...ಕ್ಷೀಯ ಆಡಳಿತಗಳ ನಂತರ) ಇದು ಮೊದಲ ...ಕ್ಷೀಯ ಚುನಾವಣೆ ಈ ಅಧ್ಯಕ್ಷೀಯ ...ನಾವಣೆಗಳಲ್ಲಿ ಜಾಗತೀಕರಣವನ್ನು ...ರ್ವಜನಿಕವಾಗಿ ವಿರೋಧಿಸಿದ ಅಭ್ಯರ್ಥಿ ...ರ್ ಕಿರ್ಚನರ್ ಗೆದ್ದಿದ್ದಾರೆ. ಅವರು ಮಾಜಿ ...ಕ್ಷ ಕಾರ್ಲೋಸ್ ಮೆನೆಮ್ (ಅವರು 1989 ...ದ 1999 ರವರೆಗೆ ಅಧ್ಯಕ್ಷರಾಗಿದ್ದರು) ರನ್ನು ...ಡನೇ ಸುತ್ತಿನ ಚುನಾವಣೆಯಲ್ಲಿ ...ೀಲಿಸಿದ್ದಾರೆ. ಮೊದಲ ಸುತ್ತಿನಲ್ಲಿ ಎರಡನೇ ...ದಲ್ಲಿದ್ದ ಕಿರ್ಚನರ್, ಎರಡನೇ ಸುತ್ತಿನಲ್ಲಿ ...ರಾಳಿ ಮಾಜಿ ಅಧ್ಯಕ್ಷ ಮೆನೆಮ್ ...ವಣೆಯಿಂದ ಹಿಂತೆಗೆದದ್ದರಿಂದ ಗೆದ್ದಿದ್ದರು. ...ರೆ ಎರಡನೇ ಸುತ್ತಿನ ಚುನಾವಣೆ ನಡೆದರೂ ...ನರ್ ಶೇಕಡಾ 70 ರಷ್ಟು ಬಹುಮತದಿಂದ ...ಯಾಗುತ್ತಿದ್ದರು ಎಂದು ಕೆಲವು ಸಮೀಕ್ಷೆಗಳು ...ದ್ದವು.

...ಅಧ್ಯಕ್ಷ ಕಿರ್ಚನರ್ ಹಿಂದೆ ಅರ್ಜೆಂಟಿನಾದ ...ಲ ಆಳುವ ಪಕ್ಷವಾಗಿದ್ದ ಪೆಲೊವಿಸ್ಟ್ ಪಕ್ಷದ ...-ವಿಭಾಗದ ನಾಯಕರಾಗಿದ್ದರು. ಕಳೆದ ...ಕದಲ್ಲಿ ಅನುಸರಿಸಲಾದ ...ಎಫ್-ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ...ಗಳನ್ನು ಬದಲಾಯಿಸುವುದು, ಐಎಂಎಫ್ ...ವನ್ನು ಹಿಂದಿರುಗಿಸದಿರುವುದು, ...ರ್ಜೆಂಟಿನಾದ ಕೈಗಾರಿಕಾ, ಆರ್ಥಿಕ ...ಡಿಸುವುದು, ಅರ್ಜೆಂಟಿನಾದ ಆರ್ಥಿಕವನ್ನು ...ಷ್ಟ ಬಂಡವಾಳ-ಹೂಡಿಕೆಯಿಂದ ...ತನಗೊಳಿಸುವುದು, ಕಡಿತಗೊಂಡಿದ್ದ ..., ಆರೋಗ್ಯ ಮುಂತಾದ ಸಾಮಾಜಿಕ ಸೇವಾಕ್ಷೇತ್ರಗಳಲ್ಲಿ ಸಾರ್ವಜನಿಕ ವೆಚ್ಚ ಹೆಚ್ಚಿಸಲು ಈ ವಿಷಯಗಳ ಮೇಲೆ ಪ್ರಚಾರ ಮಾಡಿ ಕಿರ್ಚನರ್ ಚುನಾವಣೆ ಗೆದ್ದಿದ್ದಾರೆ.

ಕಿರ್ಚನರ್ ಎಡಪಂಥೀಯನೇನಲ್ಲ. ಅವರಿಗೆ ಎಡಪಂಥೀಯರ ಅಥವಾ ಪ್ರಗತಿಪರ ಚಳುವಳಿಗಳ ಬೆಂಬಲವೂ ಇರಲಿಲ್ಲ. ಮೊದಲ ಸುತ್ತಿನ ಜನಾವಣೆಯಲ್ಲಿ ಎಡಪಕ್ಷಗಳ ಅಭ್ಯರ್ಥಿ ಸ್ಪರ್ಧಿಸಿದ್ದು ಶೇಕಡಾ 7 ರಷ್ಟು ಮತಗಳಿಸಿದ್ದರು. ಕಿರ್ಚನರನ್ನು ಬ್ರೆಜಿಲ್ ಅಧ್ಯಕ್ಷ ಲುಲಾರಿಗೆ ಹೋಲಿಸಲಾಗುತ್ತಿದ್ದು, ಅದು ಅಂತಹ ಸಮಂಜಸವಲ್ಲ. ಕಿರ್ಚನರ್ ಈವರೆಗೆ ಲುಲಾ ಪ್ರತಿಪಾದಿಸಿದ . ಜಾಗತೀಕರಣ ವಿರೋಧಿ ನೀತಿಗಳನ್ನು ಪ್ರತಿಪಾದಿಸುತ್ತಿದ್ದಾರೆ. ಆದರೆ ಲುಲಾ ಹಿಂದೆ ಇರುವ ಎಲ್ಲಾ ಪ್ರಗತಿಪರ ಪ್ರಜಾಪ್ರಭುತ್ವ ಶಕ್ತಿಗಳ ಕೂಟ ಚಳುವಳಿ ಆಧಾರಿತ ಜನಬೆಂಬಲ ಕಿರ್ಚನರ್‌ಗೆ ಇಲ್ಲ. ಅವರು ಚುನಾವಣೆ ಗೆಲ್ಲುವ ತಂತ್ರವಾಗಿ ಜಾಗತೀಕರಣ- ವಿರೋಧವನ್ನು ಅಂಗೀಕರಿಸಿದ್ದರು.

ಹೊಸ ಅಧ್ಯಕ್ಷ ಕಿರ್ಚನರ್‌ನ್ನು ಬ್ರೆಜಿಲ್ ಅಧ್ಯಕ್ಷ ಲುಲಾ ಮತ್ತು ಕ್ಯೂಬಾ ಅಧ್ಯಕ್ಷ ಕ್ಯಾಸ್ಟ್ರೋ ಹಾರ್ದಿಕವಾಗಿ ಅಭಿನಂದಿಸಿದ್ದಾರೆ. ಕಿರ್ಚನರ್ ಅರ್ಜೆಂಟಿನಾದ ಜನತೆಯಲ್ಲಿ ಆಶೆಯ ಹೊಂಬೆಳಕು ಹೊತ್ತಿಸಿದ್ದಾರೆ. ಐಎಂಎಫ್‌ನ 60 ಶತಕೋಟಿ ಡಾಲರು ಸಾಲ ಮರುಪಾವತಿ, ಶೇಕಡಾ 18 ನಿರುದ್ಯೋಗ, ಅರ್ಧಕ್ಕಿಂತ ಹೆಚ್ಚು ಜನ ಬಡತನ ರೇಖೆಯ ಕೆಳಗೆ ಹೋಗಿರುವುದು- ಇವು ಕಿರ್ಚನರನ್ನು ಧುತ್ತೆಂದು ಕಾಡುತ್ತಿರುವ ಸಮಸ್ಯೆಗಳು ಕಿರ್ಚನರ್ ಆಯ್ಕೆ ದಕ್ಷಿಣ ಅಮೆರಿಕಾವನ್ನು ಜಾಗತೀಕರಣ- ವಿರೋಧಿ ನೀತಿ ಮೇಲೆ ಆಧಾರಿತ ರಾಜಕೀಯದ ಗಾಳಿ ಆವರಿಸಿದೆ. ಈವರೆಗಿನ ಪ್ರತಿ ದೇಶದ ಚುನಾವಣೆಯಲ್ಲಿ ಇಂತಹ ಅಭ್ಯರ್ಥಿಗಳ ಜಯ ಅತ್ಯಂತ ಮಹತ್ವದ ಬೆಳವಣಿಗೆ.

ಇರಾಕ್‌ನಲ್ಲಿ ಸಾಮೂಹಿಕ ವಿನಾಶ ಶಸ್ತ್ರಾಸ್ತ್ರಗಳ ಬಗ್ಗೆ ಅಮೇರಿಕ- ಬ್ರಿಟನ್ ಪಾರ್ಲಿಮೆಂಟ್ ತನಿಖೆ

ಇರಾಕ್‌ನಲ್ಲಿ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳಿವೆ ಎಂದು ಅದರ ಮೇಲೆ ಯುದ್ಧ ಸಾರಿದ್ದ, ಅಮೇರಿಕ- ಬ್ರಿಟನ್ ಸರ್ಕಾರಗಳು ಪಾರ್ಲಿಮೆಂಟಿನಲ್ಲಿ ಪ್ರತಿಪಾದಿಸಿದ್ದವು. ಅದರ ಆಧಾರದ ಮೇಲೆ ಈ ಎರಡೂ ದೇಶಗಳ ಪಾರ್ಲಿಮೆಂಟುಗಳು ಯುದ್ಧವನ್ನು ಮಂಜೂರು ಮಾಡಿ ನಿರ್ಣಯ ಪಾಸು ಮಾಡಿದ್ದವು. ಆದರೆ ಯುದ್ಧ ಮುಗಿದು ಎರಡು ತಿಂಗಳು ಆಗುತ್ತಾ ಬಂದು ಇರಾಕ್‌ನಲ್ಲಿ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳ ಸುಳಿವೇ ಇಲ್ಲದಿರುವುದು, ಈ ಸರ್ಕಾರಗಳು ಹೇಳಿದ್ದು ಹಸಿ ಸುಳ್ಳು ಎಂದು ಬಯಲುಗೊಳಿಸಿದೆ. ಈ ಎರಡು ದೇಶಗಳ ಪಾರ್ಲಿಮೆಂಟನಲ್ಲಿ ಈ ವಿಷಯ ತೀವ್ರ ಚರ್ಚೆಗೆ ಒಳಗಾಗಿದ್ದು ತನಿಖೆಗೆ ಪಾರ್ಲಿಮೆಂಟರಿ ಸಮಿತಿಗಳನ್ನು ನೇಮಿಸಲಾಗಿದೆ.

ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು ಇರಾಕ್‌ನಲ್ಲಿದ್ದವು ಎಂಬುದು ಸುಳ್ಳು ಎಂದು ಹೆಚ್ಚೆಚ್ಚು ಜನರಿಗೆ ಅರ್ಥವಾಗುತ್ತಿದ್ದಂತೆ, ಪಾರ್ಲಿಮೆಂಟ್ ಸದಸ್ಯರ ಮೇಲೆ ಈ ಬಗ್ಗೆ ತನಿಖೆ ನಡೆಸಲು ಒತ್ತಡ ಹೆಚ್ಚುತ್ತಿದೆ. ಈ ನಡುವೆ ಪಾರ್ಲಿಮೆಂಟಿಗೆ, ಜನತೆಗೆ ತೋರಿಸಲಾಗಿದ್ದ ಈ ಬಗೆಗಿನ ಗೂಢಾಚಾರ ವರದಿಗಳು ಹೇಳಿ ಮಾಡಿಸಿದ್ದು ಎಂಬ ವರದಿಗಳ ವದಂತಿಗಳು ತೀವ್ರವಾಗಿ ಹರಡಿದ್ದು ಇದಕ್ಕೆ ಕಾರಣವಾಗಿದೆ. ಯುದ್ಧದ ಸಮಯದಲ್ಲಿ ಸರ್ಕಾರದ ವಿರೋಧಿ ಮಾತನಾಡಲು ಇಷ್ಟಪಡದ ಕೆಲವು ಪತ್ರಿಕೆಗಳು ಈಗ ಬಾಯಿ ಬಿಚ್ಚುತ್ತಾ ಈ ವಿಷಯವನ್ನು ಕೈಗೆತ್ತಿಕೊಂಡಿವೆ.

ಸಂಯುಕ್ತ ಕರ್ನಾಟಕದಲ್ಲಿ 'ಚೆಡ್ಡಿ'ವೈರಸ್

ಸುಳ್ಳುಗಾರ ಸೀತಾರಾಂ ಚಿಂತಕನೋ? ವಿಚಾರಹಂತಕನೋ ?

ಮಾಧ್ಯಮ ಮಂಥನ

ಕಮ್ಯುನಿಸ್ಟರ ವಿರುದ್ಧ ಕತ್ತಿ ಮಸೆಯಲೆಂದೇ ಒಬ್ಬ ಕಟ್ಟಾಳುವನ್ನು ನೇಮಿಸಿಕೊಂಡಿದೆ ಸಂಯುಕ್ತ ಕರ್ನಾಟಕ ಪತ್ರಿಕೆ. ಆತ ಹೊದ್ದುಕೊಂಡ ಪತ್ರಕರ್ತನೆಂಬ ಕಿತ್ತುಹೋದ ಕವುದಿಯನ್ನು ಝಾಡಿಸಿದರೆ ಅದು ಚೆಡ್ಡಿ ಪಡೆಗಳ ಟಂಕಸಾಲೆಯಲ್ಲಿ ಸೃಷ್ಟಿಗೊಂಡ ಅಮೋಘ ಅಷ್ಟಾವಕ್ರ ಶಿಶುವೆಂಬುದು ಗೋಚರ. ತರ್ಕವಿಲ್ಲದ, ವಕ್ರಬುದ್ಧಿಯ ಗೋಬೆಲ್ಸ್‌ನ ಎಂಜಲಿನಲ್ಲೇ ಜೀವ ಹಿಡಿದಿರುವ ಸೀತಾರಾಂ ಎಂಬ ವಿಚಾರ ಬೇಂ(ಹಂ)ತಕನ ಮತಿಭ್ರಮಣೆಯ ಬರಹಗಳಿಗೆ ಉತ್ತರಿಸುತ್ತಾ ಹೋಗುವ ಅಗತ್ಯವೂ ಇಲ್ಲ. ಇತ್ತೀಚೆಗೆ 'ಕಮ್ಯುನಿಸ್ಟ್ ಪಕ್ಷಗಳನ್ನು ನಿಷೇಧಿಸಬಾರದೇಕೆ?' ಎಂಬ ಲೇಖನವನ್ನು ಸಂಯುಕ್ತ ಕರ್ನಾಟಕ ಪ್ರಕಟಿಸಿದೆ. ಅದಕ್ಕೆ ಉತ್ತರ ಕಳಿಸಿದರೆ ಹಾಕದ 'ಪತ್ರಿಕಾ ಸ್ವಾತಂತ್ರ್ಯ' ಅದರದ್ದು. ಹಾಗೆಯೇ ಖ್ಯಾತ ಚಿಂತಕ, ಹೊಸತು ಪತ್ರಿಕೆಯ ಸಂಪಾದಕರಾದ ಡಾ. ಜಿ.ಆರ್. ಕಳಿಸಿದ ಪತ್ರವನ್ನು ಪೂರ್ಣ ಪ್ರಕಟಿಸದೇ ಇರುವುದು ಒಂದು ಸ್ಪಷ್ಟ ನಿದರ್ಶನ. ಡಾ. ಜಿ.ಆರ್. ರವರು ಸೀತಾರಾಂ ಆಲಾಪಿಸಿದ ಕೆಲ ಅಂಶಗಳಿಗೆ ಉತ್ತರಿಸಿದ್ದಾರೆ.

ಮಾನ್ಯರೇ,

ಶ್ರೀ ಸಿ.ಸೀತಾರಾಂ ಅವರು ಕಮ್ಯುನಿಸ್ಟರ ವಿರುದ್ಧ ಸಮರ ಸಾರುತ್ತಾ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಬೇಕೆಂದು ಸೂಚಿಸಿದ್ದಾರೆ. (ಸಂಯುಕ್ತ ಕರ್ನಾಟಕ 29.5.2003) ನಮ್ಮ ದೇಶದಲ್ಲಿ ಎಷ್ಟು ಮಂದಿ ಕಮ್ಯುನಿಸ್ಟರು ಇದ್ದಾರೆ ಮತ್ತು ಎಷ್ಟು ಕಮ್ಯುನಿಸ್ಟ್ ಪಕ್ಷಗಳಿವೆ ಎಂಬ ಯಾದಿಯನ್ನು ಸಿದ್ಧಗೊಳಿಸಿ ತಮ್ಮ ಲೇಖನದ ಇಂಗ್ಲೀಷ್ ಭಾಷಾಂತರದೊಂದಿಗೆ ಅದನ್ನು ಶ್ರೀಲಾಲಕೃಷ್ಣ ಅದ್ವಾನಿಯವರಿಗೆ ಕಳಿಸಬೇಕಾಗಿದೆ. ಆ ಕೆಲಸವನ್ನು ಶ್ರೀ ಸೀತಾರಾಂ ಅವರೇ ಮಾಡಬೇಕು. ಅವರಿಗೆ ಒಳ್ಳೆಯದಾಗಲೆಂದು ಹಾರೈಸುತ್ತೇನೆ.

ಶ್ರೀಯುತರಿಗೆ ಫಾರೆಸ್ಟರ್ ಖಾಯಿಲೆ ತಟ್ಟಿದೆಯೆಂಬ ಶಂಕೆ ಮೂಡುತ್ತಿದೆ. ಅಮೇರಿಕಾದ ವಿದೇಶಾಂಗ ವ್ಯವಹಾರಗಳ ಖಾತೆಯಲ್ಲಿ ಉನ್ನತ ಸ್ಥಾನದಲ್ಲಿದ್ದ ಫಾರೆಸ್ಟರ್‌ಗೆ ಕಮ್ಯುನಿಸ್ಟರು ಎಲ್ಲೆಡೆ ಅಡಗಿದ್ದಾರೆ, ಅಮೇರಿಕಾದ ಮೇಲೆ ಅವರು ಎರಗಿಬರುತ್ತಿದ್ದಾರೆ ಎಂಬ ಮಾನಸಿಕ ತೀವ್ರತೆ ಹೆಚ್ಚಾಗಿತ್ತು. ತನ್ನ ಬಹುಮಹಡಿ ಕಟ್ಟಡದ ಕಛೇರಿಯಿಂದ ಈಭಯದಿಂದಲೇ ತತ್ತರಿಸಿ ಒಮ್ಮೆ ಜಿಗಿದುಬಿಟ್ಟ. ಸಂತೋಷದ ವಿಷಯವೆಂದರೆ ಶ್ರೀ ಸೀತಾರಾಂ ಅವರು ಬಹುಮಹಡಿ ಕಟ್ಟಡದಲ್ಲಿ ವಾಸಿಸುತ್ತಿಲ್ಲ.

ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಬೇಕೆಂಬ ಆಶಯ ಪ್ರಕಟಿಸಲು ಅಡ್ಡಿಯಿಲ್ಲ, ಏಕೆಂದರೆ ಶ್ರೀ ಸೀತಾರಾಂ ಸ್ವತಂತ್ರರು. ಆದರೆ ಆ ಸ್ವಾತಂತ್ರ್ಯವು ಅಮೇರಿಕಾದ ದುಷ್ಕೃತ್ಯಗಳನ್ನೆಲ್ಲಾ ಭಾವುಕತೆಯಿಂದ ಸಮರ್ಥಿಸುವುದಕ್ಕಾಗಿ ಬಳಕೆಯಾಗಬಾರದು ಮತ್ತು ಘಟನೆಗಳ ಬಗೆಗಿನ ಅಜ್ಞಾನದಲ್ಲಿ ಪರ್ಯವಸಾನವಾಗಬಾರದು. ದೀರ್ಘವಾದ ಪರ್ಯಾಲೋಚನೆಯಲ್ಲಿ ತೊಡಗದೆ ಕೇವಲ ಎರಡಂಶಗಳತ್ತ ಗಮನಹರಿಸುವುದು ನನ್ನ ಉದ್ದೇಶ: (ಅ) ಕಮ್ಯುನಿಸ್ಟರು ಬಿನ್ ಲಾಡೆನ್ ಆರಾಧಕರು ಮತ್ತು (ಆ) ಕಮ್ಯುನಿಸ್ಟರು ಸದ್ದಾಂ ಹುಸೇನನ ಸಮರ್ಥಕರು, ಎಂಬುದನ್ನು ಕುರಿತಂತೆ.

ಅಫ್ಘಾನಿಸ್ತಾನದಲ್ಲಿ ಕಮ್ಯುನಿಸ್ಟರ ಸರ್ಕಾರವನ್ನು ಬುಡಮೇಲು ಮಾಡಲು ಅಮೇರಿಕಾ ಬಳಸಿದ ತಂತ್ರಗಳಲ್ಲಿ ಬಿನ್ ಲಾಡೆನ್ ಸಹ ಒಂದು ಸಾಧನ. ನಜೀಬುಲ್ಲಾನನ್ನು ವಿಶ್ವಸಂಸ್ಥೆಯ ಕಟ್ಟಡದಲ್ಲಿ ಕೊಂದದ್ದು ಈ ಲಾಡೆನ್ನನ ತಾಲಿಬಾನ್ ಗೂಂಡಾಗಳು. ಅವನೊಬ್ಬ ಜಡ್ಡು ಸಂಪ್ರದಾಯದ ಮತಾಂಧ. ಕಮ್ಯುನಿಸ್ಟರೇಕೆ ಅವನ ಆರಾಧಕರಾಗುತ್ತಾರೆ? ಆಪಾದನೆ ಮಾಡುವಾಗ ಸ್ವಲ್ಪವಾದರೂ ನಂಬಿಕೆಗೆ ಆಗುವಂತಹ ಆಪಾದನೆಗಳನ್ನು ಮಾಡಲು ಶ್ರೀ ಸೀತಾರಾಂ ಕಲಿಯಬೇಕು. ಸದ್ದಾಂ ಯುವಕನಾಗಿದ್ದಾಗ 1963 ರಲ್ಲಿ ಮಿಲಿಟರಿ ಬಂಡಾಯದಿಂದ ಪ್ರಸಿದ್ಧಿಗೆ ಬಂದ, ಆಮೇಲೆ ಅಧಿಕಾರ ಪಡೆದ. ಆಗ ಅಮೇರಿಕಾದ ಅಧ್ಯಕ್ಷ ಜಾನ್ ಎಫ್, ಕೆನಿಡಿ ಆತನ ಬೇಹುಗಾರಿ ಸಂಸ್ಥೆ (ಸಿ.ಐ.ಎ.) ಇರಾಕಿನ ವಾಮಪಂಥೀಯ ಬುದ್ಧಿಜೀವಿಗಳ ದೊಡ್ಡ ಪಟ್ಟಿಯನ್ನು ಸದ್ದಾಂಗೆ ನೀಡಿತ್ತು. ಪಟ್ಟಿಯಲ್ಲಿದ್ದ ನೂರಾರು ಮಂದಿ ಸದ್ದಾಂ ಕೈಯಲ್ಲಿ ಹತರಾದರು. ಅಂಥವನನ್ನು ಕಮ್ಯುನಿಸ್ಟರು ಸಮರ್ಥಿಸುವ ಪ್ರಶ್ನೆಯೇ ಇಲ್ಲ. ಅದು ಶ್ರೀ ಸೀತಾರಾಂ ಅವರಿಗೆ ತಿಳಿಯದೆ?

ಇರಾಕಿನ ಮೇಲೆ ಆಕ್ರಮಣ ನಡೆಸಿದ ಅಮೇರಿಕಾವನ್ನು ಖಂಡಿಸಿದರೆ ಅದು ಸದ್ದಾಂ ಸಮರ್ಥನೆ ಎಂದೇಕೆ ತಿಳಿಯಬೇಕು? ಕೊಂಡಲಿಸ್ಸಾ ಕೂಡ ಹಾಗೆ ತಿಳಿಯುವುದಿಲ್ಲ, ಆದರೆ ಮಾನ್ಯ ಸೀತಾರಾಂ ಹಾಗೆ ತಿಳಿಯುತ್ತಾರೆ. ಶ್ರೀರಾಮಚಂದ್ರ ಅವರ ರಕ್ಷಣೆಗಿದ್ದಾನೆಂಬ ಭ್ರಾಂತಿ ಅವರದಾಗಿರಬೇಕು. ಸುಳ್ಳು ಆಪಾದನೆಗಳಿಗೆ ಮನ್ನಣೆ ನೀಡಿದ ಅವನು ಇವರ ಸುಳ್ಳು ಆಪಾದನೆಗಳನ್ನು ಕೇಳಿ ತಲೆದೂಗುತ್ತಾನೆಯೇ?

■ **ಜಿ.ರಾಮಕೃಷ್ಣ**, ಬೆಂಗಳೂರು

...ಪಂಚಾಯತ ನೌಕರರ ಹೋರಾಟ

ಪುಟ 4 ರಿಂದ

ಜಾರಿಗೊಳಿಸಲು ಸರ್ಕಾರ ಒಪ್ಪಿಗೆ ನೀಡಿ. ಅತಿಮುಖ್ಯವಾದ ನೌಕರ ಸೇವಾ ಭದ್ರತೆಗೆ ಭದ್ರತೆಗೆ ಅಗತ್ಯವಾಗಿದ್ದ ಸೇವಾನಿಯಮ 4 ಯನ್ನು ಜಾರಿಗೊಳಿಸುವುದು. ಈ ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಂಡು ಆದೇಶ ಹೊರಡಿಸಲಿದೆ.

ಈ ಹೋರಾಟದಿಂದ ಸಮಸ್ಯೆಗಳಲ್ಲಿ ಪರಿಹಾರವಾದಂತಲ್ಲ, ಪಂಚಾಯತಿ ನೌಕರರು ಪಂಚಾಯತಿ ವ್ಯಾಪ್ತಿಯಲ್ಲಿ ಸಂಘ ಬಲಪಡಿಸಬೇಕಾಗಿದೆಯೆಂದು ಈ ಹೋರಾಟದ ನೇತೃತ್ವ ವಹಿಸಿದ ಅಧ್ಯಕ್ಷರಾದ ಮಾರುತಿಮಾನ್ಪಡೆ ಕರೆ ನೀಡಿದರು. ಸಂಘದ ಪ್ರಧಾನಕಾರ್ಯದರ್ಶಿ ವಿ.ಪಿ. ಕುಲಕರ್ಣಿಯವರು ನೌಕರರ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿ ಸರ್ಕಾರ ಗ್ರಾಮಾಭಿವೃದ್ಧಿಗಾಗಿ ಲಕ್ಷಗಟ್ಟಲೆ ಹಣಖರ್ಚುಮಾಡುತ್ತಿದೆ. ನೌಕರರಿಗೆ ಮಾತ್ರ ಸಂಬಳ ಸಿಗುವಂತೆ ಪ್ರಯತ್ನ ಮಾಡುತ್ತಿಲ್ಲವೆಂದೂ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಆರಂಭದಲ್ಲಿ ರ್‍ಯಾಲಿಯನ್ನು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ಅರಳಹಳ್ಳಿ ಸ್ವಾಗತಿಸಿದರು. ಈ ರ್‍ಯಾಲಿಯನ್ನು ಬೆಂಬಲಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಪಂಚಾಯತಿ ನೌಕರ ಮುಖಂಡರಾದ ವಿಜಾಪುರದ ಬೀಮಸಿಕಲಾದಗಿ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನಕಾರ್ಯದರ್ಶಿ, ಜಿ.ಸಿ. ಬಯ್ಯಾರೆಡ್ಡಿ, ಮಾಜಿ ಶಾಸಕರು, ಸಿ.ಪಿ.ಐ.(ಎಂ) ಮುಖಂಡರು ಆದ ಜಿ.ವಿ. ಶ್ರೀರಾಮರೆಡ್ಡಿ, ಕರ್ನಾಟಕ ಕೃಷಿ ಕೂಲಿಗಾರ ಸಂಘದ ಮುಖಂಡರಾದ ನಿತ್ಯಾನಂದ ಸ್ವಾಮಿ, ಅಂಗನವಾಡಿ ನೌಕರರ ಸಂಘದ ಪ್ರಧಾನಕಾರ್ಯದರ್ಶಿ ವರಲಕ್ಷ್ಮಿ ಹೋರಾಟಬೆಂಬಲಿಸಿ ಮಾತನಾಡಿದರು.



■ **ಗೋಪಾಲಕೃಷ್ಣ ಅರಳಹಳ್ಳಿ.**

ಅಂಕಿ ಸಂಖ್ಯೆ

ಸರಾಸರಿ ಭಾರತೀಯನಿಗೆ ಕ... ಅಗತ್ಯ ಆಹಾರ ಸಿಗುತ್ತಿಲ್ಲ...

ಇಂಡಿಯಾದಲ್ಲಿ ಹಸಿವು, ಬಡ... ಹೆಚ್ಚುತ್ತಿರುವುದು ಎಲ್ಲರಿಗೂ ಕಾಣುವ ... ಆದರೆ ಸರ್ಕಾರಿ ಮತ್ತು ಆಳುವ ವ... ಪಂಡಿತರು ಮಾತ್ರ ಇದನ್ನು ಅಲ್ಲಗಳೆ... ವಿತಂಡವಾದ ಹೂಡುತ್ತಾರೆ. ಮಾನ... ಬದುಕಲು ಅಗತ್ಯವಾದ ಕನಿಷ್ಟ ಪ... ಆಹಾರವನ್ನು ಕ್ಯಾಲೋರಿ ಎಂಬ ಮಾಪಕ... ಅಳೆಯಲಾಗುತ್ತದೆ. ವಯಸ್ಸು, ಲಿಂಗ, ... ಪ್ರದೇಶ ಇತ್ಯಾದಿಗಳ ಆಧಾರದ ಮೇಲೆ ... ಇಷ್ಟು ಎಂದು ನಿರ್ಧರಿಸಲಾಗು... ಪ್ರತಿಯೊಂದು ಆಹಾರ (ಅಕ್ಕಿ, ಬೇಳೆ, ... ಇತ್ಯಾದಿಗಳಲ್ಲಿ ಎಷ್ಟು ಕ್ಯಾಲೋರಿ ... ಇರುತ್ತದೆ ಎಂಬುದನ್ನು ಲೆಕ್ಕ ಹಾಕಬಹು... ಒಬ್ಬ ಮನುಷ್ಯ ಯಾವ ಯಾವ ಆಹಾ... ಎಷ್ಟು ಸೇವಿಸುತ್ತಾನೆ ಎಂಬ ಆಧಾರದ ... ಆತನಿಗೆ ಎಷ್ಟು ಕ್ಯಾಲೋರಿ ಸಿಗುತ್ತದೆ ... ಲೆಕ್ಕ ಹಾಕಬಹುದು. ಆಹಾರ ಮತ್ತು... ಸಂಘಟನೆ ಸರಾಸರಿ ಮನುಷ್ಯನಿಗೆ ಕನಿಷ್ಟ... 2350 ಕ್ಯಾಲೋರಿ ಬೇಕು ಎಂದು ನಿರ್ಧ... ನಮ್ಮ ಯೋಜನಾ ಆಯೋಗ ಗ್ರಾ... ಪ್ರದೇಶದಲ್ಲಿ 2400 ಕ್ಯಾಲೋರಿ ಮತ್ತು... ಪ್ರದೇಶದಲ್ಲಿ 2100 ಕ್ಯಾಲೋರಿ ಕನಿಷ್ಟ ... ಎಂದು ನಿರ್ಧರಿಸಿದೆ.

ನಮ್ಮ ಸರಾಸರಿ ಶ್ರೀಸಾಮಾನ್ಯನಿಗೆ ... ಅಗತ್ಯದ ಆಹಾರ ಸಿಗುತ್ತದೆಯೋ ... ನೋಡೋಣ. ಕಳೆದ ಎರಡು ದಶಕಗಳ... ಸಂಖ್ಯೆಗಳನ್ನು ನೋಡಿದರೆ ಉತ್ತರ ಸ್ಪಷ್ಟ...

ಕನಿಷ್ಟ ಅಗತ್ಯದ ಆಹಾರ ಸಿಗುತ್ತಿಲ್ಲ ಮಾತ್ರ... ಕಳೆದ 20 ವರ್ಷಗಳಿಂದ ತಲಾ ಕ್ಯಾಲೋ... ಬಳಕೆ ಗ್ರಾಮೀಣ ಮತ್ತು ನ... ಪ್ರದೇಶಗಳೆರಡರಲ್ಲೂ ಕಡಿಮೆಯಾಗ... ಬಂದಿದೆ.

ಭಾರತದ ಸರಾಸರಿ ನಾಗರಿಕನ ತಲಾ... ಕ್ಯಾಲೋರಿ ಬಳಕೆ (ದೈನಿಕ)

ಕ್ಯಾಲೋರಿಗಳು	72-73	83	93-94	9...
ಗ್ರಾಮೀಣ	2266	2221	2153	[illegible]
ನಗರ	2107	2089	2071	[illegible]

ಭಾರತದಂತಹ ಸಾಮಾಜಿಕವಾಗಿ ಆ... ಕಂದಕಗಳಿರುವ ದೇಶದಲ್ಲಿ ಸರಾಸರಿ ಪ... ಕಥೆ ಹೇಳುವುದಿಲ್ಲ ಎಂದು ಎಲ್ಲರಿಗೂ ಗೊ... ಕನಿಷ್ಟ ಅಗತ್ಯದ ಶೇಕಡಾ 90 ಕ್ಕಿಂತಲೂ ಕ... ಆಹಾರ ತೆಗೆದುಕೊಳ್ಳುವ ಜನಸಂಖ್ಯೆ ಪ್ರ... ಕೋಷ್ಟಕ -2 ರಲ್ಲಿದೆ.

ಕನಿಷ್ಟ ಅಗತ್ಯದ ಕ್ಯಾಲೋರಿ ಆಹಾರ... ಶೇಕಡಾ 90 ಕ್ಕಿಂತಲೂ ಕಡಿಮೆ ಬಳ... ಜನಸಂಖ್ಯೆಯ ಪ್ರಮಾಣ

ಪ್ರದೇಶ	83	93-94	99...
ಗ್ರಾಮೀಣ	40.9	42	4...
ನಗರ	52	48.8	[illegible]

ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ ಅ... ಆಹಾರ ಬಳಸುವವರ ಪ್ರಮಾ... ಏರುತ್ತಿರುವುದು ಆತಂಕಕಾರಿ. ... ಪ್ರದೇಶದಲ್ಲಿ ಇಂತಹ ದಟ್ಟದರಿದ್ರ... ಕಡಿಮೆಯಾಗುತ್ತಿದೆ. ಆದರೆ ಅವರ ಪ್ರ... ಗ್ರಾಮೀಣ ಪ್ರದೇಶಗಳಿಗಿಂತಲೂ ಹೆಚ್ಚು, ... ಅಲ್ಲ ಕಡಿಮೆಯಾಗುವ ಲಕ್ಷಣ ಮಂದವಾ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH